ಸರ್ಕಾರದ ಅಧೀನ ಕಾರ್ಯದರ್ಶಿ

ಪಿ.ಆರ್: 911 ಇಂಧನ ಇಲಾಖೆ

ಇಂಧನ ಸಚಿವಾಲಯ

ವಿಷಯ : ಮೆ॥ ವಿಜಯಲಕ್ಷ್ಮಿ ಹೈಡ್ರೋ ಪವರ್ ಪ್ರೈವೇಟ್ ಲಿಮಿಟೆಡ್ ಕಂಪನಿಗೆ 15 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯ ಹಂಚಿಕೆ ಮಾಡುವ ಬಗ್ಗೆ.

ಓದಲಾಗಿದೆ :
1. ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ: ಕೆಆರ್‌ಇಡಿ/08/VHPPL-15MW(Chitradurga)/2011/566, ದಿನಾಂಕ: 22-01/11-02-2011.
2. ದಿನಾಂಕ: 27-05-2011 ರಂದು ನಡೆದ ಹಂಚಿಕೆ ಸಮಿತಿ ಸಭೆಯ ನಡವಳಿಗಳು.
3. ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ: ಕೆಆರ್‌ಇಡಿ/08/VHPPL-15MW/2011/423, ದಿನಾಂಕ: 06/07-02-2012.

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಪತ್ರದಲ್ಲಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರು ಮೆ: ವಿಜಯಲಕ್ಷ್ಮಿ ಹೈಡ್ರೋ ಪವರ್ ಪ್ರೈವೇಟ್ ಲಿಮಿಟೆಡ್ ಇವರಿಗೆ ಚಿತ್ರದುರ್ಗ ಜಿಲ್ಲೆಯ, ದೊನೆಹಳ್ಳಿ, ಅಕ್ಕನೂರು, ಹೊನ್ನಮರಡಿ, ಗೌರಮ್ಮನಹಳ್ಳಿ ಮತ್ತು ತೋರಣಗಟ್ಟಿ ಗ್ರಾಮಗಳಲ್ಲಿ 15.00 ಮೆಗಾ ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡುವಂತೆ ಮತ್ತು ಈ ಯೋಜನೆಯಿಂದ ಉತ್ಪಾದನೆಯಾಗುವ ವಿದ್ಯುತ್‌ನ್ನು ವಿದ್ಯುತ್ ಖರೀದಿ ಒಪ್ಪಂದ ಮೂಲಕ ವಿದ್ಯುತ್ ಸರಬರಾಜು ಕಂಪನಿಗಳಿಗೆ ಮಾರಾಟ ಮಾಡುವುದಾಗಿ ಹಾಗೂ ಯೋಜನೆಯನ್ನು 2012-2013 ಮತ್ತು 2013-2014ರಲ್ಲಿ ಅನುಷ್ಠಾನಗೊಳಿಸುವುದಾಗಿ ಸರ್ಕಾರಕ್ಕೆ ಶಿಫಾರಸ್ಸು ಮಾಡಿ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ದಿನಾಂಕ: 27-05-2011ರಂದು ನಡೆದ ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಹಂಚಿಕೆ ಸಮಿತಿ ಸಭೆಯ ಮುಂದೆ ಸದರಿ ಪ್ರಸ್ತಾವನೆಯನ್ನು ಮಂಡಿಸಲಾಗಿತ್ತು. ಮ: ವಿಜಯಲಕ್ಷ್ಮಿ ಹೈಡ್ರೋ ಪವರ್ ಪ್ರೈವೇಟ್ ಲಿಮಿಟೆಡ್ ಕಂಪನಿಗೆ 15.00 ಮೆಗಾ ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ತಾತ್ಕಾಲಿಕವಾಗಿಯಾದರೂ ಸರ್ವೆ ಸಂಖ್ಯೆಗಳನ್ನು ನೀಡುವ ಷರತ್ತಿಗೊಳಪಟ್ಟು ಹಂಚಿಕೆ ಮಾಡಲು ಹಂಚಿಕೆ ಸಮಿತಿಯ ಪರಿಗಣಿಸಿರುತ್ತದೆ.

ಅದರಂತೆ ಅಭಿವೃದ್ಧಿದಾರರಿಂದ ಯೋಜನಾ ಸ್ಥಳದ ಸರ್ವೆ ಸಂಖ್ಯೆಗಳನ್ನು ಪಡೆದು ಮೇಲೆ ಓದಲಾದ ಕ್ರಮ ಸಂಖ್ಯೆ (3)ರ ಪತ್ರದೊಂದಿಗೆ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರು ಸರ್ಕಾರಕ್ಕೆ ಕಳುಹಿಸಿರುತ್ತಾರೆ. ಈ ಯೋಜನೆಗೆ ಯಾವುದೇ ಸರ್ಕಾರಿ ಅಥವಾ ಅರಣ್ಯ ಜಮೀನಿನ ಅವಶ್ಯಕತೆಯಿರುವುದಿಲ್ಲ ಮತ್ತು ಉತ್ಪಾದನೆಯಾಗುವ ವಿದ್ಯುತ್ತನ್ನು ಎಸ್ಕಾಂಗಳಿಗೆ ಮಾರಾಟ ಮಾಡುವುದಾಗಿ ತಿಳಿಸಿದ್ದು, ಹಂಚಿಕೆ ಆದೇಶವನ್ನು ನೀಡಬಹುದಾಗಿದೆಯೆಂದು ತಿಳಿಸಿರುತ್ತಾರೆ. ಆದುದರಿಂದ ಈ ಕೆಳಗಿನಂತೆ ಆದೇಶಿಸಲಾಗಿದೆ:-

ಸರ್ಕಾರಿ ಆದೇಶ ಸಂಖ್ಯೆ: ಇಎನ್ 120 ಎನ್‌ಸಿಇ 2011, ಬೆಂಗಳೂರು, ದಿನಾಂಕ: 13-03-2012

ಮೆ: ವಿಜಯಲಕ್ಷ್ಮಿ ಹೈಡ್ರೋ ಪವರ್ ಪ್ರೈವೇಟ್ ಲಿಮಿಟೆಡ್ ಕಂಪನಿಗೆ ಚಿತ್ರದುರ್ಗ ಜಿಲ್ಲೆಯ, ದೊನೆಹಳ್ಳಿ, ಅಕ್ಕನೂರು, ಹೊನ್ನಮರಡಿ, ಗೌರಮ್ಮನಹಳ್ಳಿ ಮತ್ತು ತೋರಣಗಟ್ಟಿ ಪ್ರದೇಶಗಳಲ್ಲಿ 15.00 ಮೆಗಾ ವ್ಯಾಟ್ ಪವನ ವಿದ್ಯುತ್ ಯೋಜನೆಯನ್ನು ಈ ಕೆಳಗಿನ ಶೆಡ್ಯೂಲ್‌ನಲ್ಲಿ ವಿವರಿಸಿರುವಂತೆ ಹಾಗೂ ಕೆಳಕಂಡ ನಿಬಂಧನೆಗೊಳಪಟ್ಟು ಹಂಚಿಕೆ ಮಾಡಿದೆ:-

Sl. No.	Topo Sheet No	Proposed Capacity in MW	Near by villages of the proposed area and district	Geopraphical area description of the project
1	57 B/7	15 MW (30 Nos x 500KW)	Donehalli, Akkanuru, Honnamardi, Gaurammanahalli, Toranagatti villages of Chitradurga District	Identification area is ground level plain would be having agricultural activities. The NH 13 runs diagonally in the area along with Power lines, the area is situated on the South of Donehalli and East of Torangatti has gentle elevation varying from 640 to 680 Mt.,. Further, it has water body and a stream runs across is called as Janagahalli and held in the following Geographical co-ordinates: Latitude: 14°46'07"- 13°50'10"- N Longitude: 77°10'51"- 77°15'0"-E Ridge peaks: 672,644,661,632,638 & 664 Amsl.
		15.00 MW		

1. ಈ ಯೋಜನೆಯನ್ನು ಆದೇಶ ಹೊರಡಿಸಿದ ದಿನಾಂಕದಿಂದ 3 ವರ್ಷದ ಅವಧಿಯೊಳಗಾಗಿ ಅನುಷ್ಠಾನಗೊಳಿಸತಕ್ಕದ್ದು.
2. ಈ ಆದೇಶ ಹೊರಡಿಸಿದ ದಿನಾಂಕದಿಂದ 45 ದಿನಗಳ ಒಳಗಾಗಿ ಸರ್ಕಾರಿ ಆದೇಶ ಸಂಖ್ಯೆ ಇಎನ್ 435 ಎನ್‌ಸಿಇ 06-01-2012 ರನ್ವಯ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದೊಂದಿಗೆ ನಿಯಮಾನುಸಾರ ಒಡಂಬಡಿಕೆ ಮಾಡಿಕೊಳ್ಳತಕ್ಕದ್ದು, ತಪ್ಪಿದಲ್ಲಿ ಈ ಹಂಚಿಕೆ ಆದೇಶ ತಂತಾನೆ ರದ್ದಾಗಿದೆ ಎಂದು ಭಾವಿಸುವುದು.

3. ಹಂಚಿಕೆದಾರರು ಪೂರ್ತಿ ಒಂದು ಪವನ ವರ್ಷಕ್ಕೆ ಕಡಿಮ ಇಲ್ಲದಂತೆ 10 ಮೀಟರ್ ಮತ್ತು ಹಬ್ ಹೈಟ್ ಮಟ್ಟದಲ್ಲಿ ಪವನ ವೇಗದ ಅಳತೆಯನ್ನು ಮಾಡಿಕೊಳ್ಳಬೇಕು. ಅಲ್ಲದೇ, ಕಾಲ ಕಾಲಕ್ಕೆ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದಿಂದ ಹೊರಡಿಸತಕ್ಕ ಮಾರ್ಗಸೂಚಿಗಳಿಗನುಗುಣವಾಗಿ ಮೈಕ್ರೊ ಸೈಟಿಂಗ್ ಮಾಡಿರುವ ಅಂಶಗಳನ್ನೊಳಗೊಂಡ ವಿವರವಾದ ಯೋಜನಾ ವರದಿಗಳ 3 ಪ್ರತಿಗಳನ್ನು ತಯಾರಿಸಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತಕ್ಕೆ ಮಂಡಿಸಬೇಕು. ತಾಂತ್ರಿಕ ಅವಶ್ಯಕತೆ ಮತ್ತು ಹೆಚ್ಚಿನ ವಿದ್ಯುತ್ ಉತ್ಪಾದನೆಯನ್ನು ಸೇಫ್‌ನಕ್ಷೆ ಮತ್ತು ವಿಂಡ್ ಫಾರ್ಮನ ಲೇಔಟ್‌ನ ಬದಲಾವಣೆಗನುಗುಣವಾಗಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ಶಿಫಾರಸ್ಸಿನಂತೆ ಇದೆ ಎಂಬುದನ್ನು ಖಾತರಿ ಪಡಿಸಬೇಕು.
4. ಗಾಳಿ ಚಕ್ರದ ಹಬ್ ಹೈಟಿನಲ್ಲಿ ಪವನ ವೇಗದ ಅಳತೆ ಖಾತರಿ ಪಡಿಸಲು ಕೆಳಗಿನ ಕೋಷ್ಟಕದಲ್ಲಿ ವಿವರಿಸಿರುವಂತೆ ಪ್ರತಿ 5 ಮಗಾ ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಗೆ ಒಂದರಂತೆ ಗಾಳಿ ಕಂಬವನ್ನು (ವಿಂಡ್ ಮಾಸ್ಟ್) ಅಳವಡಿಸಬೇಕು. ಅಳತೆ ವಿವರಗಳನ್ನು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತಕ್ಕೆ ಸಲ್ಲಿಸುವುದು.

ಗಾಳಿ ಶಕ್ತಿ ವಿದ್ಯುತ್ತಿನ ದೂರ ಸಾಮರ್ಥ್ಯ	5 ಮೆಗಾವ್ಯಾಟ್ ಗಾಳಿ ಯೋಜನೆಯಲ್ಲಿ ಸಾಧಾರಣ ಗಾಳಿ ಶಕ್ತಿ ವಿದ್ಯುತ್ತಿನ ಸಂಖ್ಯೆ	ಹಾಕಬೇಕಾಗಿರುವ ಗಾಳಿ ಕಂಬ (ವಿಂಡ್ ಮಾಸ್ಟ್‌ಗಳ ಸಂಖ್ಯೆ)
> 200 ಕಿ.ವ್ಯಾ. ನಿಂದ 300 ಕಿ.ವ್ಯಾ.	18	1
> 300 ಕಿ.ವ್ಯಾ. ನಿಂದ 500 ಕಿ.ವ್ಯಾ.	15	1
> 500 ಕಿ.ವ್ಯಾ. ನಿಂದ 750 ಕಿ.ವ್ಯಾ.	12	1
> 750 ಕಿ.ವ್ಯಾ. ನಿಂದ 1000 ಕಿ.ವ್ಯಾ.	8 ರಿಂದ 10	1

5. ಯೋಜನೆಯ ವಿವಿಧ ಹಂತದ ಚುಟುವಟಿಕೆಗಳು ಹಾಗೂ ಯೋಜನೆಗಳಿಂದ ಪ್ರಾರಂಭದ ಹಂತದ ತನಕ ವಿವಿಧ ಮೈಲುಗಲ್ಲುಗಳನ್ನು ತೋರಿಸುವ ಪರ್ಟ್ ನಕ್ಷೆಯನ್ನು ತಯಾರಿಸಿ ಮೇಲುಸ್ತುವಾರಿಗಾಗಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತಕ್ಕೆ ಸಲ್ಲಿಸಬೇಕು.
6. ಎಲ್ಲೆಲ್ಲಿ ಶಾಸನಬದ್ಧ ಅನುಮೋದನ ಅವಶ್ಯಕತೆಯಿದೆಯೋ ಅಂದರೆ ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ/ಕಂದಾಯ ಇಲಾಖೆಗಳ ಮತ್ತು ಇತರ ಸಂಬಂಧಿತ ಇಲಾಖೆಗಳಿಂದ ಅನುಮೋದನೆಯನ್ನು ಹಂಚಿಕೆದಾರರು ಪಡೆದುಕೊಳ್ಳತಕ್ಕದ್ದು. ಅಭಿವೃದ್ಧಿದಾರರು ಈ ಯೋಜನೆಯನ್ನು ಖಾಸಗಿ ಜಮೀನಿನಲ್ಲಿ ಕೈಗೊಳ್ಳುತ್ತಿರುವುದರಿಂದ, ಖಾಸಗಿ ಜಮೀನಿನ ಮಾಲೀಕರಿಂದ ಒಪ್ಪಿಗೆ ಪತ್ರವನ್ನು ಪಡೆಯತಕ್ಕದ್ದು.
7. ಅಭಿವೃದ್ಧಿದಾರರು ಸಂಬಂಧಿಸಿದ ವಿದ್ಯುತ್ ಸರಬರಾಜು ಕಂಪನಿಯೊಂದಿಗೆ ನೀತಿ ನಿಯಮಾನುಸಾರ ವಿದ್ಯುತ್ ಖರೀದಿ ಒಡಂಬಡಿಕೆ ಮಾಡಿಕೊಳ್ಳತಕ್ಕದ್ದು.
8. ಅಭಿವೃದ್ಧಿದಾರರು ಈ ಯೋಜನೆಯನ್ನು 2013-14ರೊಳಗಾಗಿ ಅನುಷ್ಠಾನಗೊಳಿಸತಕ್ಕದ್ದು ಹಾಗೂ ಅದರಂತೆ, ಕೆ.ಆರ್.ಇ.ಡಿ.ಎಲ್.ಗೆ ಮುಚ್ಚಳಿಗೆ ಬರೆದುಕೊಡತಕ್ಕದ್ದು.
9. ಸರ್ಕಾರಿ ಆದೇಶ ಸಂ:ಇಎನ್ 95 ಇಬಿಎಸ್ 2009 ದಿ:29-12-2009ರನ್ವಯ ವಿನಾಯಿತಿ ಸೌಲಭ್ಯಗಳು ಅನ್ವಯಿಸುವುದು.
10. ಯೋಜನೆಯನ್ನು ತ್ವರಿತವಾಗಿ ಅನುಷ್ಠಾನ ಮಾಡಲು ಅನುವಾಗುವಂತೆ ರಾಜ್ಯ ಮತ್ತು ಜಿಲ್ಲಾ ಮತ್ತು ಜಿಲ್ಲಾ ಮಟ್ಟದ ಸರ್ಕಾರಿ ಅಧಿಕಾರಿಗಳು ಸಹಕರಿಸುವುದು.
11. ಸದರಿ ಪವನ ವಿದ್ಯುತ್ ಯೋಜನೆಗಾಗಿ ಇಂಧನ ಇಲಾಖೆಯಿಂದ ಜಮೀನನ್ನು ಹಂಚಿಕೆ ಮಾಡಲಾಗುವುದಿಲ್ಲ ಹಾಗೂ ಈ ಹಂಚಿಕೆ ಆದೇಶವು ಪವನ ವಿದ್ಯುತ್ ಯೋಜನೆಯ ಸಾಮರ್ಥ್ಯದ ಹಂಚಿಕೆ ಮಾತ್ರ ಸೀಮಿತವಾಗಿದೆ ಹಾಗೂ ಅಭಿವೃದ್ಧಿದಾರರಿಗೆ ಯೋಜನೆಯ ಜಾಗದಲ್ಲಿಯ ಖನಿಜ ಸಂಪತ್ತು ಹಾಗೂ ಭೂಮಿಯ ಬಗ್ಗೆ ಯಾವುದೇ ಹಕ್ಕು ಇರುವುದಿಲ್ಲ ಎಂಬುದನ್ನು ಮನಗಾಣತಕ್ಕದ್ದು.
12. ಸದರಿ ಆದೇಶವನ್ನು ರದ್ದುಪಡಿಸುವುದು/ಮಾರ್ಪಾಡು ಮಾಡುವ ಅಧಿಕಾರವನ್ನು ಸರ್ಕಾರವು ಹೊಂದಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಕೌಸಲ್ಯಾ

ಸರ್ಕಾರದ ಅಧೀನ ಕಾರ್ಯದರ್ಶಿ

ಪಿ.ಆರ್: 912 ಇಂಧನ ಇಲಾಖೆ

ಇಂಧನ ಸಚಿವಾಲಯ

ವಿಷಯ : ಮೆ॥ ಸ್ವಯಂಭೂ ಪವರ್ ಸಿಸ್ಟಮ್ಸ್ ಪ್ರೈವೇಟ್ ಲಿಮಿಟೆಡ್ ಇವರಿಗೆ 2.00 ಮೆ.ವ್ಯಾ. ಸಾಮರ್ಥ್ಯದ ಕಿರು ಜಲ ವಿದ್ಯುತ್ ಯೋಜನೆ ಹಂಚಿಕೆ ಬಗ್ಗೆ.

ಓದಲಾಗಿದೆ : 1. ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ: ಕೆಆರ್‌ಇಡಿ/06/ಬಂಡಿಹೊಳೆ ಕಿ.ಜ.ವಿ./2010/792, ದಿನಾಂಕ: 24-02/19-03-2010 ಮತ್ತು ಕೆಆರ್‌ಇಡಿ /08/SH-689/Bandi/07, ದಿನಾಂಕ: 29-12-2010, 01-01-2011.

2. ದಿನಾಂಕ: 25-01-2011 ರಂದು ನಡೆದ ಹಂಚಿಕೆ ಸಮಿತಿ ಸಭೆಯ ನಡವಳಿಗಳು.

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಪತ್ರದಲ್ಲಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರು ಮೆ: ಸ್ವಯಂಭೂ ಪವರ್ ಸಿಸ್ಟಮ್ಸ್ ಪ್ರೈವೇಟ್ ಲಿಮಿಟೆಡ್ ಇವರಿಗೆ ಚಿಕ್ಕಮಂಗಳೂರು ಜಿಲ್ಲೆಯ, ಎನ್.ಆರ್. ಪುರ ತಾಲ್ಲೂಕಿನ ಬಾಳೆಹೊನ್ನೂರು ಬಳಿ 2 ಮೆಗಾ ವ್ಯಾಟ್ ಸಾಮರ್ಥ್ಯದ ಕಿರು ಜಲ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡುವಂತೆ ಸರ್ಕಾರಕ್ಕೆ ಶಿಫಾರಸ್ಸು ಮಾಡಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ನಡವಳಿಯಲ್ಲಿ ಹಂಚಿಕೆ ಸಮಿತಿ ಸಭೆಯ ಮುಂದೆ ಸದರಿ ಪ್ರಸ್ತಾವನೆಯನ್ನು ಮಂಡಿಸಲಾಗಿತ್ತು. ಮೆ: ಸ್ವಯಂಭೂ ಪವರ್ ಸಿಸ್ಟಮ್ಸ್ ಪ್ರೈವೇಟ್ ಲಿಮಿಟೆಡ್ ಇವರಿಗೆ ಚಿಕ್ಕಮಂಗಳೂರು ಜಿಲ್ಲೆಯಲ್ಲಿ ಎನ್.ಆರ್. ಪುರ ತಾಲ್ಲೂಕಿನ ಭಗ್ವಾನಿ ಉಪನದಿಯಾದ

ಬಂಡಿಹೊಳೆಗೆ ಅಡ್ಡಲಾಗಿ 2.00 ಮೆಗಾ ವ್ಯಾಟ್ ಬಂಡಿಹೊಳೆ ಕಿರು ಜಲ ವಿದ್ಯುತ್ ಯೋಜನೆಯನ್ನು ಹಂಚಿಕೆ ಸಮಿತಿಯು ಪರಿಗಣಿಸಿರುತ್ತದೆ. ಆದುದರಿಂದ ಈ ಕೆಳಗಿನಂತೆ ಆದೇಶಿಸಲಾಗಿದೆ:

ಸರ್ಕಾರಿ ಆದೇಶ ಸಂಖ್ಯೆ: ಇಎನ್ 117 ಎನ್‌ಸಿಇ 2010, ಬೆಂಗಳೂರು, ದಿನಾಂಕ: 13-03-2012

ಮೆ: ಸ್ವಯಂಭೂ ಪವರ್ ಸಿಸ್ಟಮ್ಸ್ ಪ್ರೈವೇಟ್ ಲಿಮಿಟೆಡ್ ಇವರಿಗೆ ಚಿಕ್ಕಮಂಗಳೂರು ಜಿಲ್ಲೆಯಲ್ಲಿ, ಎನ್.ಆರ್. ಪುರ ತಾಲ್ಲೂಕಿನ ಭದ್ರಾನದಿ ಉಪನದಿಯಾದ ಬಂಡಿಹೊಳೆಗೆ ಅಡ್ಡಲಾಗಿ 2.00 ಮೆಗಾ ವ್ಯಾಟ್ **'ಬಂಡಿಹೊಳೆ ಕಿರು ಜಲ ವಿದ್ಯುತ್'** ಯೋಜನೆಯನ್ನು (ಹಂತ-1ರ Weir Latitude: 13°23'29" Longitude 75°26'15". ವಿದ್ಯುತ್ ಸ್ಥಾವರದ Latitude: 13°24'46" Longitude: 75° 27'14" ಹಂತ-2ರ Weir Latitude: 13°24'09" Longitude: 75° 27'45". ವಿದ್ಯುತ್ ಸ್ಥಾವರದ Latitude: 13° 24'34" Longitude: 75° 28'38") ಈ ಕೆಳಗಿನ ನಿಬಂಧನೆಗೊಳಪಟ್ಟು ಹಂಚಿಕೆ ಮಾಡಲಾಗಿದೆ:-

1. ಈ ಯೋಜನೆಯನ್ನು ಆದೇಶ ಹೊರಡಿಸಿದ ದಿನಾಂಕದಿಂದ 3 ವರ್ಷದ ಅವಧಿಯೊಳಗಾಗಿ ಅನುಷ್ಠಾನಗೊಳಿಸತಕ್ಕದ್ದು.
2. ಸದರಿ ಯೋಜನೆಯಿಂದ ಕೆಳತೊರೆ ಮತ್ತು ಮೇತ್ತೊರೆ ಯೋಜನೆಗಳಿಗೆ ಯಾವುದೇ ಹಾನಿಯಾಗಬಾರದು.
3. ಈ ಆದೇಶ ಹೊರಡಿಸಿದ ದಿನಾಂಕದಿಂದ 45 ದಿನಗಳ ಒಳಗಾಗಿ ಸರ್ಕಾರಿ ಆದೇಶ ಸಂಖ್ಯೆ ಇಎನ್ 435 ಎನ್‌ಸಿಇ 06-01-212 ರನ್ವಯ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದೊಂದಿಗೆ ನಿಯಮಾನುಸಾರ ಒಡಂಬಡಿಕೆ ಮಾಡಿಕೊಳ್ಳತಕ್ಕದ್ದು. ತಪ್ಪಿದಲ್ಲಿ ಈ ಹಂಚಿಕೆ ಆದೇಶ ತಂತಾನೆ ರದ್ದಾಗಿದೆ ಎಂದು ಭಾವಿಸುವುದು.
4. ಈ ಒಡಂಬಡಿಕೆಯನ್ನು ಮಾಡಿಕೊಳ್ಳುವ ಮೊದಲು ಯೋಜನಾ ಅಭಿವೃದ್ಧಿದಾರರು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತಕ್ಕೆ ವಿವರವಾದ ಯೋಜನಾ ವರದಿಯನ್ನು (ಡಿ.ಪಿ.ಆರ್) ಪರಿಷ್ಕರಿಸಲು ಮೆಗಾ ವ್ಯಾಟ್ ಒಂದಕ್ಕೆ ಸರ್ಕಾರದ ಆದೇಶಾನುಸಾರ ವಿವರವಾದ ಯೋಜನಾ ವರದಿ ಪರಿಷ್ಕಣ ಶುಲ್ಕವನ್ನು ತುಂಬುವುದು.
5. ಯೋಜನಾ ಅಭಿವೃದ್ಧಿದಾರರು ಸಂಬಂಧಪಟ್ಟ ಎಲ್ಲಾ ಇಲಾಖೆಗಳಿಂದಲೂ ಅಂದರೆ ಜಲ ಸಂಪನ್ಮೂಲ ಇಲಾಖೆ, ಅರಣ್ಯ, ಜೀವಿಶಾಸ್ತ್ರ & ಪರಿಸರ ಇಲಾಖೆ, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ, ಕರ್ನಾಟಕ ವಿದ್ಯುತ್ ನಿಗಮ ನಿಯಮಿತ, ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿ ಮತ್ತು ಕಂದಾಯ ಇಲಾಖೆಗಳಿಂದ ಕ್ಲಿಯರೆನ್ಸ್‌ಗಾಗಿ ಅರ್ಜಿ ಸಲ್ಲಿಸತಕ್ಕದ್ದು. ಒಡಂಬಡಿಕೆ ಮಾಡಿಕೊಂಡ ಒಂದು ವರ್ಷದೊಳಗಾಗಿ ವಿವರವಾದ ಯೋಜನಾ ವರದಿಯನ್ನು ಸಲ್ಲಿಸತಕ್ಕದ್ದು.
6. ಹಂಚಿಕೆದಾರರು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತಕ್ಕೆ ಠೇವಣಿ ಇಡುವ ಹಣವನ್ನು, ವಿವರವಾದ ಯೋಜನಾ ವರದಿಯನ್ನು (ಡಿಪಿಆರ್) ಆವಿಷ್ಕರಿಸುವುದಕ್ಕೋಸ್ಕರ ಹೊಂದಾಣಿಕೆ ಮಾಡಿಕೊಳ್ಳಲಾಗುವುದು.
7. ಯೋಜನಾ ಅಭಿವೃದ್ಧಿದಾರರು ಸಂಬಂಧಿಸಿದ ವಿದ್ಯುತ್ ಸರಬರಾಜು ಕಂಪನಿಯೊಂದಿಗೆ ನೀತಿ ನಿಯಮಗಳನುಸಾರ ವಿದ್ಯುತ್ ಖರೀದಿ ಒಡಂಬಡಿಕೆ (ಪಿಪಿಎ) ಮಾಡಿಕೊಳ್ಳತಕ್ಕದ್ದು.
8. ಈ ಕಿರು ಜಲ ವಿದ್ಯುತ್ ಯೋಜನೆಯ ಸ್ಥಳದಲ್ಲಿ ಯಾವುದಾದರು ಸರ್ಕಾರಿ ಜಲ ವಿದ್ಯುತ್ ನೀರಾವರಿ/ಕುಡಿಯುವ ನೀರಿನ ಯೋಜನೆಗಳು ಬಂದಲ್ಲಿ ಸರ್ಕಾರಿ ಯೋಜನೆಗಳಿಗೆ ಮೊದಲ ಆದ್ಯತೆ ದೊರಕುವುದು ಹಾಗೂ ಈ ಯೋಜನೆಗೆ ಯಾವುದಾದರೂ ಇತರೆ ಯೋಜನೆಗಳಿಂದ ಧಕ್ಕೆಯಾದ್ದಲ್ಲಿ ಯಾವುದೇ ಪರಿಹಾರವನ್ನು ಅಭಿವೃದ್ಧಿದಾರರು ನಿರೀಕ್ಷಿಸುವಂತಿಲ್ಲ.
9. ಸ್ಥಳೀಯವಾಗಿ ಉದ್ಭವಿಸುವ ಯಾವುದಾದರೂ ಆಕ್ಷೇಪಣೆಗಳಿಗೆ ಅಭಿವೃದ್ಧಿದಾರರೇ ಸಂಪೂರ್ಣವಾಗಿ ಹೊಣೆಗಾರರಾಗಿರುತ್ತಾರೆ.
10. ಕರ್ನಾಟಕ ವಿದ್ಯುತ್ ನಿಗಮ ನಿಯಮಿತದ ಯಾವುದೇ ಯೋಜನೆಗಳಿಂದಾಗಿ ಸದರಿ ಯೋಜನೆಯು ಮುಳುಗಡೆಯಾದಲ್ಲಿ, ಒದಗಬಹುದಾದ ಸಂಪೂರ್ಣ ತೊಂದರೆಗಳಿಗೆ ಅಭಿವೃದ್ಧಿದಾರರೇ ಪೂರ್ಣ ಜವಾಬ್ದಾರರಾಗಿರುತ್ತಾರೆ.
11. ಸದರಿ ಆದೇಶವನ್ನು ರದ್ದು ಪಡಿಸುವುದು/ಮಾರ್ಪಾಡು ಮಾಡುವ ಅಧಿಕಾರವನ್ನು ಸರ್ಕಾರವು ಹೊಂದಿರುತ್ತದೆ.
12. ಡಿ.ಪಿ.ಆರ್. ತಯಾರು ಮಾಡಿದ ಮೇಲೆ ಕ್ರೆಡಲ್ ಸಂಸ್ಥೆಯು ಪರಿಶೀಲಿಸಿದ ನಂತರ ಇತರ ಸಂಬಂಧಿಸಿದ ಇಲಾಖೆಗಳಿಗೆ ಡಿ.ಪಿ.ಆರ್. ಸಲ್ಲಿಸುವುದು ಹಾಗೂ ತದನಂತರ ತಾಂತ್ರಿಕ ಅನುಮೋದನೆಗಾಗಿ ಕ್ರೆಡಲ್‌ಗೆ ಅರ್ಜಿ ಸಲ್ಲಿಸತಕ್ಕದ್ದು.
13. ಈ ಯೋಜನೆಯನ್ನು ಅನುಷ್ಠಾನಗೊಳಿಸುವ ಪೂರ್ವದಲ್ಲಿ ಸಂಬಂಧಿಸಿದ ಪ್ರಾದೇಶಿಕ ಮತ್ತು ವನ್ಯಜೀವಿ ವಿಭಾಗಗಳ ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಸಹಮತಿ ಪಡೆದುಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಕೌಸಲ್ಯಾ
ಸರ್ಕಾರದ ಅಧೀನ ಕಾರ್ಯದರ್ಶಿ
ಇಂಧನ ಇಲಾಖೆ

ಪಿ.ಆರ್: 913

ಶಿಕ್ಷಣ ಸಚಿವಾಲಯ

ವಿಷಯ : ಶ್ರೀ ಜಿ.ಟಿ. ತಳಕೇರಿ, ಕ್ಷೇತ್ರ ಶಿಕ್ಷಣಾಧಿಕಾರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬಿಜಾಪುರ ಗ್ರಾಮೀಣ ವಲಯ, ಬಿಜಾಪುರ ಇವರ ಮೇಲಿನ ಆರೋಪಗಳಿಗೆ ಇಲಾಖಾ ವಿಚಾರಣೆ ನಡೆಸಲು ವಿಚಾರಣಾಧಿಕಾರಿ ಮತ್ತು ಮಂಡನಾಧಿಕಾರಿಯನ್ನು ನೇಮಿಸುವ ಬಗ್ಗೆ.

ಓದಲಾಗಿದೆ :
1. ಅಪರ ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ, ಇವರ ಪತ್ರ ಸಂಖ್ಯೆ : ಸಿ5/ಜಿ.ಟಿ.ತ./ದೂರು/59/2010-11. ದಿನಾಂಕ : 21-09-2011.
2. ಸರ್ಕಾರದ ಪತ್ರ ಸಂಖ್ಯೆ : ಇಡಿ 54 ಡಿಜಿಓ 2011 ದಿನಾಂಕ : 10-11-2011.
3. ಅಪರ ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ, ಇವರ ಪತ್ರ ಸಂಖ್ಯೆ : ಸಿ5/ಜಿ.ಟಿ.ತ./ದೂರು/59/2010-11. ದಿನಾಂಕ : 28-11-2011.
4. ಸರ್ಕಾರದ ಕಾರಣ ಕೇಳುವ ನೋಟಿಸು ಸಂಖ್ಯೆ : ಇಡಿ 54 ಡಿಜಿಓ 2011 ದಿನಾಂಕ : 16-01-2012.
5. ಶ್ರೀ ಜಿ.ಟಿ. ತಳಕೇರಿ, ಕ್ಷೇತ್ರ ಶಿಕ್ಷಣಾಧಿಕಾರಿ, ಬಿಜಾಪುರ ಗ್ರಾಮೀಣ ವಲಯ, ಬಿಜಾಪುರ ಇವರ ರಕ್ಷಣಾ ಹೇಳಿಕೆ ದಿನಾಂಕ : 25-02-2012.

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮಾಂಕ (1) ರ ದಿನಾಂಕ : 21-09-2011 ರ ಪತ್ರದಲ್ಲಿ ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ ಇವರ ವರದಿಯಲ್ಲಿ ಶ್ರೀ ಜಿ.ಟಿ. ತಳಕೇರಿ, ಕ್ಷೇತ್ರ ಶಿಕ್ಷಣಾಧಿಕಾರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬಿಜಾಪುರ ಗ್ರಾಮೀಣ ವಲಯ, ಬಿಜಾಪುರ ಇವರ

ಮೇಲಿನ ಅಪಾದನೆಗಳನ್ನು ಕುರಿತು ವಿಚಾರಣೆಯನ್ನು ಸಹ ನಿರ್ದೇಶಕರು (ಆಡಳಿತ), ಇವರು ದಿನಾಂಕ : 07-09-2011 ಹಾಗೂ 08-09-02011 ರಂದು ಜರುಗಿಸಿದ್ದು, ಸದರಿ ಅಧಿಕಾರಿಯು ಈ ಕೆಳಕಂಡ ಗಂಭೀರವಾದ ಕರ್ತವ್ಯ ಲೋಪವನ್ನು ಎಸಗಿರುವುದು ಕಂಡು ಬಂದಿರುವುದಾಗಿ ತಿಳಿಸಿ ಸದರಿ ಅಧಿಕಾರಿಯನ್ನು ಅಮಾನತ್ತುಗೊಳಿಸಿ ಶಿಸ್ತು ಕ್ರಮ ಜರುಗಿಸುವಂತೆ ಕೋರಿರುತ್ತಾರೆ.

1. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಶಾಲಾ ಬ್ಯಾಗ್ ಮತ್ತು ನೋಟ್‌ಬುಕ್‌ಗಳ ವಿತರಣೆಗೆ ಸಂಬಂಧಿಸಿದ ಅನುದಾನವನ್ನು ದುರುಪಯೋಗ ಪಡಿಸಿಕೊಂಡಿರುವುದು.
2. ಬಾಲಾ ಯೋಜನೆಯಡಿಯಲ್ಲಿ ಗ್ರೀನ್ ಬೋರ್ಡ್‌ಗಳನ್ನು ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಗಮನಕ್ಕೆ ತರದೆ ಹೆಚ್ಚಿನ ದರದಲ್ಲಿ ಖರೀದಿಸಿರುವುದು.
3. ಶಾಲೆಗಳಿಗೆ ಬೆಂಕಿ ಆರಿಸುವ ಉಪಕರಣಗಳನ್ನು ಸಮಿತಿಯ ಗಮನಕ್ಕೆ ತರದೇ ಖರೀದಿ ಮಾಡಿರುತ್ತಾರೆ.
4. ಋತುಮಾನ ಶಾಲೆ/ಆಶಾಕಿರಣ ಶಾಲೆಗಳಲ್ಲಿ ಖೊಟ್ಟಿ ಹಾಜರಾತಿ ನೀಡಿ ಅನುದಾನವನ್ನು ದುರ್ಬಳಕೆ ಮಾಡಿದ್ದಾರೆ.
5. ಶ್ರೀ ಜಿ.ಟಿ. ತಳಕೇರಿ, ಇವರ ವಿರುದ್ಧ ಕಳೆದ ತಿಂಗಳ ರಾಜ್ಯ ಮಟ್ಟದ ಪತ್ರಿಕೆಗಳಲ್ಲಿ ಸಹಾ ಹಣ ದುರುಪಯೋಗಗಳ ಬಗ್ಗೆ ವರದಿ ಬಂದಿರುತ್ತದೆ.
6. ಸಹ ನಿರ್ದೇಶಕರು (ಆಡಳಿತ) ಇವರು ಕಡತಗಳನ್ನು ಪರಿಶೀಲನೆ ಮಾಡಿ ಮತ್ತು ವಿಜಾಪುರದಲ್ಲಿ ಸ್ಥಳೀಯವಾಗಿ ಪರಿಶೀಲನೆ ಕೈಗೊಂಡ ನಂತರ ವರದಿಯಲ್ಲಿ ಕೆಲವು ಅಂಶಗಳನ್ನು ಈ ಕೆಳಗಿನಂತೆ ವಿವರಿಸಲಾಗಿದೆ.
   - i. 2010-11ನೇ ಸಾಲಿನ ಶಾಲಾ ಮಕ್ಕಳಿಗೆ ವಿತರಿಸಬೇಕಾದ ಬ್ಯಾಗ್ ಹಾಗೂ ನೋಟ್ ಪುಸ್ತಕ ಹಂಚಿಕೆ ವಿವರಿಸುವುದಾದರೆ, ದಿನಾಂಕ : 15-06-2010 ರಂದು ಶಾಲಾ ಬ್ಯಾಗ್ ಮತ್ತು ನೋಟ್ ಪುಸ್ತಕಗಳನ್ನು ಖರೀದಿಸಿ ಶಾಲೆಗಳಲ್ಲಿನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ನೀಡಲು ಕಟ್ಟುನಿಟ್ಟಾಗಿ ಸೂಚನೆ ನೀಡಲಾಗಿದೆ. ಕ್ಷೇತ್ರ ಶಿಕ್ಷಣಾಧಿಕಾರಿಗಳ ಖಾತೆಗೆ ಮೊದಲನೇ ಕಂತು ರೂ 8.71 ಲಕ್ಷಗಳು ದಿನಾಂಕ : 14-08-2010 ರಂದು ಬಿಡುಗಡೆ ಆಗಿದ್ದು 2ನೇ ಕಂತು ರೂ. 1.18 ಲಕ್ಷಗಳು ದಿನಾಂಕ : 25-03-2011 ರಂದು ಬಿಡುಗಡೆಯಾಗಿತ್ತು. 3ನೇ ಕಂತು ರೂ. 0.35 ಲಕ್ಷಗಳು ದಿನಾಂಕ : 19-04-2011ರಂದು ಬಿಡುಗಡೆಯಾಗಿರುತ್ತದೆ. 2010-11ನೇ ಸಾಲಿಗೆ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ವಿದ್ಯಾರ್ಥಿಗಳಿಗೆ ಶಾಲಾ ಬ್ಯಾಗ್ ಮತ್ತು ನೋಟ್‌ಬುಕ್‌ಗಳನ್ನು ಪೂರೈಸುವ ಕೆಲಸ ಇನ್ನೂ ಆಗಿಲ್ಲ ಸರ್ಕಾರದಿಂದ ವಹಿಸಿರುವ ಈ ವಿಶೇಷ ಕಾರ್ಯಕ್ರಮವನ್ನು ಜಾರಿಗೊಳಿಸುವಲ್ಲಿ ಈ ಕ್ಷೇತ್ರ ಶಿಕ್ಷಣಾಧಿಕಾರಿಗಳು ವಿಫಲರಾಗಿರುತ್ತಾರೆ.
   - ii. ಬಾಲಾ ಯೋಜನೆ ಮತ್ತು ಬೆಂಕಿ ಆರಿಸುವ ಉಪಕರಣಗಳ ಬಗ್ಗೆ ಕ್ಷೇತ್ರ ಶಿಕ್ಷಣಾಧಿಕಾರಿಗಳು ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳಿಗೆ ಹಣ ಬಿಡುಗಡೆಗೊಳಿಸಿದ್ದು ಕ್ಷೇತ್ರ ಶಿಕ್ಷಣಾಧಿಕಾರಿಗಳ ಹಂತದಲ್ಲಿ ಈ ಕುರಿತು ನಿರ್ವಹಿಸಿರುವ ಬಗ್ಗೆ ದಾಖಲೆಗಳು ಇಲ್ಲ.
   - iii. ಋತುಮಾನ ಶಾಲೆ ಮತ್ತು ಆಶಾಕಿರಣ ಶಾಲೆಗಳ ಬಗೆಗಿನ ಅಪಾದನೆಗಳ ಪೂರಕವಾಗಿ ಯಾವುದೇ ಅಪವ್ಯಯ ಆದ ಬಗ್ಗೆ ಕಂಡು ಬಂದಿಲ್ಲವೆಂದು ತಿಳಿಸಿದ್ದಾರೆ. ಮತ್ತು ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ ಸದಸ್ಯರಿಗೆ ತರಬೇತಿ ನೀಡುವ ಬಗ್ಗೆ ರೂ. 5.54 ಲಕ್ಷಗಳನ್ನು ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಯಿಂದ ದಿನಾಂಕ : 27-07-2011 ರಂದು ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಜಮೆಯಾಗಿರುತ್ತದೆ. ಈ ತರಬೇತಿ ಕಾರ್ಯಕ್ರಮ ಇನ್ನೂ ಪೂರ್ಣಗೊಂಡಿಲ್ಲವೆಂದು ಸಹ ನಿರ್ದೇಶಕರು (ಆಡಳಿತ) ತಿಳಿಸಿರುತ್ತಾರೆ.
   - iv. 2011-12 ನೇ ಸಾಲಿನ ಪ್ರಾಥಮಿಕ ಶಾಲಾ ಶಿಕ್ಷಕರ ನಿಯೋಜನೆ ಕಡತ ಪರಿಶೀಲಿಸಲಾಗಿ ಒಟ್ಟು 39 ಶಿಕ್ಷಕರ ನಿಯೋಜನೆ ಮಾಡಿರುವುದು ತಿಳಿದುಬಂದಿದ್ದು ಈ ನಿಯೋಜನೆ ಯಾವುದೇ ಶಾಲೆಯ ಮಕ್ಕಳ ಹಿತದೃಷ್ಟಿಯಿಂದ ಕೂಡಿರುತ್ತದೆ ಎಂದು ತಿಳಿದು ಬಂದಿರುವುದಿಲ್ಲ. ಕೆಲವೊಂದು ಶಿಕ್ಷಕರ ನಿಯೋಜನೆಗಳನ್ನು 2008-09, 2009-10, 2010-11 ಮತ್ತು 2011-12ನೇ ಸಾಲಿನ ಸತತ ನಾಲ್ಕು ವರ್ಷಗಳವರೆಗೆ ನಿಯೋಜನೆ ಮುಂದುವರೆಸಿರುತ್ತಾರೆ. ಇದು ಶಿಕ್ಷಣ ಕಾಯ್ದೆಗೆ ವಿರುದ್ಧವಾಗಿರುತ್ತದೆ.
   - v. ಶ್ರೀ ಜಿ.ಟಿ. ತಳಕೇರಿ, ಕ್ಷೇತ್ರ ಶಿಕ್ಷಣಾಧಿಕಾರಿ, ಬಿಜಾಪುರ ಗ್ರಾಮೀಣ ಇವರ ಮೇಲಿನ ದೂರುಗಳನ್ನು ಪರಿಶೀಲಿಸಲಾಗಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಮಕ್ಕಳಿಗೆ 2010-11ನೇ ಸಾಲಿಗೆ ನೀಡಿದ್ದ ಅನುದಾನ ರೂ. 10.25 ಲಕ್ಷಗಳು ಬಿಡುಗಡೆಯಾಗಿದ್ದರೂ ಕೂಡ ಇಲ್ಲಿಯವರೆಗೂ ಶಾಲೆಗಳಿಗೆ ಬ್ಯಾಗ್ ಮತ್ತು ಬುಕ್ ಗಳನ್ನು ಪೂರೈಸುವ ಕೆಲಸ ಆಗಿಲ್ಲ. ಇದು ಕ್ಷೇತ್ರ ಶಿಕ್ಷಣಾಧಿಕಾರಿಗಳ ವೈಫಲ್ಯ ಮತ್ತು 39 ಶಿಕ್ಷಕರ ನಿಯೋಜನೆಯನ್ನು ಮಾಡಿರುವುದು ಹಾಗೂ ಇದರಲ್ಲಿ ಕೆಲವು ಶಿಕ್ಷಕರುಗಳನ್ನು ಕಳೆದ 4 ವರ್ಷಗಳಿಂದ ಮುಂದುವರೆಸಲಾಗಿರುವುದು ಗಂಭೀರ ಸ್ವರೂಪದ ಕರ್ತವ್ಯ ಲೋಪವೆಂದು ಅಭಿಪ್ರಾಯಿಸಿರುತ್ತಾರೆ.

ಮೇಲೆ ಓದಲಾದ ಕ್ರಮಾಂಕ (2) ರ ದಿನಾಂಕ : 10-11-2011 ರ ಸರ್ಕಾರದ ಪತ್ರದಲ್ಲಿ ಅಪಾದಿತ ಶ್ರೀ ಜಿ.ಟಿ. ತಳಕೇರಿ, ಕ್ಷೇತ್ರ ಶಿಕ್ಷಣಾಧಿಕಾರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬಿಜಾಪುರ ಗ್ರಾಮೀಣ ವಲಯ, ಬಿಜಾಪುರ ಇವರ ವಿರುದ್ಧ ದೂರಿನ ಬಗ್ಗೆ ಕರ್ನಾಟಕ ನಾಗರೀಕ ಸೇವಾ (ಸಿಸಿಎ) 1957 ರಡಿ ವಿಚಾರಣೆ ನಡೆಸುವ ಸಂಬಂಧ ದೋಷಾರೋಪಣಾ ಪಟ್ಟಿ ಅನುಬಂಧ 1-4ರವರೆಗೆ ಪೂರಕ ದಾಖಲೆಗಳೊಂದಿಗೆ ಕಳುಹಿಸುವಂತೆ ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ ಇವರನ್ನು ಕೋರಲಾಗಿತ್ತು.

ಮೇಲೆ ಓದಲಾದ ಕ್ರಮಾಂಕ (3) ರ ದಿನಾಂಕ : 28-11-2011 ರ ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ ಇವರು ಆರೋಪಿತ ಅಧಿಕಾರಿ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ಅನುಬಂಧ 1 ರಿಂದ 4 ರವರೆಗೆ ತಯಾರಿಸಿ ಕಳುಹಿಸಿರುತ್ತಾರೆ.

ಮೇಲೆ ಓದಲಾದ ಕ್ರಮಾಂಕ : (4) ರ ದಿನಾಂಕ : 16-01-2012 ರಲ್ಲಿ ಅಪಾದಿತ ಅಧಿಕಾರಿ ಶ್ರೀ ಜಿ. ಟಿ. ತಳಕೇರಿ, ಕ್ಷೇತ್ರ ಶಿಕ್ಷಣಾಧಿಕಾರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬಿಜಾಪುರ ಗ್ರಾಮೀಣ ವಲಯ, ಬಿಜಾಪುರ ಇವರಿಗೆ ಅನುಬಂಧಗಳೊಡನೆ ದೋಷಾರೋಪಣಾ ಪಟ್ಟಿಯನ್ನು ಲಗತ್ತಿಸಿ ಕರ್ನಾಟಕ ನಾಗರೀಕ ಸೇವಾ (ಸಿಸಿಎ) ನಿಯಮಾವಳಿಗಳು 1957 ರ ನಿಯಮ 11 ರಡಿ ಕಾರಣ ಕೇಳುವ ನೋಟಿಸ್ ಜಾರಿ ಮಾಡಲಾಗಿತ್ತು.

ಮೇಲೆ ಓದಲಾದ ಕ್ರಮಾಂಕ : (5) ರ ದಿನಾಂಕ : 25-02-2012 ರಪತ್ರದಲ್ಲಿ ಅಪಾದಿತ ಅಧಿಕಾರಿ ಶ್ರೀ ಜಿ. ಟಿ. ತಳಕೇರಿ, ಕ್ಷೇತ್ರ ಶಿಕ್ಷಣಾಧಿಕಾರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬಿಜಾಪುರ ಗ್ರಾಮೀಣ ವಲಯ, ಬಿಜಾಪುರ ಇವರು ತಮ್ಮ ರಕ್ಷಣಾ ಹೇಳಿಕೆಯಲ್ಲಿ ತಮ್ಮ ಮೇಲಿನ ಆರೋಪಗಳನ್ನು ನಿರಾಕರಿಸಿರುತ್ತಾರೆ.

ಶ್ರೀ ಜಿ. ಟಿ. ತಳಕೇರಿ, ಕ್ಷೇತ್ರ ಶಿಕ್ಷಣಾಧಿಕಾರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬಿಜಾಪುರ ಗ್ರಾಮೀಣ ವಲಯ, ಬಿಜಾಪುರ ಇವರು ತಮ್ಮ ರಕ್ಷಣಾ ಹೇಳಿಕೆಯಲ್ಲಿನ ಆರೋಪಗಳನ್ನು ನಿರಾಕರಿಸಿದ್ದರಿಂದ ಈ ಪ್ರಕರಣದ ಸತ್ಯಾಸತ್ಯತೆಯನ್ನು ತಿಳಿಯುವ ಸಲುವಾಗಿ ಕೂಲಂಕಷವಾಗಿ ವಿಚಾರಣೆ ನಡೆಸುವುದು ಸೂಕ್ತವೆಂದು ಸರ್ಕಾರವು ಮನಗಂಡು ಕರ್ನಾಟಕ ನಾಗರೀಕ ಸೇವಾ (ಸಿಸಿಎ) ನಿಯಮಗಳು 1957 ರ ನಿಯಮ 11 ರಡಿಯಲ್ಲಿ ವಿಚಾರಣಾಧಿಕಾರಿ ಹಾಗೂ ಮಂಡನಾಧಿಕಾರಿಗಳನ್ನು ನೇಮಕ ಮಾಡಲು ನಿರ್ಧರಿಸಿದ್ದು ಅದರಂತೆ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಇಡಿ 54 ಡಿಜಿಪಿ 2011, ಬೆಂಗಳೂರು, ದಿನಾಂಕ: 14ನೇ ಮಾರ್ಚ್ 2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ ಶ್ರೀ ಜಿ. ಟಿ. ತಳಕೇರಿ, ಕ್ಷೇತ್ರ ಶಿಕ್ಷಣಾಧಿಕಾರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬಿಜಾಪುರ ಗ್ರಾಮೀಣ ವಲಯ, ಬಿಜಾಪುರ ಇವರ ಮೇಲಿನ ಆರೋಪಗಳ ಬಗ್ಗೆ ಇಲಾಖಾ ವಿಚಾರಣೆ ನಡೆಸಲು ಸರ್ಕಾರವು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957 ರ ನಿಯಮ 11 (2) ರಡಿಯಲ್ಲಿ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಶ್ರೀ ಡಿ. ವಿ. ಶೇಟ್, ನಿವೃತ್ತ ಜಿಲ್ಲಾ ನ್ಯಾಯಾಧೀಶರು, ಧಾರವಾಡ ಅವರನ್ನು ಈ ಪ್ರಕರಣದ ವಿಚಾರಣಾಧಿಕಾರಿಯಾಗಿಯೂ ಹಾಗೂ ನಿಯಮ 11(5)(ಸಿ) ಮೇರೆಗೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬಿಜಾಪುರ ಇವರನ್ನು ಮಂಡನಾಧಿಕಾರಿಯನ್ನಾಗಿಯೂ ನೇಮಿಸಿ ಆದೇಶಿಸಿದೆ.

ವಿಚಾರಣೆ ನಡೆಸಲು ಸ್ಥಳಾವಕಾಶವನ್ನು ನೀಡಲು ಹಾಗೂ ಶೀಘ್ರಲಿಪಿಗಾರರ/ಬೆರಳಚ್ಚುಗಾರರ ಸೇವೆಯನ್ನು ವಿಚಾರಣಾಧಿಕಾರಿಗಳಿಗೆ ಒದಗಿಸಲು ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ ಇವರಿಗೆ ಸೂಚಿಸಿದೆ.

ವಿಚಾರಣೆ ನಂತರ ವಿಚಾರಣಾಧಿಕಾರಿಗಳು ವರದಿ ಸಲ್ಲಿಸಿದ ನಂತರ ಅವರಿಗೆ ರೂ. 15,000/- ಸಂಭಾವನೆ (ವಾಹನ ಭತ್ಯೆಯೂ ಸೇರಿರುತ್ತದೆ) ಪಾವತಿಸಲು ಸೂಚಿಸಿದೆ.

ವಿಚಾರಣಾಧಿಕಾರಿಗಳು ಪ್ರತಿ ಆರೋಪದ ಬಗ್ಗೆ ನಿಯಮಾನುಸಾರ ವಿಚಾರಣೆ ನಡೆಸಿ, ಸ್ಪಷ್ಟ ನಿರ್ಣಯಗಳನ್ನೊಳಗೊಂಡ ವಿಚಾರಣಾ ವರದಿಯನ್ನು ಈ ಆದೇಶ ತಲುಪಿದ 2 ತಿಂಗಳೊಳಗೆ ಶಿಸ್ತು ಪ್ರಾಧಿಕಾರಕ್ಕೆ ಸಲ್ಲಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್.924

ಎಸ್.ಬಿ. ಸಸಾಲಟ್ಟಿ
ಸರ್ಕಾರದ ಅಧೀನ ಕಾರ್ಯದರ್ಶಿ
ಶಿಕ್ಷಣ ಇಲಾಖೆ (ಸಮಿತಿಗಳು & ಆಡಳಿತ)

ಶಿಕ್ಷಣ ಸಚಿವಾಲಯ

ವಿಷಯ : ಚಿಕ್ಕಮಗಳೂರು, ಹಾಸನ ಮತ್ತು ಕೊಡಗು ಜಿಲ್ಲೆಗಳಲ್ಲಿ ಪ್ರೌಢಶಾಲೆಗಳ ಸ್ಥಳಾಂತರ/ಹಸ್ತಾಂತರದ ಹೆಸರಿನಲ್ಲಿ ನಡೆದಿರುವ ಅಕ್ರಮಗಳಿಗೆ ಸಂಬಂಧಿಸಿದ ಅಧಿಕಾರಿ ನೌಕರರುಗಳ ವಿರುದ್ಧ ಕರ್ನಾಟಕ ನಾಗರೀಕ (ಸಿಸಿಎ) ಸೇವಾ ನಿಯಮಾವಳಿಗಳ ನಿಯಮ-13 ರಡಿಯಲ್ಲಿ ಜಂಟಿ ಶಿಸ್ತು ಕ್ರಮ - ವಿಚಾರಣಾಧಿಕಾರಿ ಹಾಗೂ ಮಂಡನಾಧಿಕಾರಿಗಳನ್ನು ನೇಮಿಸುವ ಬಗ್ಗೆ.

ಓದಲಾಗಿದೆ :

1. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರ ಅ.ಸ. ಪತ್ರ : ಸನಿ (ಶಾ.ಶಿ) ದೂರು 2/2010-11 ದಿನಾಂಕ : 18-01-2011.
2. ಸರ್ಕಾರದ ಆದೇಶ ಸಂಖ್ಯೆ : ಇಡಿ 17 ಡಿಜಿಪಿ 2011 ದಿನಾಂಕ : 01-03-2011.
3. ಸರ್ಕಾರದ ಪತ್ರ ಸಂಖ್ಯೆ :ಇಡಿ 17 ಡಿಜಿಪಿ 2011, ದಿನಾಂಕ : 01-03-2011.
4. ಸರ್ಕಾರದ ಆದೇಶ ಸಂಖ್ಯೆ : ಇಡಿ 17 ಡಿಜಿಪಿ 2011, ದಿನಾಂಕ 03-03-2011.
5. ಸರ್ಕಾರದ ಅಧಿಸೂಚನೆ ಸಂಖ್ಯೆ : ಇಡಿ 22 ಡಿಜಿಪಿ 2011, ದಿನಾಂಕ : 29-03-2011.
6. ಸರ್ಕಾರದ ಆದೇಶ ಸಂಖ್ಯೆ : ಇಡಿ 22 ಡಿಜಿಪಿ 2011 (ಭಾಗ), ದಿನಾಂಕ 23-04-2011.
7. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು, ಇವರ ಪ್ರಸ್ತಾವನೆ ಸಂಖ್ಯೆ : ಸಿ 2(3)ವಿ.ಶಿ. ಪ್ರ. 38/2010-11 (ಭಾಗ-03), ದಿನಾಂಕ : 08-08-2011.
8. ಕಡತ ಸಂಖ್ಯೆ : ಇಡಿ 19 ಡಿಜಿಪಿ 2011.
9. ಕಾರಣ ಕೇಳುವ ನೋಟೀಸು ಸಂಖ್ಯೆ : ಇಡಿ 17 ಡಿಜಿಪಿ 2011, ದಿನಾಂಕ : 22-08-2011.
10. ಸರ್ಕಾರದ ಆದೇಶ ಸಂಖ್ಯೆ : ಇಡಿ 17 ಡಿಜಿಪಿ 2011, ದಿನಾಂಕ : 22-08-2011ರ ಆದೇಶಗಳು.
11. ಸರ್ಕಾರದ ಆದೇಶ ಸಂಖ್ಯೆ : ಇಡಿ 17 ಡಿಜಿಪಿ 2011, ದಿನಾಂಕ : 22-08-2011.
12. ಶ್ರೀ ಎಲ್. ಬೋರಯ್ಯ, ಪ್ರಥಮ ದರ್ಜೆಸಹಾಯಕ, ಆಯುಕ್ತರ ಕಛೇರಿ, ಬೆಂಗಳೂರು, ಇವರ ಪ್ರತಿರಕ್ಷಣಾ ಹೇಳಿಕೆ ದಿನಾಂಕ : 13-09-2011.
13. ಶ್ರೀ ಸಿ.ಜಿ. ಜಯರಂಗ, ಕ್ಷೇತ್ರ ಶಿಕ್ಷಣಾಧಿಕಾರಿ, ಬೆಂಗಳೂರು ಉತ್ತರ ವಲಯ-4, ಬೆಂಗಳೂರು, ಇವರ ಪ್ರತಿರಕ್ಷಣಾ ಹೇಳಿಕೆ ದಿನಾಂಕ : 13-09-2011.
14. ಶ್ರೀ ಕೆ. ಎನ್. ಜಯಣ್ಣ, ಕ್ಷೇತ್ರ ಶಿಕ್ಷಣಾಧಿಕಾರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೀರೂರು, ಇವರ ಪ್ರತಿರಕ್ಷಣಾ ಹೇಳಿಕೆ ದಿನಾಂಕ : 10-10-2011.
15. ಶ್ರೀ ಸಿ. ಆರ್. ಪರಮೇಶ್ವರಪ್ಪ, ಕ್ಷೇತ್ರ ಶಿಕ್ಷಣಾಧಿಕಾರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ತರೀಕೆರೆ, ಇವರ ಪ್ರತಿರಕ್ಷಣಾ ಹೇಳಿಕೆ ದಿನಾಂಕ : 12-12-2011.

16. ಶ್ರೀ ಸಿ. ಆರ್. ಬೆಟ್ಟೇಗೌಡ, ಪ್ರಥಮ ದರ್ಜೆ ಸಹಾಯಕ, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ಕೃಷ್ಣರಾಜಪೇಟೆ, ಮಂಡ್ಯ ಜಿಲ್ಲೆ, ಇವರ ಪ್ರತಿರಕ್ಷಣಾ ಹೇಳಿಕೆ ದಿನಾಂಕ 31-12-2011.
17. ಶ್ರೀ ಸಿ. ಎನ್. ಲೋಕೇಶ್, ಪ್ರಥಮ ದರ್ಜೆ ಸಹಾಯಕ, ಸರ್ಕಾರಿ ಪ್ರೌಢಶಾಲೆ, ಬೆಳವಾಡಿ, ಅರಕಲಗೂಡು ತಾ : ಹಾಸನ ಜಿಲ್ಲೆ, ಇವರ ಪ್ರತಿರಕ್ಷಣಾ ಹೇಳಿಕೆ ದಿನಾಂಕ : 10-01-2012
18. ಶ್ರೀಮತಿ ಪಿ ಪದ್ಮಮ್ಮ, ಪ್ರಾಂಶುಪಾಲರು, ಡಯಟ್, ಹಾಸನ, ಇವರ ಪ್ರತಿರಕ್ಷಣಾ ಹೇಳಿಕೆ ದಿನಾಂಕ : 10-01-2012.
19. ಶ್ರೀಮತಿ ವೈ.ಎಂ. ನೂರ್ ಜಹಾನ್ ಬೀ, ನಿವೃತ್ತ ಪತ್ರಾಂಕಿತ ಸಹಾಯಕರು, ಹಾಸನ, ಇವರ ಪ್ರತಿರಕ್ಷಣಾ ಹೇಳಿಕೆ ದಿನಾಂಕ : 11-01-2012.
20. ಶ್ರೀಮತಿ ಲಲಿತಾ.ಬಿ, ಪತ್ರಾಂಕಿತ ವ್ಯವಸ್ಥಾಪಕರು, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ಹಾಸನ ತಾ॥ ಇವರ ಪ್ರತಿರಕ್ಷಣಾ ಹೇಳಿಕೆ ದಿನಾಂಕ : 16-01-2012.

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮಸಂಖ್ಯೆ (1) ರ ಪತ್ರದಲ್ಲಿ, ಚಿಕ್ಕಮಗಳೂರು, ಹಾಸನ ಮತ್ತು ಕೊಡಗು ಜಿಲ್ಲೆಗಳಲ್ಲಿ ಪ್ರೌಢಶಾಲೆಗಳ ಸ್ಥಳಾಂತರ/ಹಸ್ತಾಂತರ ಹೆಸರಿನಲ್ಲಿ ನಡೆದಿರುವ ಅಕ್ರಮಗಳಿಗೆ ಸಂಬಂಧಿಸಿದ ಅಧಿಕಾರಿ ನೌಕರರ ವಿರುದ್ಧ ಬಂದಿದ್ದ ದೂರುಗಳ ಬಗ್ಗೆ ಪ್ರಾಥಮಿಕ ವಿಚಾರಣಾ ವರದಿಯಲ್ಲಿ ಅವರುಗಳ ಮೇಲಿನ ದೂರುಗಳು ಮೇಲ್ನೋಟಕ್ಕೆ ಸಾಬೀತಾಗಿವೆ ಎಂದು ವರದಿ ಮಾಡಲಾಗಿದ್ದು ಈ ಕೆಳಕಂಡ ಶಾಲೆಗಳು ಸುಳ್ಳು ದಾಖಲೆ ಸೃಷ್ಟಿಸಿ ಮಾನ್ಯತೆ ನವೀಕರಿಸಿಕೊಂಡಿರುವುದು ವರದಿಯಲ್ಲಿ ತಿಳಿಸಲಾಗಿತ್ತು.

1. ಶ್ರೀ ಬಸವೇಶ್ವರ ಪ್ರೌಢಶಾಲೆ, ಕೆಂಚಾಪುರ ಗೇಟ್, ತರೀಕೆರೆ ತಾಲ್ಲೂಕು, ಬೀರೂರು ವಲಯ ಚಿಕ್ಕಮಗಳೂರು ಜಿಲ್ಲೆ.
2. ಶ್ರೀ ವಿಜೇಂದ್ರ ಪ್ರೌಢಶಾಲೆ, ಮಧುರನಹಳ್ಳಿ, ಅರಕಲಗೂಡು ತಾಲ್ಲೂಕು, ಹಾಸನ ಜಿಲ್ಲೆ.
3. ಶ್ರೀ ನರಸಿಂಹಸ್ವಾಮಿ ಪ್ರೌಢಶಾಲೆ, ಯಗಟಿ ಗ್ರಾಮ, ಕಡೂರು ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ.

ಮೇಲಿನ ಶಾಲೆಗಳು ನಿಯಮಾನುಸಾರ ಇದೆಯೇ ಇಲ್ಲವೆ ಎಂಬ ಬಗ್ಗೆ ಸರಿಯಾಗಿ ಪರಿಶೀಲಿಸದೇ ಚಿಕ್ಕಮಗಳೂರು ಜಿಲ್ಲಾ ಉಪ ನಿರ್ದೇಶಕರು ಈ ಶಾಲೆಗಳನ್ನು ಅನುದಾನಕ್ಕೆ ಒಳಪಡಿಸಲು ಪ್ರಸ್ತಾವನೆ ಸಲ್ಲಿಸಿರುವುದರಿಂದ ಹಾಗೂ ಈ ಕೆಳಕಂಡ ಶಾಲೆಗಳು ಸ್ಥಳಾಂತರಿಸಲು ಆಡಳಿತ ಮಂಡಳಿಯೊಂದಿಗೆ ಶಾಮೀಲಾಗಿರುವರೆಂಬ ದೂರಿನಲ್ಲಿ ಸತ್ಯಾಂಶವಿದೆಯೆಂದು ವರದಿ ಮಾಡಲಾಗಿತ್ತು.

1. ಶ್ರೀ ರಾಮೇಶ್ವರ ಪ್ರೌಢಶಾಲೆ, ದುಗ್ಲಾಪುರ, ತರೀಕೆರೆ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ.
2. ಶ್ರೀ ಚೌಡೇಶ್ವರಿ ಪ್ರೌಢಶಾಲೆ, ಗೋಪಾಲಭೂಸೇನಹಳ್ಳಿ, ತರೀಕೆರೆ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ.
3. ಶೃತಿ ಪ್ರೌಢಶಾಲೆ (ಬಳೆ ನಿರಾಲಮ್ಮ ಪ್ರೌಢಶಾಲೆ) ಭೂತೇನಹಳ್ಳಿ, ತರೀಕರೆ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ.

ಮೇಲ್ಕಂಡ ಶಾಲೆಗಳಲ್ಲದೆ ಕುವೆಂಪು ಪ್ರೌಢಶಾಲೆ, ಗೆಂಡೆಹಳ್ಳಿ, ಬೇಲೂರು ತಾಲ್ಲೂಕು ಹಾಸನ ಜಿಲ್ಲೆ ಮತ್ತು ಶ್ರೀ ಶಶೀಂದ್ರ ವಸತಿ ಪ್ರೌಢಶಾಲೆ, ಕೆರೆಹಳ್ಳಿ, ಸೋಮವಾರಪೇಟೆ ತಾಲ್ಲೂಕು, ಕೊಡಗು ಜಿಲ್ಲೆ ಈ ಶಾಲೆಗಳನ್ನು ಚಿಕ್ಕಮಗಳೂರು ಜಿಲ್ಲೆಯ ತರೀಕೆರೆ ತಾಲ್ಲೂಕಿಗೆ ಸ್ಥಳಾಂತರಿಸುವ ಪ್ರಸ್ತಾವನೆಯನ್ನು ಸುಳ್ಳು ದಾಖಲೆಗಳನ್ನು ಸೃಷ್ಟಿಸಲು ಸಂಬಂಧಿಸಿದ ಉಪ ನಿರ್ದೇಶಕರು ಹಾಗೂ ಅವರ ಕಛೇರಿಯ ಸಿಬ್ಬಂದಿ, ಕ್ಷೇತ್ರ ಶಿಕ್ಷಣಾಧಿಕಾರಿಗಳು ಮತ್ತು ಕಛೇರಿ ಸಿಬ್ಬಂದಿಗಳು ಕಾರಣರೆಂಬ ವರದಿಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ, ಈ ಹಿಂದೆ ಹಾಸನ ಹಾಗೂ ಚಿಕ್ಕಮಗಳೂರು ಜಿಲ್ಲೆಗಳ ಹಿಂದಿನ ಉಪ ನಿರ್ದೇಶಕರು ಹಾಗೂ ಚಿಕ್ಕಮಗಳೂರು ಜಿಲ್ಲೆಯ ಹಾಲಿ ನಿರ್ದೇಶಕರುಗಳು ನಿಯಮಬಾಹಿರ ಕರ್ತವ್ಯ ನಿರ್ವಹಣೆ ಕಾರಣವೆಂದು ಅವರುಗಳ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ಸಿಸಿಎ) ನಿಯಮಾವಳಿಗಳು 1957 ರನ್ವಯ ಶಿಸ್ತು ಕ್ರಮ ಜರುಗಿಸುವುದು ಅವಶ್ಯವೆಂದು ಸರ್ಕಾರವು ಭಾವಿಸಿ, ಮೇಲ್ಕಂಡ ಶಾಲೆಗಳ ಮಾನ್ಯತೆ ನವೀಕರಣ ಮತ್ತು ಸ್ಥಳಾಂತರ ಪ್ರಸ್ತಾವನೆಗಳ ಸುಳ್ಳು ದಾಖಲೆಗಳನ್ನು ಸೃಷ್ಟಿಸುವಲ್ಲಿ ಈ ಕೆಳಕಂಡ ಅಧಿಕಾರಿಗಳು ಹೊಣೆಗಾರರೆಂದು ಗುರುತಿಸಿ, ಮೇಲೆ ಓದಲಾದ ಕ್ರಮ ಸಂಖ್ಯೆ (2) ರಲ್ಲಿ ಅವರುಗಳ ಮೇಲೆ ಶಿಸ್ತು ಕ್ರಮ ಬಾಕಿ ಇರಿಸಿ, ಕರ್ನಾಟಕ ನಾಗರೀಕ ಸೇವಾ (ಸಿಸಿಎ) ನಿಯಮಾವಳಿಗಳು 1957 ರ ನಿಯಮ-10ರನ್ವಯ ಅಮಾನತ್ತುಗೊಳಿಸಲಾಗಿತ್ತು.

1. ಶ್ರೀಮತಿ ಪಿ. ಪದ್ಮಮ್ಮ, ಹಿಂದಿನ ಉಪ ನಿರ್ದೇಶಕರು (ಆಡಳಿತ) ಸಾಶಿಇ ಹಾಸನ ಜಿಲ್ಲೆ (ಹಾಲಿ ಉಪ ನಿರ್ದೇಶಕರು, ಅಪರ ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ).
2. ಶ್ರೀ ಮಂಟೇಲಿಂಗಾಚಾರಿ ಹಿಂದಿನ ಉಪ ನಿರ್ದೇಶಕರು (ಆಡಳಿತ) ಸಾಶಿಇ ಚಿಕ್ಕಮಗಳೂರು ಜಿಲ್ಲೆ (ಹಾಲಿ ಉಪ ನಿರ್ದೇಶಕರು (ಆಡಳಿತ) ಸಾರ್ವಜನಿಕ ಶಿಕ್ಷಣ ಇಲಾಖೆ, ಕೊಪ್ಪಳ ಜಿಲ್ಲೆ).
3. ಶ್ರೀ ಎಲ್. ರಂಗಪ್ಪ, ಉಪ ನಿರ್ದೇಶಕರು (ಆಡಳಿತ) ಸಾರ್ವಜನಿಕ ಶಿಕ್ಷಣ ಇಲಾಖೆ ಚಿಕ್ಕಮಗಳೂರು ಜಿಲ್ಲೆ.

ಮೇಲೆ ಓದಲಾದ ಕ್ರಮ ಸಂಖ್ಯೆ (3) ರಲ್ಲಿ ಈ ಪ್ರಕರಣದಲ್ಲಿ ಭಾಗಿಯಾಗಿದ್ದರೆನ್ನಲಾದ ಸಂಬಂಧಿಸಿದ ಜಿಲ್ಲಾ, ಆಯುಕ್ತಾಲಯ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು, ಸೇರಿದಂತೆ ಜಿಲ್ಲಾ ಉಪ ನಿರ್ದೇಶಕರ ಕಛೇರಿ ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಯ ಅಧಿಕಾರಿ ಸಿಬ್ಬಂದಿಗಳ ಹೆಸರುಗಳನ್ನು ಗುರುತಿಸಿ, ಸರ್ಕಾರಕ್ಕೆ ಒದಗಿಸುವಂತೆಕೋರಲಾಗಿತ್ತು.

ಆನಂತರ ಈ ಪ್ರಕರಣದಲ್ಲಿ ಭಾಗಿಯಾಗಿದ್ದರೆಂದು ಗುರುತಿಸಲಾದ ಅಧಿಕಾರಿಗಳ ಪೈಕಿ ಶ್ರೀಮತಿ ನೂರ್‌ಜಹಾನ್ ಬೀ, ಇವರು ಸೇವೆಯಿಂದ ವಯೋನಿವೃತ್ತಿ ಹೊಂದಿರುವುದರಿಂದ ಅವರನ್ನು ಹೊರತುಪಡಿಸಿ, ಮೇಲೆ ಓದಲಾದ ಕ್ರಮ ಸಂಖ್ಯೆ (4) ರಲ್ಲಿ ಈ ಕೆಳಕಂಡ ಅಧಿಕಾರಿಗಳನ್ನು ಅವರುಗಳ ಮೇಲಿನ ಶಿಸ್ತು ಕ್ರಮ ಬಾಕಿ ಇರಿಸಿ, ಕರ್ನಾಟಕ ನಾಗರೀಕ ಸೇವಾ (ಸಿಸಿಎ) ನಿಯಮಾವಳಿಗಳು 1957ರ ನಿಯಮ-10ರನ್ವಯ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೂ ಅಮಾನತ್ತುಗೊಳಿಸಲಾಗಿತ್ತು.

1. ಶ್ರೀ ಸಿ. ಆರ್. ಪರಮೇಶ್ವರಪ್ಪ, ಕ್ಷೇತ್ರ ಶಿಕ್ಷಣಾಧಿಕಾರಿ, ತರೀಕೆರೆ ತಾಲ್ಲೂಕು.
2. ಶ್ರೀ ಜಯಣ್ಣ, ಕ್ಷೇತ್ರ ಶಿಕ್ಷಣಾಧಿಕಾರಿ, ಬೀರೂರು ವಲಯ, ಕಡೂರು ತಾಲ್ಲೂಕು
3. ಶ್ರೀಮತಿ ಬಿ. ಲಲಿತಾ, ಪತ್ರಾಂಕಿತ ವ್ಯವಸ್ಥಾಪಕರು, ಕ್ಷೇತ್ರ ಶಿಕ್ಷಣಾಧಿಕಾರಿ ಕಛೇರಿ, ಹಾಸನ.

4. ಶ್ರೀ ಸಿ.ಎನ್. ಲೋಕೇಶ್, ಪ್ರಭಾರಿ ಅಧೀಕ್ಷಕರು, ಉಪ ನಿರ್ದೇಶಕರ ಕಛೇರಿ, ಸಾಶಿಇ, ಹಾಸನ
5. ಶ್ರೀ ಬೆಟ್ಟೇಗೌಡ, ಪ್ರಥಮ ದರ್ಜೆ ಸಹಾಯಕ, ಉಪ ನಿರ್ದೇಶಕರ ಕಛೇರಿ, ಸಾಶಿಇ, ಹಾಸನ

ಮೇಲೆ ಓದಲಾದ ಕ್ರಮ ಸಂಖ್ಯೆ (5) ರಲ್ಲಿ ಶ್ರೀ ಸಿ. ಆರ್. ಪರಮೇಶ್ವರಪ್ಪ, ಕ್ಷೇತ್ರ ಶಿಕ್ಷಣಾಧಿಕಾರಿ, ತರೀಕೆರೆ ವಲಯ, ಚಿಕ್ಕಮಗಳೂರು ಜಿಲ್ಲೆ ಮತ್ತು ಶ್ರೀ ಕೆ. ಎನ್. ಜಯಣ್ಣ, ಕ್ಷೇತ್ರ ಶಿಕ್ಷಣಾಧಿಕಾರಿ, ಬೀರೂರು ವಲಯ, ಚಿಕ್ಕಮಗಳೂರು ಜಿಲ್ಲೆ, ಇವರುಗಳ ಮೇಲಿನ ಆರೋಪಗಳಿಗೆ ಇಲಾಖಾ ವಿಚಾರಣೆ ಹಾಗೂ ಶಿಸ್ತು ಕ್ರಮ ಕಾಯ್ದಿರಿಸಿ ಅಮಾನತ್ತು ತೆರವುಗೊಳಿಸಿ, ಸೇವೆಗೆ ಪುನರ್ ಸ್ಥಾಪಿಸಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (10) ರ ಆದೇಶಗಳಲ್ಲಿ ಶ್ರೀ ಎಲ್. ರಂಗಪ್ಪ ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಚಿಕ್ಕಮಗಳೂರು, ಇವರು ದಿನಾಂಕ : 30-06-2011 ರಂದು ಸರ್ಕಾರಿ ಸೇವೆಯಿಂದ ವಯೋನಿವೃತ್ತಿ ಹೊಂದಿರುವುದರಿಂದ, ಹಾಗೂ ಶ್ರೀಮತಿ ನೂರ್ ಜಹಾನ್ ಬೀ, ನಿವೃತ್ತ ಪತ್ರಾಂಕಿತ ಸಹಾಯಕರು, ಉಪ ನಿರ್ದೇಶಕರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ ಹಾಸನ. ಇವರು ಈಗಾಗಲೇ ಸರ್ಕಾರಿ ಸೇವೆಯಿಂದ ವಯೋನಿವೃತ್ತಿ ಹೊಂದಿರುವ ಕಾರಣ, ಸದರಿಯವರುಗಳ ಮೇಲಿನ ಆರೋಪಗಳಿಗೆ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳು 1958 ರ ನಿಯಮ-214 ರಡಿ ಶಿಸ್ತು ಕ್ರಮ ಜರುಗಿಸಲು ಸರ್ಕಾರದ ಅನುಮತಿ ನೀಡಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (7) ರಲ್ಲಿ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು, ಇವರು ಈ ಪ್ರಕರಣದಲ್ಲಿ ಕರ್ತವ್ಯ ನಿರ್ಲಕ್ಷತೆ ತೋರಿದ ಈ ಕೆಳಕಂಡ ಅಧಿಕಾರಿಗಳ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ಸಿಸಿಎ) ನಿಯಮಾವಳಿಗಳ ನಿಯಮ-11 ಮತ್ತು 13 ರಡಿಯಲ್ಲಿ ಜಂಟಿ ಶಿಸ್ತುಕ್ರಮ ಕೈಗೊಳ್ಳಲು ಕರಡು ದೋಷಾರೋಪಣಾ ಪಟ್ಟಿಯನ್ನು ಅನುಬಂಧ-1 ರಿಂದ 4 ನ್ನು ಸರ್ಕಾರಕ್ಕೆ ಸಲ್ಲಿಸಿದ್ದರು.

1. ಶ್ರೀಮತಿ ಪದ್ಮಮ್ಮ, ರೀಡರ್, ಶಿಕ್ಷಕರ ಶಿಕ್ಷಣ ಮಹಾವಿದ್ಯಾಲಯ, ಮಂಗಳೂರು.
2. ಶ್ರೀ ಮಂಟೇಲಿಂಗಾಚಾರ್, ಉಪ ನಿರ್ದೇಶಕರು (ಆಡಳಿತ) ಕೊಪ್ಪಳ ಜಿಲ್ಲೆ
3. ಶ್ರೀ ಎಲ್. ರಂಗಪ್ಪ, ನಿವೃತ್ತ ಉಪ ನಿರ್ದೇಶಕರು, ಚಿಕ್ಕಮಗಳೂರು ಜಿಲ್ಲೆ
4. ಶ್ರೀ ಸಿ. ಆರ್. ಪರಮೇಶ್ವರಪ್ಪ, ಕ್ಷೇತ್ರ ಶಿಕ್ಷಣಾಧಿಕಾರಿ, ತರೀಕೆರೆ ವಲಯ.
5. ಶ್ರೀ ಕೆ. ಎನ್. ಜಯಣ್ಣ, ಕ್ಷೇತ್ರ ಶಿಕ್ಷಣಾಧಿಕಾರಿ, ಬೀರೂರು ವಲಯ.
6. ಶ್ರೀ ಸಿ.ಬಿ. ಜಯರಂಗ, ಕ್ಷೇತ್ರ ಶಿಕ್ಷಣಾಧಿಕಾರಿ, ಉತ್ತರ ವಲಯ-4, ಯಲಹಂಕ, ಬೆಂಗಳೂರು ಗ್ರಾಮಾಂತರ ಜಿಲ್ಲೆ.
7. ಶ್ರೀಮತಿ ನೂರ್ ಜಹಾನ್ ಬಿ. ನಿವೃತ್ತ ಹಿಂದಿನ ಪತ್ರಾಂಕಿತ ಸಹಾಯಕರು, ಉಪ ನಿರ್ದೇಶಕರ ಕಛೇರಿ, ಹಾಸನ.
8. ಶ್ರೀಮತಿ ಲಲಿತಾ ವ್ಯವಸ್ಥಾಪಕರು, ಕ್ಷೇತ್ರ ಶಿಕ್ಷಣಾಧಿಕಾರಿ .ಕಛೇರಿ, ಹಾಸನ.
9. ಶ್ರೀ ಎಲ್. ಬೋರಯ್ಯ, ಪ್ರಥಮ ದರ್ಜೆ ಸಹಾಯಕರು, ಆಯುಕ್ತರ ಕಛೇರಿ, ಬೆಂಗಳೂರು.
10. ಶ್ರೀ ಸಿ. ಎನ್. ಲೋಕೇಶ್, (ಅಮಾನತ್ತಿನಲ್ಲಿ) ಪ್ರಥಮ ದರ್ಜೆ ಸಹಾಯಕ, ಉಪ ನಿರ್ದೇಶಕರ ಕಛೇರಿ, ಹಾಸನ.
11. ಶ್ರೀ ಬೆಟ್ಟೇಗೌಡ, (ಅಮಾನತ್ತಿನಲ್ಲಿ) ಪ್ರಥಮ ದರ್ಜೆ ಸಹಾಯಕ, ಉಪ ನಿರ್ದೇಶಕರ ಕಛೇರಿ, ಹಾಸನ.

ಮುಂದುವರೆದು ಇಂತಹದೇ ಪ್ರಕರಣದಲ್ಲಿ ಭಾಗಿಯಾಗಿದ್ದರೆನ್ನಲಾದ ಶ್ರೀ ಜಿ. ರಂಗನಾಥಸ್ವಾಮಿ, ಕ್ಷೇತ್ರ ಶಿಕ್ಷಣಾಧಿಕಾರಿ, ಕಡೂರು, ಚಿಕ್ಕಮಗಳೂರು ಜಿಲ್ಲೆ, ಇವರಿಗೆ ಸಂಬಂಧಿಸಿದಂತೆ ಶಿಸ್ತು ಕ್ರಮ ಜರುಗಿಸುವ ಕುರಿತು ಮೇಲೆ ಓದಲಾದ ಕ್ರಮ ಸಂಖ್ಯೆ (8) ರಲ್ಲಿ ಸದರಿಯವರ ಹೆಸರನ್ನು ಸಹ ಜಂಟಿ ಶಿಸ್ತುಕ್ರಮದಲ್ಲಿ ಸೇರ್ಪಡೆ ಮಾಡಲು ಅನುಮೋದನೆ ಪಡೆದುಕೊಳ್ಳಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (6) ರಲ್ಲಿ ಶ್ರೀಮತಿ ಬಿ. ಲಲಿತಾ ಪತ್ರಾಂಕಿತ ವ್ಯವಸ್ಥಾಪಕರು, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ಹಾಸನ ಇವರ ವಿರುದ್ಧ ಶಿಸ್ತು ಕ್ರಮ ಕಾಯ್ದಿರಿಸಿ, ಸೇವೆಗೆ ಪುನರ್ ಸ್ಥಾಪಿಸಲಾಗಿದೆ. ಮೇಲೆ ಓದಲಾದ ಕ್ರಮ ಸಂಖ್ಯೆ (11) ರಲ್ಲಿ ಶ್ರೀ ಸಿ. ಎನ್. ಲೋಕೇಶ್ ಮತ್ತು ಶ್ರೀ ಸಿ. ಆರ್. ಬೆಟ್ಟೇಗೌಡ, ಪ್ರಥಮ ದರ್ಜೆ ಸಹಾಯಕ, ಇವರುಗಳ ವಿರುದ್ಧ ಶಿಸ್ತು ಕ್ರಮ ಕಾಯ್ದಿರಿಸಿ, ಸೇವೆಗೆ ಪುನರ್ ಸ್ಥಾಪಿಸಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (9) ರಲ್ಲಿ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು, ಇವರ ಪ್ರಸ್ತಾವನೆಯನ್ನು ಆಧರಿಸಿ ಪ್ರಕರಣದ ಗಂಭೀರತೆಯ ಹಿನ್ನೆಲೆಯಲ್ಲಿ ಈ ಪ್ರಕರಣದಲ್ಲಿ ಆರೋಪಿತರೆಂದು ಗುರುತಿಸಲಾಗಿರುವ ಒಟ್ಟು 12 ಅಧಿಕಾರಿಗಳ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ಸಿಸಿಎ) ನಿಯಮಾವಳಿಗಳು 1957 ರ ನಿಯಮ-11 ಮತ್ತು 13 ರಡಿ ಜಂಟಿ ಶಿಸ್ತು ಕ್ರಮ ಜರುಗಿಸಲು ಕಾರಣ ಕೇಳುವ ನೋಟೀಸುಗಳನ್ನು ಜಾರಿಗೊಳಿಸಲಾಗಿತ್ತು. ಆರೋಪಿತ ಅಧಿಕಾರಿ/ನೌಕರರು ನಿಗಧಿತ ಕಾಲಾವಧಿಯಲ್ಲಿ ಅಧಿಕಾರಿ ಪ್ರತಿರಕ್ಷಣಾ ಹೇಳಿಕೆಗಳನ್ನು ಸಲ್ಲಿಸಿರುವುದಿಲ್ಲ. ಆದರೆ, 07 ಆರೋಪಿತ ಅಧಿಕಾರಿ ನೌಕರರುಗಳ ಮೇಲೆ ಓದಲಾದ ಕ್ರಮ ಸಂಖ್ಯೆ (12) ರಿಂದ (20) ರವರೆಗೆ ಸಲ್ಲಿಸಿರುವ ಲಿಖಿತ ಹೇಳಿಕೆಗಳಲ್ಲಿ ತಮ್ಮ ಮೇಲಿನ ಆರೋಪಗಳನ್ನು ಅಲ್ಲಗಳೆದು ತಮ್ಮನ್ನು ಆರೋಪದಿಂದ ಮುಕ್ತಗೊಳಿಸುವಂತೆ ಕೋರಿದ್ದಾರೆ. ಹಾಗೂ ಉಳಿದ 05 ಅಧಿಕಾರಿ ನೌಕರರುಗಳು ತಮ್ಮ ಪ್ರತಿರಕ್ಷಣಾ ಹೇಳಿಕೆಗಳನ್ನು ಸಲ್ಲಿಸಿರುವುದಿಲ್ಲ. ಆನಂತರ ಶ್ರೀಮತಿ ವೈ.ಎಂ.ನೂರ್ ಜಹಾನ್ ಬೀ. ನಿವೃತ್ತ ಪತ್ರಾಂಕಿತ ಸಹಾಯಕರು ಮತ್ತು ಶ್ರೀಮತಿ ಬಿ. ಲಲಿತಾ, ಪತ್ರಾಂಕಿತ ವ್ಯವಸ್ಥಾಪಕರು ಇವರು ತಮ್ಮ ಪ್ರತಿರಕ್ಷಣಾ ಹೇಳಿಕೆಗಳನ್ನು ದಿನಾಂಕ : 11-01-2012 ಮತ್ತು 16-01-2012 ರಲ್ಲಿ ಸಲ್ಲಿಸಿದ್ದಾರೆ.

ಈ ಪ್ರಕರಣದಲ್ಲಿ ಆರೋಪಿತ ಅಧಿಕಾರಿಗಳು ಸಲ್ಲಿಸಿರುವ ತಮ್ಮ ಪ್ರತಿರಕ್ಷಣಾ ಹೇಳಿಕೆಗಳಲ್ಲಿ ಅವರುಗಳ ಮೇಲಿನ ಆರೋಪಗಳನ್ನು ಅಲ್ಲಗಳೆದಿರುವುದರಿಂದ ಹಾಗೂ ಮೂವರು ಅಧಿಕಾರಿಗಳು ಪ್ರತಿರಕ್ಷಣಾ ಹೇಳಿಕೆಗಳನ್ನು ಸಲ್ಲಿಸದೇ ಇರುವುದರಿಂದ ಈ ಪ್ರಕರಣದ ಸತ್ಯಾಸತ್ಯತೆಯನ್ನು ತಿಳಿದುಕೊಳ್ಳಲು ವಿಚಾರಣೆ ಮಾಡುವುದು ಸೂಕ್ತವೆಂದು ನಿರ್ಣಯಿಸಿ, ಕರ್ನಾಟಕ ನಾಗರೀಕ ಸೇವಾ (ಸಿ.ಸಿ.ಎ) ನಿಯಮಾವಳಿಗಳು 1957 ರ ನಿಯಮ-11 ಹಾಗೂ 13 ರ ಅಡಿಯಲ್ಲಿ ವಿಚಾರಣಾಧಿಕಾರಿ ಹಾಗೂ ಮಂಡನಾಧಿಕಾರಿಗಳನ್ನು ನೇಮಕ ಮಾಡಲು ಸೂಕ್ತವೆಂದು ನಿರ್ಧರಿಸಿ ಅದರಂತೆ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಇಡಿ 17 ಡಿಜಿಪಿ 2011, ಬೆಂಗಳೂರು, ದಿನಾಂಕ: 14ನೇ ಮಾರ್ಚ್ 2012

ಪ್ರಸ್ತಾವನೆಯಲ್ಲಿ ವಿವರಿಸಿದಂತೆ ಚಿಕ್ಕಮಗಳೂರು, ಹಾಸನ ಮತ್ತು ಕೊಡಗು ಜಿಲ್ಲೆಗಳಲ್ಲಿ ಪ್ರೌಢಶಾಲೆಗಳ ಸ್ಥಳಾಂತರ/ಹಸ್ತಾಂತರದ ಹೆಸರಿನಲ್ಲಿ ನಡೆದಿರುವ ಅಕ್ರಮಗಳಿಗೆ ಸಂಬಂಧಿಸಿದ ಪ್ರಕರಣದಲ್ಲಿ ಕರ್ತವ್ಯ ನಿರ್ಲಕ್ಷತೆ ತೋರಿದ ಈ ಕೆಳಕಂಡ ಅಧಿಕಾರಿಗಳ ಮೇಲಿನ ಆರೋಪಗಳ ಬಗ್ಗೆ ವಿಚಾರಣೆ ನಡೆಸಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957 ರ ನಿಯಮ-11 ಮತ್ತು 13 ರಡಿ ಇಲಾಖಾ ವಿಚಾರಣೆ ನಡೆಸಲು ನಿಯಮ-11 (2) ರಡಿಯಲ್ಲಿ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಶ್ರೀ ಕುಕ್ಕಾಜೆ ರಾಮಕೃಷ್ಣಭಟ್, ವಿಚಾರಣಾಧಿಕಾರಿ, ನಿವೃತ್ತ ನ್ಯಾಯಾಧೀಶರು, ನಂ. 2, 1ನೇ ಕ್ರಾಸ್, ಜುಡಿಷಿಯಲ್ ಲೇಔಟ್, ಸಂಜಯನಗರ, ಬೆಂಗಳೂರು-560 094 ಇವರನ್ನು ಈ

ಪ್ರಕರಣದಲ್ಲಿ ವಿಚಾರಣಾಧಿಕಾರಿಯನ್ನಾಗಿಯೂ ಹಾಗೂ ನಿಯಮ-11 (5) ರ ಮೇರೆಗೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ಬಸವೇಗೌಡ, ಪ್ರಾಂಶುಪಾಲರು, ಡಯಟ್, ಚಿಕ್ಕಮಗಳೂರು, ಇವರನ್ನು ಮಂಡನಾಧಿಕಾರಿಯನ್ನಾಗಿಯೂ ನೇಮಿಸಿ ಆದೇಶಿಸಿದೆ.

1. ಶ್ರೀಮತಿ ಪದ್ಮಮ್ಮ, ರೀಡರ್, ಶಿಕ್ಷಕರ ಶಿಕ್ಷಣ ಮಹಾವಿದ್ಯಾಲಯ, ಮಂಗಳೂರು.
2. ಶ್ರೀ ಮಂಟೇಲಿಂಗಾಚಾರ್, ಉಪ ನಿರ್ದೇಶಕರು (ಆಡಳಿತ) ಕೊಪ್ಪಳ ಜಿಲ್ಲೆ.
3. ಶ್ರೀ ಎಲ್. ರಂಗಪ್ಪ, ನಿವೃತ್ತ ಉಪ ನಿರ್ದೇಶಕರು, ಚಿಕ್ಕಮಗಳೂರು ಜಿಲ್ಲೆ.
4. ಶ್ರೀ ಸಿ. ಆರ್. ಪರಮೇಶ್ವರಪ್ಪ, ಕ್ಷೇತ್ರ ಶಿಕ್ಷಣಾಧಿಕಾರಿ, ತರೀಕೆರೆ ವಲಯ.
5. ಶ್ರೀ ಕೆ. ಎನ್. ಜಯಣ್ಣ, ಕ್ಷೇತ್ರ ಶಿಕ್ಷಣಾಧಿಕಾರಿ, ಬೀರೂರು ವಲಯ.
6. ಶ್ರೀ ಸಿ. ಬಿ. ಜಯರಂಗ, ಕ್ಷೇತ್ರ ಶಿಕ್ಷಣಾಧಿಕಾರಿ, ಉತ್ತರ ವಲಯ-4, ಯಲಹಂಕ, ಬೆಂಗಳೂರು ಗ್ರಾಮಾಂತರ ಜಿಲ್ಲೆ.
7. ಶ್ರೀಮತಿ ನೂರ್ ಜಹಾನ್ ಬಿ. ನಿವೃತ್ತ ಹಿಂದಿನ ಪತ್ರಾಂಕಿತ ಸಹಾಯಕರು, ಉಪ ನಿರ್ದೇಶಕರ ಕಛೇರಿ, ಹಾಸನ.
8. ಶ್ರೀಮತಿ ಲಲಿತಾ ವ್ಯವಸ್ಥಾಪಕರು, ಕ್ಷೇತ್ರ ಶಿಕ್ಷಣಾಧಿಕಾರಿ ಕಛೇರಿ, ಹಾಸನ.
9. ಶ್ರೀ ಎಲ್. ಬೋರಯ್ಯ, ಪ್ರಥಮ ದರ್ಜೆ ಸಹಾಯಕರು, ಆಯುಕ್ತರ ಕಛೇರಿ, ಬೆಂಗಳೂರು.
10. ಶ್ರೀ ಸಿ. ಎನ್. ಲೋಕೇಶ್, ಪ್ರಥಮ ದರ್ಜೆ ಸಹಾಯಕ, ಸರ್ಕಾರಿ ಪ್ರೌಢಶಾಲೆ, ಬೆಳವಾಡಿ, ಅರಕಲಗೂಡು ತಾ : ಹಾಸನ ಜಿಲ್ಲೆ.
11. ಶ್ರೀ ಸಿ. ಆರ್. ಬೆಟ್ಟೇಗೌಡ, ಪ್ರಥಮ ದರ್ಜೆ ಸಹಾಯಕ, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ಕೃಷ್ಣರಾಜಪೇಟೆ, ಮಂಡ್ಯ ಜಿಲ್ಲೆ.
12. ಶ್ರೀ ಜಿ. ರಂಗನಾಥಸ್ವಾಮಿ, ಕ್ಷೇತ್ರ ಶಿಕ್ಷಣಾಧಿಕಾರಿ, ಕಡೂರು ವಲಯ.

ವಿಚಾರಣೆ ನಡೆಸಲು ಸ್ಥಳಾವಕಾಶ ಹಾಗೂ ಶೀಘ್ರಲಿಪಿಗಾರರ/ಬೆರಳಚ್ಚುಗಾರರ ಸೇವೆಯನ್ನು ವಿಚಾರಣಾಧಿಕಾರಿಗೆ ಒದಗಿಸಲು ಹಾಗೂ ವಿಚಾರಣಾಧಿಕಾರಿಗಳು ವಿಚಾರಣಾ ವರದಿ ಸಲ್ಲಿಸಿದ ನಂತರ ಅವರಿಗೆ ಸಂಭಾವನೆಯನ್ನು ಮತ್ತು ಸಾರಿಗೆ ಭತ್ಯೆಯನ್ನು ಸೇರಿದಂತೆ ಒಟ್ಟು ರೂ. 15,000/- (ರೂ. ಹದಿನೈದು ಸಾವಿರ ಮಾತ್ರ) ಮಂಜೂರು ಮಾಡುವಂತೆ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು, ಇವರಿಗೆ ಸೂಚಿಸಿದೆ.

ವಿಚಾರಣಾಧಿಕಾರಿಗಳು ಪ್ರತಿ ಆರೋಪದ ಬಗ್ಗೆ ನಿಯಮಾನುಸಾರ ವಿಚಾರಣೆ ನಡೆಸಿ, ಸ್ಪಷ್ಟ ನಿರ್ಣಯಗಳನ್ನೊಳಗೊಂಡ ವಿಚಾರಣಾ ವರದಿಯನ್ನು ಈ ಆದೇಶ ತಲುಪಿದ 2 ತಿಂಗಳೊಳಗಾಗಿ ಶಿಸ್ತು ಪ್ರಾಧಿಕಾರಕ್ಕೆ ಸಲ್ಲಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್.925

ಎಸ್.ಬಿ. ಸಸಾಲಟ್ಟಿ
ಸರ್ಕಾರದ ಅಧೀನ ಕಾರ್ಯದರ್ಶಿ
ಶಿಕ್ಷಣ ಇಲಾಖೆ (ಆಡಳಿತ)

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ವಿಷಯ: ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕೆ ಮತ್ತು ಹೂಡಿಕೆ ಆಯುಕ್ತರು, ಕರ್ನಾಟಕ ಎಂಬ ಹುದ್ದೆಯನ್ನು ತಾತ್ಕಾಲಿಕವಾಗಿ ಸೃಜಿಸುವ ಬಗ್ಗೆ.-

ಓದಲಾಗಿದೆ: ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯ ಕಡತ ಸಂಖ್ಯೆ: ಸಿಐ 65 ಎಸ್‌ಪಿಐ 2012ರ ಟಿಪ್ಪಣಿ

ಪ್ರಸ್ತಾವನೆ:

ಮೇಲೆ ಓದಲಾದ ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯ ಕಡತದಲ್ಲಿ ಜೂನ್ 2012ರಲ್ಲಿ ನಡೆಯಲಿರುವ GIM-2012 (Global Investors Meet, 2012) ಕಾರ್ಯಕ್ರಮದ ಅಂಗವಾಗಿ ಬಂಡವಾಳ ಹೂಡಿಕೆದಾರರ ಮತ್ತು FICCI,CII ಮತ್ತು ಕೇಂದ್ರ ಸರ್ಕಾರದ ವಿದೇಶಾಂಗ ವ್ಯವಹಾರಗಳ ಮಂತ್ರಾಲಯಗಳೊಂದಿಗೆ ಕರ್ನಾಟಕ ರಾಜ್ಯದ ಪರವಾಗಿ ಸಮನ್ವಯ ನಡೆಸುವ/ಚರ್ಚಿಸಲು ನಿವಾಸಿ ಆಯುಕ್ತರು, ಕರ್ನಾಟಕ ಭವನ, ನವದೆಹಲಿ ಇವರನ್ನು ಪದನಿಮಿತ್ತ ಸರ್ಕಾರದ ಕಾರ್ಯದರ್ಶಿ, ಕೈಗಾರಿಕೆ/ಹೂಡಿಕೆ. ಕರ್ನಾಟಕ ಸರ್ಕಾರ ಎಂದು ಮರು ಪದನಾಮೀಕರಿಸಲು ಕೋರಿರುತ್ತಾರೆ. ಆದರೆ, ತಾಂತ್ರಿಕ ಹಾಗೂ ಆಡಳಿತಾತ್ಮಕ ಹಿತದೃಷ್ಟಿಯಿಂದ GIM-2012 ಮುಗಿಯುವವರೆಗೆ ತಾತ್ಕಾಲಿಕವಾಗಿ ಸರ್ಕಾರದ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕೆ ಮತ್ತು ಹೂಡಿಕೆ ಆಯುಕ್ತರು, ಕರ್ನಾಟಕ ಎಂಬ ಹೊಸ ಹುದ್ದೆಯನ್ನು ಸೃಜಿಸಿ, ಈ ಹುದ್ದೆಯ ಹೆಚ್ಚುವರಿ ಪ್ರಭಾರವನ್ನು ನಿವಾಸಿ ಆಯುಕ್ತರು, ನವದೆಹಲಿ ಇವರಿಗೆ ವಹಿಸಲು ಪ್ರಸ್ತಾಪಿಸಿದ್ದು. ಈ ಪ್ರಸ್ತಾವನೆಗೆ ಆರ್ಥಿಕ ಇಲಾಖೆಯ ಸಹಮತಿ ವ್ಯಕ್ತಪಡಿಸಿರುತ್ತದೆ.

ಈ ಪ್ರಸ್ತಾವನೆಯನ್ನು ಪರಿಶೀಲಿಸಿದ ಸರ್ಕಾರವು; ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 175 ಸಅಸೇ 2012, ಬೆಂಗಳೂರು, ದಿನಾಂಕ 15-03-2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ 2012ರ GIM ಅಂಗವಾಗಿ ಬಂಡವಾಳ ಹೂಡಿಕೆದಾರರ ಮತ್ತು ಸರ್ಕಾರದ ಮಧ್ಯೆ ಸಮನ್ವಯ ನಡೆಸಲು ಸದರಿ 2012ರ GIM ಮುಗಿಯುವವರೆಗೆ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕೆ ಮತ್ತು ಹೂಡಿಕೆ ಆಯುಕ್ತರು, ಕರ್ನಾಟಕ ಎಂಬ ಹುದ್ದೆಯನ್ನು ತಾತ್ಕಾಲಿಕವಾಗಿ ಸೃಜಿಸಲಾಗಿದೆ. ಸದರಿ ಹುದ್ದೆಯಲ್ಲಿ ನಿವಾಸಿ ಆಯುಕ್ತರು, ಕರ್ನಾಟಕ ಭವನ, ನವದೆಹಲಿ ಇವರನ್ನು ಹೆಚ್ಚುವರಿ ಪ್ರಭಾರದಲ್ಲಿರಿಸಿ, ಆದೇಶಿಸಲಾಗಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 1159 ಪ್ರ.ಕಾ/2012, ದಿನಾಂಕ 7-3-2012ರಲ್ಲಿ ನೀಡಿರುವ ಸಹಮತಿ ಮೇರೆಗೆ ಆದೇಶವನ್ನು ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಎ. ಆರ್. ವಿಜಯಾನಂದ ಶರ್ಮ
ಸರ್ಕಾರದ ಅಧೀನ ಕಾರ್ಯದರ್ಶಿ
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವೆಗಳು-3)

ಪಿ.ಆರ್. 926

WPP-47

ಕರ್ನಾಟಕ ರಾಜಪತ್ರ

[illegible] (ಪ್ರ[illegible]) || ಸಂಚಿಕೆ ೧೮

ವಿಷಯಸೂಚಿ

ವಿಶೇಷ ರಾಜ್ಯಪತ್ರಗಳು

ದಿನಾಂಕ 03–05–2012

ವಿಶೇಷ ರಾಜ್ಯಪತ್ರ ಸಂಖ್ಯೆ	ಪ್ರಕಟಣೆ ದಿನಾಂಕ	ಅಧಿಸೂಚನೆ ಸಂಖ್ಯೆ ಮತ್ತು ದಿನಾಂಕ
254	**31-03-2012**	**ಸಂಖ್ಯೆ: ಗ್ರಾಅಪ 181 ಗ್ರಾಪಂಕಾ 2011, ಬೆಂಗಳೂರು, ದಿನಾಂಕ: 31–03–2012**
255	**31-03-2012**	**No. AGD 39 ANE 2011, Bangalore, Dated : 28/03/2012**
257	**31-03-2012**	**ಸರ್ಕಾರಿ ಆದೇಶ ಸಂಖ್ಯೆ: ಆಇ 03 ಪಿಇಎಸ್ 2012, ಬೆಂಗಳೂರು, ದಿನಾಂಕ: 31–03–2012.**
260	**02-04-2012**	**ಸಂಖ್ಯೆ: ಜ12/ಪ್ರೌಶಾಶಿನೇ/01/2012–13, ದಿನಾಂಕ: 02ನೇ ಏಪ್ರಿಲ್ 2012**
261	**02-04-2012**	**ಸಂಖ್ಯೆ: ಇ1(3) ಆದರ್ಶ/ಪ್ರೌಶಾಶಿನೇ 01/2012–13, ದಿನಾಂಕ: 02ನೇ ಏಪ್ರಿಲ್ 2012**
263	**03-04-2012**	**ಸಂಖ್ಯೆ: ನಅಇ 74 ಎಂಎಲ್ಆರ್ 2012, ಬೆಂಗಳೂರು, ದಿನಾಂಕ: 3ನೇ ಏಪ್ರಿಲ್, 2012**
264	**07-04-2012**	**ಸಂಖ್ಯೆ: ಗ್ರಾಅಪ 356 ಪಬವ 2011, ಬೆಂಗಳೂರು, ದಿನಾಂಕ: 5/4/2012**
265	**09-04-2012**	**ನಂ. ಚುನಾವಣೆ (2) ಸಿಆರ್ 198/10–11, ದಿನಾಂಕ: 09–04–2012**
266	**09-04-2012**	**ಸರ್ಕಾರಿ ಆದೇಶ ಸಂಖ್ಯೆ: ಸಇ 48 ಸಸಂನೋ 2008, ಬೆಂಗಳೂದು, ದಿನಾಂಕ: 9–4–2012**
267	**09-04-2012**	**ಸಂಖ್ಯೆ: ಸಿಎಂಡಬ್ಲ್ಯೂ/02/ಸಿಎಪಿ/2006, ಬೆಂಗಳೂರು, ದಿನಾಂಕ: 8.3.2012**
268	**09-04-2012**	**ಸಂಖ್ಯೆ: ಗ್ರಾಅಪ 38 ಪಬವ 2012, ಬೆಂಗಳೂರು, ದಿನಾಂಕ: 9.4.2012**
269	**11-04-2012**	**No. FD 57 CSL 2012, Bangalore, Dated: 11.04.2012**
270	**11-04-2012**	**No. ED 60 TPU 2010(P-4), Bangalore, dated 11th April 2012**
271	**12-04-2012**	**ಸಂಖ್ಯೆ: ನಅಇ 74 ಎಂಎಲ್ಆರ್ 2012, ಬೆಂಗಳೂರು, ದಿನಾಂಕ 10ನೇ ಏಪ್ರಿಲ್ 2012**
272	**12-04-2012**	**ಸಂಖ್ಯೆ: ಸಿಆಸುಇ 15 ಎಸ್ಎಂಆರ್ 2010, ಬೆಂಗಳೂರು, ದಿನಾಂಕ: 12.4.2012**
273	**13-04-2012**	**ಸಂಖ್ಯೆ: ಅ1/ಪ್ರೌಶಾಶಿನೇ/01/2012–13, ಬೆಂಗಳೂರು, ದಿನಾಂಕ: 12ನೇ ಏಪ್ರಿಲ್ 2012**
277	**13-04-2012**	**ಸಂಖ್ಯೆ: ಪಪೂಶಿ ವಿಶೇಷ ನೇಮಕ 01/2011–12, ಬೆಂಗಳೂರು, ದಿನಾಂಕ: 13–04–2012**
281	**17-04-2012**	**ಸಂಖ್ಯೆ: ಆರ್‌ಡಿ 241 ಎಲ್‌ಜಿಬಿ 2012, ಬೆಂಗಳೂರು, ದಿನಾಂಕ: 10ನೇ ಏಪ್ರಿಲ್, 2012**

ಕರ್ನಾಟಕ ರಾಜ್ಯಪತ್ರವನ್ನು ಅಂತರಜಾಲದಲ್ಲಿ ವೀಕ್ಷಿಸಬಹುದು.
http//www.gazette.kar.nic.in

ಕರ್ನಾಟಕ ರಾಜ್ಯಪತ್ರವನ್ನು ಅಂತರಜಾಲದಲ್ಲಿ ವೀಕ್ಷಿಸಬಹುದು.
http//www.gazette.kar.nic.in

೨೦೧೨-೨೦೧೩ನೇ ಇಸವಿಯ ಕರ್ನಾಟಕ ರಾಜ್ಯಪತ್ರದ ಪರಿಷ್ಕೃತ ಚಂದಾ ದರ

2.	ಭಾಗ – 2	....		
3.	ಭಾಗ – 3	....	38-00	1556-00
4.	ಭಾಗ – 4	....	3-00	147-00
5.	ಭಾಗ – 4ಎ	....	19-00	794-00
6.	ಭಾಗ – 5	....	18-00	748-00
7.	ಭಾಗ – 6	(ಬೆಂಗಳೂರು)	11-00	454-00
8.	ಭಾಗ – 6ಎ	(ಮೈಸೂರು)	41-00	1596-00
9.	ಭಾಗ – 6ಬಿ	(ಧಾರವಾಡ)	86-00	3375-00
10.	ಭಾಗ – 6ಸಿ	(ಗುಲ್ಬರ್ಗ)	58-00	2317-00
11.	ಸಂಪೂರ್ಣ ಕರ್ನಾಟಕ ರಾಜ್ಯಪತ್ರ ಕ್ರ.ಸಂ. 1 ರಿಂದ 7 .... (ಭಾಗ–1 ರಿಂದ 6) ವಿಶೇಷ ರಾಜ್ಯಪತ್ರವನ್ನು ಹೊರತುಪಡಿಸಿ		127-00	5286-00
12.	ವಿಶೇಷ ರಾಜ್ಯಪತ್ರಗಳನ್ನು ಸಂಬಂಧಪಟ್ಟ ಇಲಾಖೆಗಳಿಂದ ಪಡೆಯಿರಿ ಮತ್ತು ಸರ್ಕಾರಿ ಪುಸ್ತಕ ಮಳಿಗೆಗಳಲ್ಲಿ ಮಾರಾಟಕ್ಕೆ ಲಭ್ಯವಿರುತ್ತವೆ,			

೨೦೧೨-೨೦೧೩ನೇ ಇಸವಿಯ ಕರ್ನಾಟಕ ರಾಜ್ಯಪತ್ರದ ಪ್ರಕಟಣೆ ದರ

ಕ್ರಮ ಸಂಖ್ಯೆ	ಪ್ರಕಟಣೆ ದರಗಳು		ಮೊತ್ತ ರೂ. ಪೈ.
1.	ಸ್ಥಳೀಯ / ಸ್ಥಾನಿಕ ಸಂಸ್ಥೆ ಮತ್ತು ಸರ್ಕಾರದ ಇಲಾಖೆ ಎ–4 ಅಳತೆಯ ಪ್ರತಿ ಪುಟಕ್ಕೆ	...	653-00
	ಪ್ರತಿ ಸಾಲನ್ನು ಎ–4 ಅಳತೆಯಲ್ಲಿ 10 ಪಾಯಿಂಟ್‌ಗಳಿಗೆ ಇಳಿಸಲಾಗಿದೆ	...	16-00
2.	ಖಾಸಗಿ ಸಂಸ್ಥೆ ಮತ್ತು ವಾಣಿಜ್ಯಕ್ಕೆ ಸಂಬಂಧಿಸಿದಂತೆ ಪಕ್ರಟಣೆ (ಕೆಪಿಟಿಸಿಎಲ್, ಬಿ.ಡಬ್ಲ್ಯೂ.ಎಸ್.ಎಸ್.ಬಿ, ಬಿ.ಡಿ.ಎ, ಕೆ.ಜಿ.ಐ.ಡಿ. ಗೃಹ ಮಂಡಳಿ ಹಾಗೂ ಕಂಪನಿಗಳು ಮತ್ತು ಖಾಸಗಿ ಪ್ರಕಟಣೆ, ಸಾರ್ವಜನಿಕ ಸಂಸ್ಥೆಗಳು, ಕಾನೂನು ಸ್ಟ್ಯಾಚುಟರಿ ನಿಯಮಾವಳಿ, ನ್ಯಾಯಾಂಗ ಅಧಿಸೂಚನೆ, ಸರ್ಕಾರದ ಸಾಮ್ಯಕ್ಕೆ ಒಳಪಟ್ಟಿರುವ ಇಲಾಖೆಗಳು, ಬ್ಯಾಂಕಿಗೆ ಸಂಬಂಧಿಸಿದ ಪ್ರಕಟಣೆಗಳು ಹಾಗೂ ಸಾರಿಗೆ ಸಂಸ್ಥೆಗಳು) ಇತ್ಯಾದಿ ಪ್ರತಿ ಪುಟಕ್ಕೆ	...	980-00
	ಪ್ರತಿ ಸಾಲನ್ನು ಎ4 ಅಳತೆಯಲ್ಲಿ 10 ಪಾಯಿಂಟ್‌ಗಳಿಗೆ ಇಳಿಸಲಾಗಿದೆ	...	24-00
3.	ಅರ್ಧ ಪುಟಕ್ಕೆ ಅಥವಾ ಕಾಲು ಪುಟಕ್ಕೆ ಬರುವ ವಿಷಯ	...	ಪುಟಕ್ಕೆ ದರ ನಿಗಧಿ ಕ್ರಮ ಸಂಖ್ಯೆ 1 ಮತ್ತು 2
4.	ಕಾಲು ಪುಟಕ್ಕಿಂತ ಕಡಿಮೆ ಇರುವ ವಿಷಯಕ್ಕೆ	...	ಕ್ರಮ ಸಂಖ್ಯೆ 1 ಮತ್ತು 2ರಲ್ಲಿ ನಮೂದಿಸಿರುವಂತೆ ಪ್ರತಿ ಸಾಲಿಗೆ ದರ ನಿಗದಿಪಡಿಸಿರುವುದು
5.	ಹೆಚ್ಚಾಗಿ ಬೇಕಾಗಿರುವ ಪ್ರತಿ ಹಾಳೆಯ ಬೆಲೆ (ಮುದ್ರಿಸಿರುವ ಹಾಳೆಯ ಅಳತೆಯನ್ನು ನಿರೂಪಿಸಿ)	...	1-00

ಸೂಚನೆ :– 1. ಚಂದಾ ಹಣದ / ಪ್ರಕಟಣಾ ವೆಚ್ಚದ ಮೊತ್ತವನ್ನು **"0058 ಲೇಖನ ಸಾಮಗ್ರಿ ಮತ್ತು ಮುದ್ರಣ (1) ರಾಜ್ಯಪತ್ರ ಮತ್ತು ಇತರ ಪ್ರಕಟಣಾ ವೆಚ್ಚಗಳು"** ಖಜಾನೆಗೆ ಸಲ್ಲಿಸಿ, ಮೂಲ ಚಲನನ್ನು ಮುಂದಿನ ಕ್ರಮಕ್ಕಾಗಿ ಈ ಕಛೇರಿಗೆ ಕಳುಹಿಸಬೇಕು.

2. ಭಾಗ VI–ಎ, VI–ಬಿ, VI–ಸಿ ಗಳನ್ನು ಅನುಕ್ರಮವಾಗಿ ಮೈಸೂರು, ಧಾರವಾಡ ಮತ್ತು ಗುಲ್ಬರ್ಗಾದ ಶಾಖಾ ಮುದ್ರಣಾಲಯಗಳಿಂದ ಪಡೆಯಬಹುದು.

3. ಕರ್ನಾಟಕ ರಾಜ್ಯಪತ್ರಕ್ಕಾಗಿ ಈ ಕೆಳಕಂಡ ವಿಳಾಸದಲ್ಲಿ ಪತ್ರ ವ್ಯವಹರಿಸತಕ್ಕದ್ದು.

ಸಂಕಲನಾಧಿಕಾರಿಗಳು,
ಕರ್ನಾಟಕ ರಾಜ್ಯಪತ್ರ,
ಸರ್ಕಾರಿ ಹೊರವಲಯ ಮುದ್ರಣಾಲಯ,
ಮೈಸೂರು ರಸ್ತೆ, ಬೆಂಗಳೂರು–59

ಮುದ್ರಕರು :–ನಿರ್ದೇಶಕರು, ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ಇಲಾಖೆ, ಬೆಂಗಳೂರು–59

WPP-47

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೪೭	ಬೆಂಗಳೂರು, ಗುರುವಾರ, ಮೇ ೩, ೨೦೧೨ (ವೈಶಾಖ ೧೩, ಶಕ ವರ್ಷ ೧೯೩೪)	ಸಂಚಿಕೆ ೧೮

ಭಾಗ – ೧

ರಾಜ್ಯ ಸರ್ಕಾರದ ಮುಖ್ಯ ಆದೇಶಗಳು ಹಾಗೂ ಸುತ್ತೋಲೆ ಮುಂತಾದ ಎಲ್ಲಾ ಇಲಾಖೆಗಳಿಗೂ ಸಂಬಂಧಿಸಿದ ಆದೇಶಗಳು

ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವಾಲಯ

ವಿಷಯ : ಶಾಸಕರ ಪ್ರದೇಶಾಭಿವೃದ್ಧಿ ಯೋಜನೆಯಡಿಯಲ್ಲಿ 2011–12ನೇ ಸಾಲಿನ ಮೂರನೇ ಕಂತಿನ ಅನುದಾನ ಬಿಡುಗಡೆ ಮಾಡುವ ಬಗ್ಗೆ

ಓದಲಾಗಿದೆ : 1. ಸರ್ಕಾರಿ ಆದೇಶ ಸಂಖ್ಯೆ: ಯೋಇ 69 ಯೋವಿವಿ 2011, ದಿನಾಂಕ: 04–06–2011.
2. ಸರ್ಕಾರಿ ಆದೇಶ ಸಂಖ್ಯೆ: ಯೋಇ 69 ಯೋವಿವಿ 2011, ದಿನಾಂಕ: 06–06–2011.
3. ಸರ್ಕಾರಿ ಆದೇಶ ಸಂಖ್ಯೆ: ಯೋಇ 69 ಯೋವಿವಿ 2011, ದಿನಾಂಕ: 10–10–2011.

ಪ್ರಸ್ತಾವನೆ :

ಕರ್ನಾಟಕ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಡಿಯಲ್ಲಿ 2011–12 ನೇ ಸಾಲಿನ ಲೆಕ್ಕಶೀರ್ಷಿಕೆ "4575–60–800–0–01" (ಯೋಜನೆ) ಅಡಿಯಲ್ಲಿ ರೂ. 300.00 ಕೋಟಿಗಳನ್ನು ಒದಗಿಸಲಾಗಿದೆ. ಈ ಯೋಜನೆಯನ್ನು ಮೇಲೆ ಓದಲಾದ (1) ಮತ್ತು (2)ರ ಆದೇಶದಲ್ಲಿ ಮೊದಲನೆಯ ಕಂತಾಗಿ ರೂ. 99.83 ಕೋಟಿಗಳನ್ನು ಮತ್ತು ಮೇಲೆ ಓದಲಾದ (3)ರ ಆದೇಶದಲ್ಲಿ ಎರಡನೇ ಕಂತಾಗಿ ರೂ. 99.99 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ. ಪ್ರಸಕ್ತ ಸಾಲಿಗೆ ಮೂರನೆಯ ಕಂತಾಗಿ ರೂ. 98.00 ಕೋಟಿಗಳನ್ನು ಬಿಡುಗಡೆ ಮಾಡಲು ಸರ್ಕಾರವು ತೀರ್ಮಾನಿಸಿದೆ ಆದುದರಿಂದ ಈ ಆದೇಶ.

ಸರ್ಕಾರಿ ಆದೇಶ ಸಂಖೆ: ಯೋಇ 69 ಯೋವಿವಿ 2011 ಬೆಂಗಳೂರು, ದಿನಾಂಕ: 07ನೇ ಮಾರ್ಚ್ 2012.

2011–12ನೇ ಸಾಲಿನ ಕರ್ನಾಟಕ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯ ಅನುಷ್ಠಾನಕ್ಕಾಗಿ ಲೆಕ್ಕಶೀರ್ಷಿಕೆ " 4575–60–800–0–01–132 (ಬಂಡವಾಳ ವೆಚ್ಚಗಳು) (ಯೋಜನೆ)" ಅಡಿಯಲ್ಲಿ ತಲಾ ರೂ. 20,25,000 ಗಳು (ಇಪ್ಪತ್ತು ಲಕ್ಷದ ಇಪ್ಪತ್ತೈದು ಸಾವಿರ ರೂಪಾಯಿಗಳು ಮಾತ್ರ) ಲೆಕ್ಕಶೀರ್ಷಿಕೆ "4575–60–800–0–01–422 (ವಿಶೇಷ ಘಟಕ ಯೋಜನೆ)" ಅಡಿಯಲ್ಲಿ ತಲಾ ರೂ. 8,82,000 (ಎಂಟು ಲಕ್ಷದ ಎಂಬತ್ತೆರಡು ಸಾವಿರ ರೂಪಾಯಿಗಳು ಮಾತ್ರ), ಹಾಗೂ ಲೆಕ್ಕಶೀರ್ಷಿಕೆ "4575–60–800–0–01–423 (ಗಿರಿಜನ ಉಪಯೋಜನೆ)" ಅಡಿಯಲ್ಲಿ ತಲಾ ರೂ. 3,59,000 (ಮೂರು ಲಕ್ಷದ ಐವತ್ತೊಂಬತ್ತು ಸಾವಿರ ರೂಪಾಯಿಗಳು ಮಾತ್ರ) ರಂತೆ ಒಟ್ಟು ತಲಾ ರೂ. 32,66,000 ಗಳು (ಮೂವತ್ತೆರಡು ಲಕ್ಷದ ಅರವತ್ತಾರು ಸಾವಿರ ರೂಪಾಯಿಗಳು ಮಾತ್ರ) ಗಳನ್ನು ಅನುಬಂಧ–1 ರಲ್ಲಿ ಸೂಚಿಸಿರುವ ವಿಧಾನ ಸಭಾ ಕ್ಷೇತ್ರಗಳಿಗೆ ಒಟ್ಟು ರೂ. 70,21,90,000 (ಎಪ್ಪತ್ತು ಕೋಟಿ ಇಪ್ಪತ್ತೊಂದು ಲಕ್ಷದ ತೊಂಬತ್ತು ಸಾವಿರ ರೂಪಾಯಿಗಳು ಮಾತ್ರ) ಹಾಗೂ ವಿಧಾನ ಪರಿಷತ್ ಸದಸ್ಯರಿಗೆ ಅನುಬಂಧ–2 ರಲ್ಲಿ ಸೂಚಿಸಿರುವಂತೆ ಒಟ್ಟು ರೂ. 22,21,55,000–00 (ಇಪ್ಪತ್ತೆರಡು ಕೋಟಿ ಇಪ್ಪತ್ತೊಂದು ಲಕ್ಷದ ಐವತ್ತೈದು ಸಾವಿರ ರೂಪಾಯಿಗಳು ಮಾತ್ರ) ಸಂಬಂಧಿಸಿದ ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡಲಾಗಿದೆ. ಒಟ್ಟು ಬಿಡುಗಡೆ ಮಾಡಿದ ಮೊತ್ತ ರೂ. 92,43,45,000 (ತೊಂಬತ್ತೆರಡು ಕೋಟಿ ನಲವತ್ತುಮೂರು ಲಕ್ಷದ ನಲವತ್ತೈದು ಸಾವಿರ ರೂಪಾಯಿಗಳು ಮಾತ್ರ).

(2) ಈ ಬಿಡುಗಡೆಯಾದ ಮೊತ್ತವನ್ನು ಸರ್ಕಾರದ ಪತ್ರ ಸಂಖ್ಯೆ: ಪಿಡಿ 250 ಪಿಎಂಎಂ 2002, ದಿನಾಂಕ: 05–03–2002ರ ಪ್ರಕಾರ ಜಿಲ್ಲಾಧಿಕಾರಿಗಳ ವೈಯಕ್ತಿಕ ಖಾತೆ (ಪಿಡಿ ಅಕೌಂಟ್) ಯಲ್ಲಿ ಮೊದಲು ಜಮಾ ಮಾಡಿ ನಂತರ ಕಾರ್ಯಕ್ರಮದ ಅನುಗುಣವಾಗಿ ಖರ್ಚು ಮಾಡತಕ್ಕದ್ದು.

(3) ಕರ್ನಾಟಕ ರಾಜ್ಯದ ಉಡುಪಿ ಮತ್ತು ಚಿಕ್ಕಮಗಳೂರು ಕ್ಷೇತ್ರಗಳಲ್ಲಿ ಚುನಾವಣೆ ನೀತಿ ಸಂಹಿತೆ ಜಾರಿಯಲ್ಲಿರುವುದರಿಂದ ಈ ಕ್ಷೇತ್ರಗಳಿಗೆ ಅನುದಾನವನ್ನು ಬಿಡುಗಡೆ ಮಾಡಿರುವುದಿಲ್ಲ.

(4) ಈ ಬಿಡುಗಡೆಯಾದ ಮೊತ್ತಕ್ಕೆ ಜಿಲ್ಲಾಧಿಕಾರಿಗಳು ಆಯಾ ಶಾಸಕರಿಂದ ಕ್ರಿಯಾ ಯೋಜನೆಯನ್ನು ಪಡೆದು, ಸರ್ಕಾರದ ಆದೇಶ ಸಂಖ್ಯೆ: ಪಿಡಿ 486 ಪಿಎಂಪಿ2001, ದಿನಾಂಕ: 6–07–2001 ರಲ್ಲಿ ಹಾಗೂ ತದನಂತರ ಹೊರಡಿಸಿದ ಪರಿಷ್ಕೃತ ಮಾರ್ಗಸೂಚಿಗಳಲ್ಲಿ ನೀಡಿರುವ ಸೂಚನೆಗಳಂತೆ ಅನುಷ್ಠಾನಗೊಳಿಸತಕ್ಕದ್ದು.

I -F1 -(0)

(5) ನಿಯಮಾನುಸಾರ ಹಣ ಬಳಕೆ ಪ್ರಮಾಣೀಕರಣ ಪತ್ರವನ್ನು ಆಯಾ ಜಿಲ್ಲಾಧಿಕಾರಿಗಳ ಮೇಲು ಸಹಿಯೊಂದಿಗೆ ಸರ್ಕಾರಕ್ಕೆ ಸಲ್ಲಿಸಲು ಸೂಚಿಸಿದೆ ಹಾಗೂ ಬಿಡುಗಡೆ ಮಾಡಿದ ಅನುದಾನವನ್ನು ನಿಗಧಿತ ಅವಧಿಯಲ್ಲಿ ಬಳಕೆ ಮಾಡಿಕೊಳ್ಳದಿದ್ದಲ್ಲಿ ಮುಂದಿನ ಕಂತಿನ ಹಣವನ್ನು ಬಿಡುಗಡೆ ಮಾಡಲಾಗುವುದಿಲ್ಲವೆಂದು ಸೂಚಿಸಿದೆ.

(6) ಈ ವೆಚ್ಚವನ್ನು ಲೆಕ್ಕಶೀರ್ಷಿಕೆ 4575-60-800-0-01-132 (ಬಂಡವಾಳ ವೆಚ್ಚಗಳು), "4575-60-800-0-01-422 (ವಿಶೇಷ ಘಟಕ ಯೋಜನೆ), ಹಾಗೂ "4575-60-800-0-01-423 (ಗಿರಿಜನ ಉಪಯೋಜನೆ) ಅಡಿಯಲ್ಲಿ ಭರಿಸತಕ್ಕದ್ದು.

(7) ಈ ಆದೇಶವನ್ನು ಆರ್ಥಿಕ ಇಲಾಖೆಯ ಹಿಂಬರಹ ಸಂಖ್ಯೆ: ಆಇ 271 ವೆಚ್ಚ-6/2011 ದಿನಾಂಕ: 1-3-2012 ರಲ್ಲಿನ ಅನಧಿಕೃತ ಟಿಪ್ಪಣಿಯಲ್ಲಿ ನೀಡಿರುವ ಸಹಮತಿಯ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಎಂ.ಜಿ. ಮುಳಕೂರ
ಸರ್ಕಾರದ ಅಧೀನ ಕಾರ್ಯದರ್ಶಿ 1 & 2,
ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ.

ಅನುಬಂಧ-1

ಸರ್ಕಾರಿ ಆದೇಶ ಸಂಖ್ಯೆ: ಯೋಇ 69 ಯೋವಿವಿ 2012 ದಿನಾಂಕ: 07-03-2012

	ವಿಧಾನಸಭಾ ಕ್ಷೇತ್ರಗಳು	ಲೆಕ್ಕ ಶೀರ್ಷಿಕೆ 4575-60-800-0-01			ಒಟ್ಟು
		132-ಬಂಡವಾಳ ವೆಚ್ಚ	422-ಎಸ್. ಸಿ.ಪಿ	423-ಟಿ.ಎಸ್.ಪಿ	
1)	**ಬೀದರ್ ಜಿಲ್ಲೆ ವಿಧಾನಸಭಾ ಕ್ಷೇತ್ರಗಳು**				
1	ಬೀದರ್ ದಕ್ಷಿಣ	2025000.00	882000.00	359000.00	**3266000.00**
2	ಬೀದರ್ ಉತ್ತರ	2025000.00	882000.00	359000.00	**3266000.00**
3	ಹುಮ್ನಾಬಾದ್	2025000.00	882000.00	359000.00	**3266000.00**
4	ಬಸವಕಲ್ಯಾಣ	2025000.00	882000.00	359000.00	**3266000.00**
5	ಭಾಲ್ಕಿ	2025000.00	882000.00	359000.00	**3266000.00**
6	ಔರಾದ್	2025000.00	882000.00	359000.00	**3266000.00**
	ಒಟ್ಟು	**12150000.00**	**5292000.00**	**2154000.00**	**19596000.00**
2)	**ಬಳ್ಳಾರಿ ಜಿಲ್ಲೆ ವಿಧಾನ ಸಭಾ ಕ್ಷೇತ್ರಗಳು**				
1	ಸಿರಗುಪ್ಪ	2025000.00	882000.00	359000.00	**3266000.00**
2	ಬಳ್ಳಾರಿ ನಗರ	2025000.00	882000.00	359000.00	**3266000.00**
3	ಬಳ್ಳಾರಿ (ಮೀ)	2025000.00	882000.00	359000.00	**3266000.00**
4	ವಿಜಯನಗರ	2025000.00	882000.00	359000.00	**3266000.00**
5	ಸಂಡೂರು (ಮೀ)	2025000.00	882000.00	359000.00	**3266000.00**
6	ಕೂಡ್ಲಗಿ (ಮೀ)	2025000.00	882000.00	359000.00	**3266000.00**
7	ಕಂಪ್ಲಿ (ಮೀ)	2025000.00	882000.00	359000.00	**3266000.00**
8	ಹೂವಿನ ಹಡಗಲಿ (ಮೀ)	2025000.00	882000.00	359000.00	**3266000.00**
9	ಹಗರಿಬೊಮ್ಮನಹಳ್ಳಿ (ಮೀ)	2025000.00	882000.00	359000.00	**3266000.00**
	ಒಟ್ಟು	**18225000.00**	**7938000.00**	**3231000.00**	**29394000.00**
3)	**ಚಿತ್ರದುರ್ಗ ಜಿಲ್ಲೆ ವಿಧಾನಸಭಾ ಕ್ಷೇತ್ರಗಳು**				
1	ಚಿತ್ರದುರ್ಗ	2025000.00	882000.00	359000.00	**3266000.00**
2	ಮೊಳಕಾಲ್ಮೂರು	2025000.00	882000.00	359000.00	**3266000.00**
3	ಚಳ್ಳಕೆರೆ	2025000.00	882000.00	359000.00	**3266000.00**
4	ಹಿರಿಯೂರು	2025000.00	882000.00	359000.00	**3266000.00**
5	ಹೊಳಲ್ಕೆರೆ	2025000.00	882000.00	359000.00	**3266000.00**
6	ಹೊಸದುರ್ಗ	2025000.00	882000.00	359000.00	**3266000.00**
	ಒಟ್ಟು	**12150000.00**	**5292000.00**	**2154000.00**	**19596000.00**
4)	**ದಾವಣಗೆರೆ ಜಿಲ್ಲೆ ವಿಧಾನಸಭಾ ಕ್ಷೇತ್ರಗಳು**				
1	ಹರಪನಹಳ್ಳಿ	2025000.00	882000.00	359000.00	**3266000.00**
2	ಹರಿಹರ	2025000.00	882000.00	359000.00	**3266000.00**
3	ದಾವಣಗೆರೆ ದಕ್ಷಿಣ	2025000.00	882000.00	359000.00	**3266000.00**
4	ದಾವಣಗೆರೆ ಉತ್ತರ	2025000.00	882000.00	359000.00	**3266000.00**
5	ಮಾಯಗೊಂಡ	2025000.00	882000.00	359000.00	**3266000.00**
6	ಜಗಳೂರು	2025000.00	882000.00	359000.00	**3266000.00**

7	ಚೆನ್ನಗಿರಿ	2025000.00	882000.00	359000.00	**3266000.00**
8	ಹೊನ್ನಾಳಿ	2025000.00	882000.00	359000.00	**3266000.00**
	ಒಟ್ಟು	**16200000.00**	**7056000.00**	**2872000.00**	**26128000.00**

	ವಿಧಾನಸಭಾ ಕ್ಷೇತ್ರಗಳು	ಲೆಕ್ಕ ಶೀರ್ಷಿಕೆ 4575-60-800-0-01			ಒಟ್ಟು
		132-ಬಂಡವಾಳ ವೆಚ್ಚ	422-ಎಸ್. ಸಿ.ಪಿ	423-ಟಿ.ಎಸ್.ಪಿ	
5)	ಗುಲ್ಬರ್ಗಾ ಜಿಲ್ಲೆ ವಿಧಾನಸಭಾ ಕ್ಷೇತ್ರಗಳು				
1	ಚಿಂಚೋಳಿ (ಮೀ)	2025000.00	882000.00	359000.00	**3266000.00**
2	ಗುಲ್ಬರ್ಗಾ ದಕ್ಷಿಣ	2025000.00	882000.00	359000.00	**3266000.00**
3	ಆಳಂದ	2025000.00	882000.00	359000.00	**3266000.00**
4	ಗುಲ್ಬರ್ಗಾ ಉತ್ತರ	2025000.00	882000.00	359000.00	**3266000.00**
5	ಗುಲ್ಬರ್ಗಾ ಗ್ರಾಮೀಣ (ಮೀ)	2025000.00	882000.00	359000.00	**3266000.00**
6	ಅಫಜಲ್ ಪುರ	2025000.00	882000.00	359000.00	**3266000.00**
7	ಸೇಡಂ	2025000.00	882000.00	359000.00	**3266000.00**
8	ಜೇವರ್ಗಿ	2025000.00	882000.00	359000.00	**3266000.00**
9	ಚಿತ್ತಾಪುರ	2025000.00	882000.00	359000.00	**3266000.00**
	ಒಟ್ಟು	**18225000.00**	**7938000.00**	**3231000.00**	**29394000.00**
6)	ಯಾದಗಿರ್ ಜಿಲ್ಲೆ ವಿಧಾನ ಸಭಾ ಕ್ಷೇತ್ರಗಳು				
1	ಯಾದಗಿರ್	2025000.00	882000.00	359000.00	**3266000.00**
2	ಶಹಾಪುರ	2025000.00	882000.00	359000.00	**3266000.00**
3	ಸುರಪುರ (ಮೀ)	2025000.00	882000.00	359000.00	**3266000.00**
4	ಗುರುಮಿಟ್ಕಲ್	2025000.00	882000.00	359000.00	**3266000.00**
	ಒಟ್ಟು	**8100000.00**	**3528000.00**	**1436000.00**	**13064000.00**
7)	ರಾಯಚೂರು ಜಿಲ್ಲೆ ವಿಧಾನ ಸಭಾ ಕ್ಷೇತ್ರಗಳು				
1	ದೇವದುರ್ಗ (ಮೀ)	2025000.00	882000.00	359000.00	**3266000.00**
2	ರಾಯಚೂರು	2025000.00	882000.00	359000.00	**3266000.00**
3	ರಾಯಚೂರು ಗ್ರಾಮೀಣ (ಮೀ)	2025000.00	882000.00	359000.00	**3266000.00**
4	ಮಾನ್ವಿ (ಮೀ)	2025000.00	882000.00	359000.00	**3266000.00**
5	ಲಿಂಗಸುಗೂರು (ಮೀ)	2025000.00	882000.00	359000.00	**3266000.00**
6	ಸಿಂಧನೂರು	2025000.00	882000.00	359000.00	**3266000.00**
7	ಮಸ್ಕಿ (ಮೀ)	2025000.00	882000.00	359000.00	**3266000.00**
	ಒಟ್ಟು	**14175000.00**	**6174000.00**	**2513000.00**	**22862000.00**
8)	ಕೊಪ್ಪಳ ಜಿಲ್ಲೆ ವಿಧಾನಸಭಾ ಕ್ಷೇತ್ರಗಳು				
1	ಕುಷ್ಟಗಿ	2025000.00	882000.00	359000.00	**3266000.00**
2	ಯಲಬುರ್ಗ	2025000.00	882000.00	359000.00	**3266000.00**
3	ಕನಕಗಿರಿ (ಮೀ)	2025000.00	882000.00	359000.00	**3266000.00**
4	ಗಂಗಾವತಿ	2025000.00	882000.00	359000.00	**3266000.00**
5	ಕೊಪ್ಪಳ	2025000.00	882000.00	359000.00	**3266000.00**
	ಒಟ್ಟು	**10125000.00**	**4410000.00**	**1795000.00**	**16330000.00**

	ವಿಧಾನಸಭಾ ಕ್ಷೇತ್ರಗಳು	ಲೆಕ್ಕ ಶೀರ್ಷಿಕೆ 4575-60-800-0-01			ಒಟ್ಟು
		132-ಬಂಡವಾಳ ವೆಚ್ಚ	422-ಎಸ್.ಸಿ.ಪಿ	423-ಟಿ.ಎಸ್.ಪಿ	
9)	ಕೋಲಾರ ಜಿಲ್ಲೆ ವಿಧಾನಸಭಾ ಕ್ಷೇತ್ರಗಳು				
1	ಶ್ರೀನಿವಾಸಪುರ	2025000.00	882000.00	359000.00	**3266000.00**
2	ಮುಳಬಾಗಿಲು	2025000.00	882000.00	359000.00	**3266000.00**
3	ಕೆ.ಜಿ.ಎಫ್	2025000.00	882000.00	359000.00	**3266000.00**
4	ಕೋಲಾರ	2025000.00	882000.00	359000.00	**3266000.00**
5	ಬಂಗಾರಪೇಟೆ	2025000.00	882000.00	359000.00	**3266000.00**
6	ಮಾಲೂರು	2025000.00	882000.00	359000.00	**3266000.00**
	ಒಟ್ಟು	**12150000.00**	**5292000.00**	**2154000.00**	**19596000.00**

10)	ಚಿಕ್ಕಬಳ್ಳಾಪುರ ಜಿಲ್ಲೆ ವಿಧಾನ ಸಭಾ ಕ್ಷೇತ್ರಗಳು				
1	ಚಿಕ್ಕಬಳ್ಳಾಪುರ	2025000.00	882000.00	359000.00	**3266000.00**
2	ಚಿಂತಾಮಣಿ	2025000.00	882000.00	359000.00	**3266000.00**
3	ಶಿಡ್ಲಘಟ್ಟ	2025000.00	882000.00	359000.00	**3266000.00**
4	ಬಾಗೇಪಲ್ಲಿ	2025000.00	882000.00	359000.00	**3266000.00**
5	ಗೌರಿಬಿದನೂರು	2025000.00	882000.00	359000.00	**3266000.00**
	ಒಟ್ಟು	**10125000.00**	**4410000.00**	**1795000.00**	**16330000.00**

11)	ತುಮಕೂರು ಜಿಲ್ಲೆ ವಿಧಾನ ಸಭಾ ಕ್ಷೇತ್ರಗಳು				
1	ಪಾವಗಡ	2025000.00	882000.00	359000.00	**3266000.00**
2	ಶಿರಾ	2025000.00	882000.00	359000.00	**3266000.00**
3	ತುಮಕೂರು ಗ್ರಾಮಾಂತರ	2025000.00	882000.00	359000.00	**3266000.00**
4	ಮಧುಗಿರಿ	2025000.00	882000.00	359000.00	**3266000.00**
5	ಕೊರಟಗೆರೆ (ಮೀ)	2025000.00	882000.00	359000.00	**3266000.00**
6	ತುಮಕೂರು ನಗರ	2025000.00	882000.00	359000.00	**3266000.00**
7	ಕುಣಿಗಲ್	2025000.00	882000.00	359000.00	**3266000.00**
8	ಗುಬ್ಬಿ	2025000.00	882000.00	359000.00	**3266000.00**
9	ತುರುವೇಕೆರೆ	2025000.00	882000.00	359000.00	**3266000.00**
10	ತಿಪಟೂರು	2025000.00	882000.00	359000.00	**3266000.00**
11	ಚಿಕ್ಕನಾಯಕನಹಳ್ಳಿ	2025000.00	882000.00	359000.00	**3266000.00**
	ಒಟ್ಟು	**22275000.00**	**9702000.00**	**3949000.00**	**35926000.00**

12)	ರಾಮನಗರ ಜಿಲ್ಲೆ ವಿಧಾನಸಭಾ ಕ್ಷೇತ್ರಗಳು				
1	ಕನಕಪುರ	2025000.00	882000.00	359000.00	**3266000.00**
2	ಮಾಗಡಿ	2025000.00	882000.00	359000.00	**3266000.00**
3	ರಾಮನಗರ	2025000.00	882000.00	359000.00	**3266000.00**
4	ಚನ್ನಪಟ್ಟಣ	2025000.00	882000.00	359000.00	**3266000.00**
	ಒಟ್ಟು	**8100000.00**	**3528000.00**	**1436000.00**	**13064000.00**

	ವಿಧಾನಸಭಾ ಕ್ಷೇತ್ರಗಳು	ಲೆಕ್ಕ ಶೀರ್ಷಿಕೆ 4575-60-800-0-01			ಒಟ್ಟು
		132-ಬಂಡವಾಳ ವೆಚ್ಚ	422-ಎಸ್.ಸಿ.ಪಿ	423-ಟಿ.ಎಸ್.ಪಿ	
13)	ಬೆಂಗಳೂರು ನಗರ ಜಿಲ್ಲೆ ವಿಧಾನಸಭಾ ಕ್ಷೇತ್ರಗಳು				
1	ಮಲ್ಲೇಶ್ವರಂ	2025000.00	882000.00	359000.00	**3266000.00**
2	ರಾಜಾಜಿನಗರ	2025000.00	882000.00	359000.00	**3266000.00**
3	ಗಾಂಧಿನಗರ	2025000.00	882000.00	359000.00	**3266000.00**
4	ಚಿಕ್ಕಪೇಟೆ	2025000.00	882000.00	359000.00	**3266000.00**
5	ದಾಸರಹಳ್ಳಿ	2025000.00	882000.00	359000.00	**3266000.00**
6	ಚಾಮರಾಜಪೇಟೆ	2025000.00	882000.00	359000.00	**3266000.00**
7	ಬಸವನಗುಡಿ	2025000.00	882000.00	359000.00	**3266000.00**
8	ಜಯನಗರ	2025000.00	882000.00	359000.00	**3266000.00**
9	ಮಹಾಲಕ್ಷ್ಮಿ ಲೇಔಟ್	2025000.00	882000.00	359000.00	**3266000.00**
10	ಹೆಬ್ಬಾಳ	2025000.00	882000.00	359000.00	**3266000.00**
11	ಪುಲಿಕೇಶಿ ನಗರ (ಮೀ)	2025000.00	882000.00	359000.00	**3266000.00**
12	ಯಲಹಂಕ	2025000.00	882000.00	359000.00	**3266000.00**
13	ವಿಜಯ ನಗರ	2025000.00	882000.00	359000.00	**3266000.00**
14	ಪದ್ಮನಾಭನಗರ	2025000.00	882000.00	359000.00	**3266000.00**
15	ಆನೇಕಲ್ (ಮೀ)	2025000.00	882000.00	359000.00	**3266000.00**
16	ಬೆಂಗಳೂರು ದಕ್ಷಿಣ	2025000.00	882000.00	359000.00	**3266000.00**

17	ಕೆ.ಆರ್.ಪುರಂ	2025000.00	882000.00	359000.00	**3266000.00**
18	ಬೊಮ್ಮನಹಳ್ಳಿ	2025000.00	882000.00	359000.00	**3266000.00**
19	ಬ್ಯಾಟರಾಯನಪುರ	2025000.00	882000.00	359000.00	**3266000.00**
20	ಯಶವಂತಪುರ	2025000.00	882000.00	359000.00	**3266000.00**
21	ರಾಜರಾಜೇಶ್ವರಿ ನಗರ	2025000.00	882000.00	359000.00	**3266000.00**
22	ಬಿ.ಟಿ.ಎಂ. ಲೇಔಟ್	2025000.00	882000.00	359000.00	**3266000.00**
23	ಮಹದೇವಪುರ (ಮೀ)	2025000.00	882000.00	359000.00	**3266000.00**
24	ಸರ್ವಜ್ಞ ನಗರ	2025000.00	882000.00	359000.00	**3266000.00**
25	ಶಾಂತಿನಗರ	2025000.00	882000.00	359000.00	**3266000.00**
26	ಸಿ.ವಿ.ರಾಮನ್‌ನಗರ (ಮೀ)	2025000.00	882000.00	359000.00	**3266000.00**
27	ಶಿವಾಜಿನಗರ	2025000.00	882000.00	359000.00	**3266000.00**
28	ಡೆರಿಕ್ ಎಂ.ಬಿ. ಫುಲಿನಫಾ (ನಾಮ ನಿರ್ದೇಶಿತರು)	2025000.00	882000.00	359000.00	**3266000.00**
29	ಗೋವಿಂದರಾಜನಗರ	2025000.00	882000.00	359000.00	**3266000.00**
	ಒಟ್ಟು	**58725000.00**	**25578000.00**	**10411000.00**	**94714000.00**

	ವಿಧಾನಸಭಾ ಕ್ಷೇತ್ರಗಳು	ಲೆಕ್ಕ ಶೀರ್ಷಿಕೆ 4575-60-800-0-01			ಒಟ್ಟು
		132-ಬಂಡವಾಳ ವೆಚ್ಚ	422-ಎಸ್.ಸಿ.ಪಿ	423-ಟಿ.ಎಸ್.ಪಿ	
14)	**ಬೆಂಗಳೂರು ಗ್ರಾಮಾಂತರ ಜಿಲ್ಲೆ ವಿಧಾನಸಭಾ ಕ್ಷೇತ್ರಗಳು**				
1	ನೆಲಮಂಗಲ	2025000.00	882000.00	359000.00	**3266000.00**
2	ದೊಡ್ಡಬಳ್ಳಾಪುರ	2025000.00	882000.00	359000.00	**3266000.00**
3	ದೇವನಹಳ್ಳಿ	2025000.00	882000.00	359000.00	**3266000.00**
4	ಹೊಸಕೋಟೆ	2025000.00	882000.00	359000.00	**3266000.00**
	ಒಟ್ಟು	**8100000.00**	**3528000.00**	**1436000.00**	**13064000.00**
15)	**ಮೈಸೂರು ಜಿಲ್ಲೆ ವಿಧಾನಸಭಾ ಕ್ಷೇತ್ರಗಳು**				
1	ಟಿ. ನರಸೀಪುರ (ಮೀ)	2025000.00	882000.00	359000.00	**3266000.00**
2	ಕೃಷ್ಣರಾಜ	2025000.00	882000.00	359000.00	**3266000.00**
3	ಚಾಮರಾಜ	2025000.00	882000.00	359000.00	**3266000.00**
4	ನರಸಿಂಹರಾಜ	2025000.00	882000.00	359000.00	**3266000.00**
5	ಚಾಮುಂಡೇಶ್ವರಿ	2025000.00	882000.00	359000.00	**3266000.00**
6	ನಂಜನಗೂಡು (ಮೀ)	2025000.00	882000.00	359000.00	**3266000.00**
7	ಹೆಚ್.ಡಿ.ಕೋಟೆ(ಮೀ)	2025000.00	882000.00	359000.00	**3266000.00**
8	ಹುಣಸೂರು	2025000.00	882000.00	359000.00	**3266000.00**
9	ವರುಣ	2025000.00	882000.00	359000.00	**3266000.00**
10	ಕೃಷ್ಣರಾಜನಗರ	2025000.00	882000.00	359000.00	**3266000.00**
11	ಪಿರಿಯಾಪಟ್ಟಣ	2025000.00	882000.00	359000.00	**3266000.00**
	ಒಟ್ಟು	**22275000.00**	**9702000.00**	**3949000.00**	**35926000.00**

16)	**ಮಂಡ್ಯ ಜಿಲ್ಲೆಯ ವಿಧಾನ ಸಭಾ ಕ್ಷೇತ್ರಗಳು**				
1	ನಾಗಮಂಗಲ	2025000.00	882000.00	359000.00	**3266000.00**
2	ಮದ್ದೂರು	2025000.00	882000.00	359000.00	**3266000.00**
3	ಮೇಲುಕೋಟೆ	2025000.00	882000.00	359000.00	**3266000.00**
4	ಮಳವಳ್ಳಿ (ಮೀ)	2025000.00	882000.00	359000.00	**3266000.00**
5	ಮಂಡ್ಯ	2025000.00	882000.00	359000.00	**3266000.00**
6	ಕೆ.ಆರ್.ಪೇಟೆ	2025000.00	882000.00	359000.00	**3266000.00**
7	ಶ್ರೀರಂಗಪಟ್ಟಣ	2025000.00	882000.00	359000.00	**3266000.00**
	ಒಟ್ಟು	**14175000.00**	**6174000.00**	**2513000.00**	**22862000.00**

17)	ಚಾಮರಾಜನಗರ ಜಿಲ್ಲೆಯ ವಿಧಾನ ಸಭಾ ಕ್ಷೇತ್ರಗಳು				
1	ಹನೂರು	2025000.00	882000.00	359000.00	3266000.00
2	ಕೊಳ್ಳೇಗಾಲ	2025000.00	882000.00	359000.00	3266000.00
3	ಚಾಮರಾಜನಗರ	2025000.00	882000.00	359000.00	3266000.00
4	ಗುಂಡ್ಲುಪೇಟೆ	2025000.00	882000.00	359000.00	3266000.00
	ಒಟ್ಟು	**8100000.00**	**3528000.00**	**1436000.00**	**13064000.00**

	ವಿಧಾನಸಭಾ ಕ್ಷೇತ್ರಗಳು	ಲೆಕ್ಕ ಶೀರ್ಷಿಕೆ 4575-60-800-0-01			ಒಟ್ಟು
		132-ಬಂಡವಾಳ ವೆಚ್ಚ	422-ಎಸ್.ಸಿ.ಪಿ	423-ಟಿ.ಎಸ್.ಪಿ	
18)	**ಕೊಡಗು ಜಿಲ್ಲೆಯ ವಿಧಾನಸಭಾ ಕ್ಷೇತ್ರಗಳು**				
1	ವಿರಾಜಪೇಟೆ	2025000.00	882000.00	359000.00	3266000.00
2	ಮಡಿಕೇರಿ	2025000.00	882000.00	359000.00	3266000.00
	ಒಟ್ಟು	**4050000.00**	**1764000.00**	**718000.00**	**6532000.00**

19)	**ದಕ್ಷಿಣ ಕನ್ನಡ ಜಿಲ್ಲೆ ವಿಧಾನಸಭಾ ಕ್ಷೇತ್ರಗಳು**				
1	ಸುಳ್ಯ	2025000.00	882000.00	359000.00	3266000.00
2	ಪುತ್ತೂರು	2025000.00	882000.00	359000.00	3266000.00
3	ಬೆಳ್ತಂಗಡಿ	2025000.00	882000.00	359000.00	3266000.00
4	ಬಂಟ್ವಾಳ	2025000.00	882000.00	359000.00	3266000.00
5	ಮಂಗಳೂರು	2025000.00	882000.00	359000.00	3266000.00
6	ಮಂಗಳೂರು ನಗರ	2025000.00	882000.00	359000.00	3266000.00
7	ಮಂಗಳೂರು ದಕ್ಷಿಣ	2025000.00	882000.00	359000.00	3266000.00
8	ಮೂಡಬಿದ್ರಿ	2025000.00	882000.00	359000.00	3266000.00
	ಒಟ್ಟು	**16200000.00**	**7056000.00**	**2872000.00**	**26128000.00**

20)	**ಉಡುಪಿ ಜಿಲ್ಲೆಯ ವಿಧಾನ ಸಭಾ ಕ್ಷೇತ್ರಗಳು**				
1	ಕಾಪು *	0.00	0.00	0.00	0.00
2	ಉಡುಪಿ *	0.00	0.00	0.00	0.00
3	ಕುಂದಾಪುರ *	0.00	0.00	0.00	0.00
4	ಬೈಂದೂರು *	0.00	0.00	0.00	0.00
5	ಕಾರ್ಕಳ *	0.00	0.00	0.00	0.00
	ಒಟ್ಟು	**0.00**	**0.00**	**0.00**	**0.00**

21)	**ಶಿವಮೊಗ್ಗ ಜಿಲ್ಲೆಯ ವಿಧಾನ ಸಭಾ ಕ್ಷೇತ್ರಗಳು**				
1	ಶಿವಮೊಗ್ಗ ಗ್ರಾಮಾಂತರ	2025000.00	882000.00	359000.00	3266000.00
2	ಭದ್ರಾವತಿ	2025000.00	882000.00	359000.00	3266000.00
3	ಶಿವಮೊಗ್ಗ	2025000.00	882000.00	359000.00	3266000.00
4	ತೀರ್ಥಹಳ್ಳಿ	2025000.00	882000.00	359000.00	3266000.00
5	ಸಾಗರ	2025000.00	882000.00	359000.00	3266000.00
6	ಸೊರಬ	2025000.00	882000.00	359000.00	3266000.00
1. ಶ್ರೀ ಬಸವೇಶ್ವರ ಪ್ರೌಢಶಾಲೆ, ಕೆಂಚಾಪುರ ಗೇಟ್, ತರೀಕೆರೆ ತಾಲ್ಲೂಕು, ಬೀರೂರು ವಲಯ ಚಿಕ್ಕಮಗಳೂರು ಜಿಲ್ಲೆ.
2. ಶ್ರೀ ವಿಜೇಂದ್ರ ಪ್ರೌಢಶಾಲೆ, ಮಧುರನಹಳ್ಳಿ, ಅರಕಲಗೂಡು ತಾಲ್ಲೂಕು, ಹಾಸನ ಜಿಲ್ಲೆ.
3. ಶ್ರೀ ನರಸಿಂಹಸ್ವಾಮಿ ಪ್ರೌಢಶಾಲೆ, ಯಗಟಿ ಗ್ರಾಮ, ಕಡೂರು ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ.

ಮೇಲಿನ ಶಾಲೆಗಳು ನಿಯಾಮಾನುಸಾರ ಇದೆಯೇ ಇಲ್ಲವೆ ಎಂಬ ಬಗ್ಗೆ ಸರಿಯಾಗಿ ಪರಿಶೀಲಿಸದೇ ಚಿಕ್ಕಮಗಳೂರು ಜಿಲ್ಲಾ ಉಪ ನಿರ್ದೇಶಕರು ಈ ಶಾಲೆಗಳನ್ನು ಅನುದಾನಕ್ಕೆ ಒಳಪಡಿಸಲು ಪ್ರಸ್ತಾವನೆ ಸಲ್ಲಿಸಿರುವುದರಿಂದ ಹಾಗೂ ಈ ಕೆಳಕಂಡ ಶಾಲೆಗಳು ಸ್ಥಳಾಂತರಿಸಲು ಆಡಳಿತ ಮಂಡಳಿಯೊಂದಿಗೆ ಶಾಮೀಲಾಗಿರುವರೆಂಬ ದೂರಿನಲ್ಲಿ ಸತ್ಯಾಂಶವಿದೆಯೆಂದು ವರದಿ ಮಾಡಲಾಗಿತ್ತು.

1. ಶ್ರೀ ರಾಮೇಶ್ವರ ಪ್ರೌಢಶಾಲೆ, ದುಗ್ಲಾಪುರ, ತರೀಕೆರೆ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ.
2. ಶ್ರೀ ಚೌಡೇಶ್ವರಿ ಪ್ರೌಢಶಾಲೆ, ಗೋಪಾಲಭೂಸೇನಹಳ್ಳಿ, ತರೀಕೆರೆ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ.
3. ಶೃತಿ ಪ್ರೌಢಶಾಲೆ (ಬಳೆ ನಿರಾಲಮ್ಮ ಪ್ರೌಢಶಾಲೆ) ಭೂತೇನಹಳ್ಳಿ, ತರೀಕರೆ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ.

ಮೇಲ್ಕಂಡ ಶಾಲೆಗಳಲ್ಲದೆ ಕುವೆಂಪು ಪ್ರೌಢಶಾಲೆ, ಗೆಂಡೆಹಳ್ಳಿ, ಬೇಲೂರು ತಾಲ್ಲೂಕು ಹಾಸನ ಜಿಲ್ಲೆ ಮತ್ತು ಶ್ರೀ ಶಶೀಂದ್ರ ವಸತಿ ಪ್ರೌಢಶಾಲೆ, ಕೆರೆಹಳ್ಳಿ, ಸೋಮವಾರಪೇಟೆ ತಾಲ್ಲೂಕು, ಕೊಡಗು ಜಿಲ್ಲೆ ಈ ಶಾಲೆಗಳನ್ನು ಚಿಕ್ಕಮಗಳೂರು ಜಿಲ್ಲೆಯ ತರೀಕೆರೆ ತಾಲ್ಲೂಕಿಗೆ ಸ್ಥಳಾಂತರಿಸುವ ಪ್ರಸ್ತಾವನೆಯನ್ನು ಸುಳ್ಳು ದಾಖಲೆಗಳನ್ನು ಸೃಷ್ಟಿಸಲು ಸಂಬಂಧಿಸಿದ ಉಪ ನಿರ್ದೇಶಕರು ಹಾಗೂ ಅವರ ಕಛೇರಿಯ ಸಿಬ್ಬಂದಿ, ಕ್ಷೇತ್ರ ಶಿಕ್ಷಣಾಧಿಕಾರಿಗಳು ಮತ್ತು ಕಛೇರಿ ಸಿಬ್ಬಂದಿಗಳು ಕಾರಣರೆಂಬ ವರದಿಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ, ಈ ಹಿಂದೆ ಹಾಸನ ಹಾಗೂ ಚಿಕ್ಕಮಗಳೂರು ಜಿಲ್ಲೆಗಳ ಹಿಂದಿನ ಉಪ ನಿರ್ದೇಶಕರು ಹಾಗೂ ಚಿಕ್ಕಮಗಳೂರು ಜಿಲ್ಲೆಯ ಹಾಲಿ ನಿರ್ದೇಶಕರುಗಳು ನಿಯಮಬಾಹಿರ ಕರ್ತವ್ಯ ನಿರ್ವಹಣೆ ಕಾರಣವೆಂದು ಅವರುಗಳ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ಸಿಸಿಎ) ನಿಯಮಾವಳಿಗಳು 1957 ರನ್ವಯ ಶಿಸ್ತು ಕ್ರಮ ಜರುಗಿಸುವುದು ಅವಶ್ಯವೆಂದು ಸರ್ಕಾರವು ಭಾವಿಸಿ, ಮೇಲ್ಕಂಡ ಶಾಲೆಗಳ ಮಾನ್ಯತೆ ನವೀಕರಣ ಮತ್ತು ಸ್ಥಳಾಂತರ ಪ್ರಸ್ತಾವನೆಗಳ ಸುಳ್ಳು ದಾಖಲೆಗಳನ್ನು ಸೃಷ್ಟಿಸುವಲ್ಲಿ ಈ ಕೆಳಕಂಡ ಅಧಿಕಾರಿಗಳು ಹೊಣೆಗಾರರೆಂದು ಗುರುತಿಸಿ, ಮೇಲೆ ಓದಲಾದ ಕ್ರಮ ಸಂಖ್ಯೆ (2) ರಲ್ಲಿ ಅವರುಗಳ ಮೇಲೆ ಶಿಸ್ತು ಕ್ರಮ ಬಾಕಿ ಇರಿಸಿ, ಕರ್ನಾಟಕ ನಾಗರೀಕ ಸೇವಾ (ಸಿಸಿಎ) ನಿಯಮಾವಳಿಗಳು 1957 ರ ನಿಯಮ–10ರನ್ವಯ ಅಮಾನತ್ತುಗೊಳಿಸಲಾಗಿತ್ತು.

1. ಶ್ರೀಮತಿ ಪಿ. ಪದ್ಮಮ್ಮ, ಹಿಂದಿನ ಉಪ ನಿರ್ದೇಶಕರು (ಆಡಳಿತ) ಸಾಶಿಇ ಹಾಸನ ಜಿಲ್ಲೆ (ಹಾಲಿ ಉಪ ನಿರ್ದೇಶಕರು, ಅಪರ ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ).
2. ಶ್ರೀ ಮಂಟೇಲಿಂಗಾಚಾರಿ ಹಿಂದಿನ ಉಪ ನಿರ್ದೇಶಕರು (ಆಡಳಿತ) ಸಾಶಿಇ ಚಿಕ್ಕಮಗಳೂರು ಜಿಲ್ಲೆ (ಹಾಲಿ ಉಪ ನಿರ್ದೇಶಕರು (ಆಡಳಿತ) ಸಾರ್ವಜನಿಕ ಶಿಕ್ಷಣ ಇಲಾಖೆ, ಕೊಪ್ಪಳ ಜಿಲ್ಲೆ).
3. ಶ್ರೀ ಎಲ್. ರಂಗಪ್ಪ, ಉಪ ನಿರ್ದೇಶಕರು (ಆಡಳಿತ) ಸಾರ್ವಜನಿಕ ಶಿಕ್ಷಣ ಇಲಾಖೆ ಚಿಕ್ಕಮಗಳೂರು ಜಿಲ್ಲೆ.

ಮೇಲೆ ಓದಲಾದ ಕ್ರಮ ಸಂಖ್ಯೆ (3) ರಲ್ಲಿ ಈ ಪ್ರಕರಣದಲ್ಲಿ ಭಾಗಿಯಾಗಿದ್ದರೆನ್ನಲಾದ ಸಂಬಂಧಿಸಿದ ಜಿಲ್ಲಾ, ಆಯುಕ್ತಾಲಯ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು, ಸೇರಿದಂತೆ ಜಿಲ್ಲಾ ಉಪ ನಿರ್ದೇಶಕರ ಕಛೇರಿ ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಯ ಅಧಿಕಾರಿ ಸಿಬ್ಬಂದಿಗಳ ಹೆಸರುಗಳನ್ನು ಗುರುತಿಸಿ, ಸರ್ಕಾರಕ್ಕೆ ಒದಗಿಸುವಂತೆಕೋರಲಾಗಿತ್ತು.

ಆನಂತರ ಈ ಪ್ರಕರಣದಲ್ಲಿ ಭಾಗಿಯಾಗಿದ್ದರೆಂದು ಗುರುತಿಸಲಾದ ಅಧಿಕಾರಿಗಳ ಪೈಕಿ ಶ್ರೀಮತಿ ನೂರ್‌ಜಹಾನ್ ಬೀ, ಇವರು ಸೇವೆಯಿಂದ ವಯೋನಿವೃತ್ತಿ ಹೊಂದಿರುವುದರಿಂದ ಅವರನ್ನು ಹೊರತುಪಡಿಸಿ, ಮೇಲೆ ಓದಲಾದ ಕ್ರಮ ಸಂಖ್ಯೆ (4) ರಲ್ಲಿ ಈ ಕೆಳಕಂಡ ಅಧಿಕಾರಿಗಳನ್ನು ಅವರುಗಳ ಮೇಲಿನ ಶಿಸ್ತು ಕ್ರಮ ಬಾಕಿ ಇರಿಸಿ, ಕರ್ನಾಟಕ ನಾಗರೀಕ ಸೇವಾ (ಸಿಸಿಎ) ನಿಯಮಾವಳಿಗಳು 1957ರ ನಿಯಮ–10ರನ್ವಯ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೂ ಅಮಾನತ್ತುಗೊಳಿಸಲಾಗಿತ್ತು.

1. ಶ್ರೀ ಸಿ. ಆರ್. ಪರಮೇಶ್ವರಪ್ಪ, ಕ್ಷೇತ್ರ ಶಿಕ್ಷಣಾಧಿಕಾರಿ, ತರೀಕೆರೆ ತಾಲ್ಲೂಕು.
2. ಶ್ರೀ ಜಯಣ್ಣ, ಕ್ಷೇತ್ರ ಶಿಕ್ಷಣಾಧಿಕಾರಿ, ಬೀರೂರು ವಲಯ, ಕಡೂರು ತಾಲ್ಲೂಕು
3. ಶ್ರೀಮತಿ ಬಿ. ಲಲಿತಾ, ಪತ್ರಾಂಕಿತ ವ್ಯವಸ್ಥಾಪಕರು, ಕ್ಷೇತ್ರ ಶಿಕ್ಷಣಾಧಿಕಾರಿ ಕಛೇರಿ, ಹಾಸನ.

4. ಶ್ರೀ ಸಿ.ಎನ್. ಲೋಕೇಶ್, ಪ್ರಭಾರಿ ಅಧೀಕ್ಷಕರು, ಉಪ ನಿರ್ದೇಶಕರ ಕಛೇರಿ, ಸಾಶಿಇ, ಹಾಸನ
5. ಶ್ರೀ ಬೆಟ್ಟೇಗೌಡ, ಪ್ರಥಮ ದರ್ಜೆ ಸಹಾಯಕ, ಉಪ ನಿರ್ದೇಶಕರ ಕಛೇರಿ, ಸಾಶಿಇ, ಹಾಸನ

ಮೇಲೆ ಓದಲಾದ ಕ್ರಮ ಸಂಖ್ಯೆ (5) ರಲ್ಲಿ ಶ್ರೀ ಸಿ. ಆರ್. ಪರಮೇಶ್ವರಪ್ಪ, ಕ್ಷೇತ್ರ ಶಿಕ್ಷಣಾಧಿಕಾರಿ, ತರೀಕೆರೆ ವಲಯ, ಚಿಕ್ಕಮಗಳೂರು ಜಿಲ್ಲೆ ಮತ್ತು ಶ್ರೀ ಕೆ. ಎನ್. ಜಯಣ್ಣ, ಕ್ಷೇತ್ರ ಶಿಕ್ಷಣಾಧಿಕಾರಿ, ಬೀರೂರು ವಲಯ, ಚಿಕ್ಕಮಗಳೂರು ಜಿಲ್ಲೆ, ಇವರುಗಳ ಮೇಲಿನ ಆರೋಪಗಳಿಗೆ ಇಲಾಖಾ ವಿಚಾರಣೆ ಹಾಗೂ ಶಿಸ್ತು ಕ್ರಮ ಕಾಯ್ದಿರಿಸಿ ಅಮಾನತ್ತು ತೆರವುಗೊಳಿಸಿ, ಸೇವೆಗೆ ಪುನರ್ ಸ್ಥಾಪಿಸಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (10) ರ ಆದೇಶಗಳಲ್ಲಿ ಶ್ರೀ ಎಲ್. ರಂಗಪ್ಪ ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಚಿಕ್ಕಮಗಳೂರು, ಇವರು ದಿನಾಂಕ : 30-06-2011 ರಂದು ಸರ್ಕಾರಿ ಸೇವೆಯಿಂದ ವಯೋನಿವೃತ್ತಿ ಹೊಂದಿರುವುದರಿಂದ, ಹಾಗೂ ಶ್ರೀಮತಿ ನೂರ್ ಜಹಾನ್ ಬೀ, ನಿವೃತ್ತ ಪತ್ರಾಂಕಿತ ಸಹಾಯಕರು, ಉಪ ನಿರ್ದೇಶಕರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ ಹಾಸನ. ಇವರು ಈಗಾಗಲೇ ಸರ್ಕಾರಿ ಸೇವೆಯಿಂದ ವಯೋನಿವೃತ್ತಿ ಹೊಂದಿರುವ ಕಾರಣ, ಸದರಿಯವರುಗಳ ಮೇಲಿನ ಆರೋಪಗಳಿಗೆ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳು 1958 ರ ನಿಯಮ-214 ರಡಿ ಶಿಸ್ತು ಕ್ರಮ ಜರುಗಿಸಲು ಸರ್ಕಾರದ ಅನುಮತಿ ನೀಡಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (7) ರಲ್ಲಿ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು, ಇವರು ಈ ಪ್ರಕರಣದಲ್ಲಿ ಕರ್ತವ್ಯ ನಿರ್ಲಕ್ಷತೆ ತೋರಿದ ಈ ಕೆಳಕಂಡ ಅಧಿಕಾರಿಗಳ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ಸಿಸಿಎ) ನಿಯಮಾವಳಿಗಳ ನಿಯಮ-11 ಮತ್ತು 13 ರಡಿಯಲ್ಲಿ ಜಂಟಿ ಶಿಸ್ತುಕ್ರಮ ಕೈಗೊಳ್ಳಲು ಕರಡು ದೋಷಾರೋಪಣಾ ಪಟ್ಟಿಯನ್ನು ಅನುಬಂಧ-1 ರಿಂದ 4 ನ್ನು ಸರ್ಕಾರಕ್ಕೆ ಸಲ್ಲಿಸಿದ್ದರು.

1. ಶ್ರೀಮತಿ ಪದ್ಮಮ್ಮ, ರೀಡರ್, ಶಿಕ್ಷಕರ ಶಿಕ್ಷಣ ಮಹಾವಿದ್ಯಾಲಯ, ಮಂಗಳೂರು.
2. ಶ್ರೀ ಮಂಟೇಲಿಂಗಾಚಾರ್, ಉಪ ನಿರ್ದೇಶಕರು (ಆಡಳಿತ) ಕೊಪ್ಪಳ ಜಿಲ್ಲೆ
3. ಶ್ರೀ ಎಲ್. ರಂಗಪ್ಪ, ನಿವೃತ್ತ ಉಪ ನಿರ್ದೇಶಕರು, ಚಿಕ್ಕಮಗಳೂರು ಜಿಲ್ಲೆ
4. ಶ್ರೀ ಸಿ. ಆರ್. ಪರಮೇಶ್ವರಪ್ಪ, ಕ್ಷೇತ್ರ ಶಿಕ್ಷಣಾಧಿಕಾರಿ, ತರೀಕೆರೆ ವಲಯ.
5. ಶ್ರೀ ಕೆ. ಎನ್. ಜಯಣ್ಣ, ಕ್ಷೇತ್ರ ಶಿಕ್ಷಣಾಧಿಕಾರಿ, ಬೀರೂರು ವಲಯ.
6. ಶ್ರೀ ಸಿ.ಬಿ. ಜಯರಂಗ, ಕ್ಷೇತ್ರ ಶಿಕ್ಷಣಾಧಿಕಾರಿ, ಉತ್ತರ ವಲಯ-4, ಯಲಹಂಕ, ಬೆಂಗಳೂರು ಗ್ರಾಮಾಂತರ ಜಿಲ್ಲೆ.
7. ಶ್ರೀಮತಿ ನೂರ್ ಜಹಾನ್ ಬಿ. ನಿವೃತ್ತ ಹಿಂದಿನ ಪತ್ರಾಂಕಿತ ಸಹಾಯಕರು, ಉಪ ನಿರ್ದೇಶಕರ ಕಛೇರಿ, ಹಾಸನ.
8. ಶ್ರೀಮತಿ ಲಲಿತಾ ವ್ಯವಸ್ಥಾಪಕರು, ಕ್ಷೇತ್ರ ಶಿಕ್ಷಣಾಧಿಕಾರಿ ಕಛೇರಿ, ಹಾಸನ.
9. ಶ್ರೀ ಎಲ್. ಬೋರಯ್ಯ, ಪ್ರಥಮ ದರ್ಜೆ ಸಹಾಯಕರು, ಆಯುಕ್ತರ ಕಛೇರಿ, ಬೆಂಗಳೂರು.
10. ಶ್ರೀ ಸಿ. ಎನ್. ಲೋಕೇಶ್, (ಅಮಾನತ್ತಿನಲ್ಲಿ) ಪ್ರಥಮ ದರ್ಜೆ ಸಹಾಯಕ, ಉಪ ನಿರ್ದೇಶಕರ ಕಛೇರಿ, ಹಾಸನ.
11. ಶ್ರೀ ಬೆಟ್ಟೇಗೌಡ, (ಅಮಾನತ್ತಿನಲ್ಲಿ) ಪ್ರಥಮ ದರ್ಜೆ ಸಹಾಯಕ, ಉಪ ನಿರ್ದೇಶಕರ ಕಛೇರಿ, ಹಾಸನ.

ಮುಂದುವರೆದು ಇಂತಹದೇ ಪ್ರಕರಣದಲ್ಲಿ ಭಾಗಿಯಾಗಿದ್ದರೆನ್ನಲಾದ ಶ್ರೀ ಜಿ. ರಂಗನಾಥಸ್ವಾಮಿ, ಕ್ಷೇತ್ರ ಶಿಕ್ಷಣಾಧಿಕಾರಿ, ಕಡೂರು, ಚಿಕ್ಕಮಗಳೂರು ಜಿಲ್ಲೆ, ಇವರಿಗೆ ಸಂಬಂಧಿಸಿದಂತೆ ಶಿಸ್ತು ಕ್ರಮ ಜರುಗಿಸುವ ಕುರಿತು ಮೇಲೆ ಓದಲಾದ ಕ್ರಮ ಸಂಖ್ಯೆ (8) ರಲ್ಲಿ ಸದರಿಯವರ ಹೆಸರನ್ನು ಸಹ ಜಂಟಿ ಶಿಸ್ತುಕ್ರಮದಲ್ಲಿ ಸೇರ್ಪಡೆ ಮಾಡಲು ಅನುಮೋದನೆ ಪಡೆದುಕೊಳ್ಳಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (6) ರಲ್ಲಿ ಶ್ರೀಮತಿ ಬಿ. ಲಲಿತಾ ಪತ್ರಾಂಕಿತ ವ್ಯವಸ್ಥಾಪಕರು, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ಹಾಸನ ಇವರ ವಿರುದ್ಧ ಶಿಸ್ತು ಕ್ರಮ ಕಾಯ್ದಿರಿಸಿ, ಸೇವೆಗೆ ಪುನರ್ ಸ್ಥಾಪಿಸಲಾಗಿದೆ. ಮೇಲೆ ಓದಲಾದ ಕ್ರಮ ಸಂಖ್ಯೆ (11) ರಲ್ಲಿ ಶ್ರೀ ಸಿ. ಎನ್. ಲೋಕೇಶ್ ಮತ್ತು ಶ್ರೀ ಸಿ. ಆರ್. ಬೆಟ್ಟೇಗೌಡ, ಪ್ರಥಮ ದರ್ಜೆ ಸಹಾಯಕ, ಇವರುಗಳ ವಿರುದ್ಧ ಶಿಸ್ತು ಕ್ರಮ ಕಾಯ್ದಿರಿಸಿ, ಸೇವೆಗೆ ಪುನರ್ ಸ್ಥಾಪಿಸಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (9) ರಲ್ಲಿ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು, ಇವರ ಪ್ರಸ್ತಾವನೆಯನ್ನು ಆಧರಿಸಿ ಪ್ರಕರಣದ ಗಂಭೀರತೆಯ ಹಿನ್ನೆಲೆಯಲ್ಲಿ ಈ ಪ್ರಕರಣದಲ್ಲಿ ಆರೋಪಿತರೆಂದು ಗುರುತಿಸಲಾಗಿರುವ ಒಟ್ಟು 12 ಅಧಿಕಾರಿಗಳ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ಸಿಸಿಎ) ನಿಯಮಾವಳಿಗಳು 1957 ರ ನಿಯಮ-11 ಮತ್ತು 13 ರಡಿ ಜಂಟಿ ಶಿಸ್ತು ಕ್ರಮ ಜರುಗಿಸಲು ಕಾರಣ ಕೇಳುವ ನೋಟೀಸುಗಳನ್ನು ಜಾರಿಗೊಳಿಸಲಾಗಿತ್ತು. ಆರೋಪಿತ ಅಧಿಕಾರಿ/ನೌಕರರು ನಿಗಧಿತ ಕಾಲಾವಧಿಯಲ್ಲಿ ಅಧಿಕಾರಿ ಪ್ರತಿರಕ್ಷಣಾ ಹೇಳಿಕೆಗಳನ್ನು ಸಲ್ಲಿಸಿರುವುದಿಲ್ಲ. ಆದರೆ, 07 ಆರೋಪಿತ ಅಧಿಕಾರಿ ನೌಕರರುಗಳ ಮೇಲೆ ಓದಲಾದ ಕ್ರಮ ಸಂಖ್ಯೆ (12) ರಿಂದ (20) ರವರೆಗೆ ಸಲ್ಲಿಸಿರುವ ಲಿಖಿತ ಹೇಳಿಕೆಗಳಲ್ಲಿ ತಮ್ಮ ಮೇಲಿನ ಆರೋಪಗಳನ್ನು ಅಲ್ಲಗಳೆದು ತಮ್ಮನ್ನು ಆರೋಪದಿಂದ ಮುಕ್ತಗೊಳಿಸುವಂತೆ ಕೋರಿದ್ದಾರೆ. ಹಾಗೂ ಉಳಿದ 05 ಅಧಿಕಾರಿ ನೌಕರರುಗಳು ತಮ್ಮ ಪ್ರತಿರಕ್ಷಣಾ ಹೇಳಿಕೆಗಳನ್ನು ಸಲ್ಲಿಸಿರುವುದಿಲ್ಲ. ಆನಂತರ ಶ್ರೀಮತಿ ವೈ.ಎಂ.ನೂರ್ ಜಹಾನ್ ಬೀ. ನಿವೃತ್ತ ಪತ್ರಾಂಕಿತ ಸಹಾಯಕರು ಮತ್ತು ಶ್ರೀಮತಿ ಬಿ. ಲಲಿತಾ, ಪತ್ರಾಂಕಿತ ವ್ಯವಸ್ಥಾಪಕರು ಇವರು ತಮ್ಮ ಪ್ರತಿರಕ್ಷಣಾ ಹೇಳಿಕೆಗಳನ್ನು ದಿನಾಂಕ : 11-01-2012 ಮತ್ತು 16-01-2012 ರಲ್ಲಿ ಸಲ್ಲಿಸಿದ್ದಾರೆ.

ಈ ಪ್ರಕರಣದಲ್ಲಿ ಆರೋಪಿತ ಅಧಿಕಾರಿಗಳು ಸಲ್ಲಿಸಿರುವ ತಮ್ಮ ಪ್ರತಿರಕ್ಷಣಾ ಹೇಳಿಕೆಗಳಲ್ಲಿ ಅವರುಗಳ ಮೇಲಿನ ಆರೋಪಗಳನ್ನು ಅಲ್ಲಗಳೆದಿರುವುದರಿಂದ ಹಾಗೂ ಮೂವರು ಅಧಿಕಾರಿಗಳು ಪ್ರತಿರಕ್ಷಣಾ ಹೇಳಿಕೆಗಳನ್ನು ಸಲ್ಲಿಸದೇ ಇರುವುದರಿಂದ ಈ ಪ್ರಕರಣದ ಸತ್ಯಾಸತ್ಯತೆಯನ್ನು ತಿಳಿದುಕೊಳ್ಳಲು ವಿಚಾರಣೆ ಮಾಡುವುದು ಸೂಕ್ತವೆಂದು ನಿರ್ಣಯಿಸಿ, ಕರ್ನಾಟಕ ನಾಗರೀಕ ಸೇವಾ (ಸಿ.ಸಿ.ಎ) ನಿಯಮಾವಳಿಗಳು 1957 ರ ನಿಯಮ-11 ಹಾಗೂ 13 ರ ಅಡಿಯಲ್ಲಿ ವಿಚಾರಣಾಧಿಕಾರಿ ಹಾಗೂ ಮಂಡನಾಧಿಕಾರಿಗಳನ್ನು ನೇಮಕ ಮಾಡಲು ಸೂಕ್ತವೆಂದು ನಿರ್ಧರಿಸಿ ಅದರಂತೆ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಇಾಿ 17 ಡಿಜಿಪಿ 2011, ಬೆಂಗಳೂರು, ದಿನಾಂಕ: 14ನೇ ಮಾರ್ಚ್ 2012

ಪ್ರಸ್ತಾವನೆಯಲ್ಲಿ ವಿವರಿಸಿದಂತೆ ಚಿಕ್ಕಮಗಳೂರು, ಹಾಸನ ಮತ್ತು ಕೊಡಗು ಜಿಲ್ಲೆಗಳಲ್ಲಿ ಪ್ರೌಢಶಾಲೆಗಳ ಸ್ಥಳಾಂತರ/ಹಸ್ತಾಂತರದ ಹೆಸರಿನಲ್ಲಿ ನಡೆದಿರುವ ಅಕ್ರಮಗಳಿಗೆ ಸಂಬಂಧಿಸಿದ ಪ್ರಕರಣದಲ್ಲಿ ಕರ್ತವ್ಯ ನಿರ್ಲಕ್ಷತೆ ತೋರಿದ ಈ ಕೆಳಕಂಡ ಅಧಿಕಾರಿಗಳ ಮೇಲಿನ ಆರೋಪಗಳ ಬಗ್ಗೆ ವಿಚಾರಣೆ ನಡೆಸಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957 ರ ನಿಯಮ-11 ಮತ್ತು 13 ರಡಿ ಇಲಾಖಾ ವಿಚಾರಣೆ ನಡೆಸಲು ನಿಯಮ-11 (2) ರಡಿಯಲ್ಲಿ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಶ್ರೀ ಕುಕ್ಕಾಜೆ ರಾಮಕೃಷ್ಣಭಟ್, ವಿಚಾರಣಾಧಿಕಾರಿ, ನಿವೃತ್ತ ನ್ಯಾಯಾಧೀಶರು, ನಂ. 2, 1ನೇ ಕ್ರಾಸ್, ಜುಡಿಷಿಯಲ್ ಲೇಔಟ್, ಸಂಜಯನಗರ, ಬೆಂಗಳೂರು-560 094 ಇವರನ್ನು ಈ

ಪ್ರಕರಣದಲ್ಲಿ ವಿಚಾರಣಾಧಿಕಾರಿಯನ್ನಾಗಿಯೂ ಹಾಗೂ ನಿಯಮ-11 (5) ರ ಮೇರೆಗೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ಬಸವೇಗೌಡ, ಪ್ರಾಂಶುಪಾಲರು, ಡಯಟ್, ಚಿಕ್ಕಮಗಳೂರು, ಇವರನ್ನು ಮಂಡನಾಧಿಕಾರಿಯನ್ನಾಗಿಯೂ ನೇಮಿಸಿ ಆದೇಶಿಸಿದೆ.

1. ಶ್ರೀಮತಿ ಪದ್ಮಮ್ಮ, ರೀಡರ್, ಶಿಕ್ಷಕರ ಶಿಕ್ಷಣ ಮಹಾವಿದ್ಯಾಲಯ, ಮಂಗಳೂರು.
2. ಶ್ರೀ ಮಂಟೇಲಿಂಗಾಚಾರ್, ಉಪ ನಿರ್ದೇಶಕರು (ಆಡಳಿತ) ಕೊಪ್ಪಳ ಜಿಲ್ಲೆ.
3. ಶ್ರೀ ಎಲ್. ರಂಗಪ್ಪ, ನಿವೃತ್ತ ಉಪ ನಿರ್ದೇಶಕರು, ಚಿಕ್ಕಮಗಳೂರು ಜಿಲ್ಲೆ.
4. ಶ್ರೀ ಸಿ. ಆರ್. ಪರಮೇಶ್ವರಪ್ಪ, ಕ್ಷೇತ್ರ ಶಿಕ್ಷಣಾಧಿಕಾರಿ, ತರೀಕೆರೆ ವಲಯ.
5. ಶ್ರೀ ಕೆ. ಎನ್. ಜಯಣ್ಣ, ಕ್ಷೇತ್ರ ಶಿಕ್ಷಣಾಧಿಕಾರಿ, ಬೀರೂರು ವಲಯ.
6. ಶ್ರೀ ಸಿ. ಬಿ. ಜಯರಂಗ, ಕ್ಷೇತ್ರ ಶಿಕ್ಷಣಾಧಿಕಾರಿ, ಉತ್ತರ ವಲಯ-4, ಯಲಹಂಕ, ಬೆಂಗಳೂರು ಗ್ರಾಮಾಂತರ ಜಿಲ್ಲೆ.
7. ಶ್ರೀಮತಿ ನೂರ್ ಜಹಾನ್ ಬಿ. ನಿವೃತ್ತ ಹಿಂದಿನ ಪತ್ರಾಂಕಿತ ಸಹಾಯಕರು, ಉಪ ನಿರ್ದೇಶಕರ ಕಛೇರಿ, ಹಾಸನ.
8. ಶ್ರೀಮತಿ ಲಲಿತಾ ವ್ಯವಸ್ಥಾಪಕರು, ಕ್ಷೇತ್ರ ಶಿಕ್ಷಣಾಧಿಕಾರಿ ಕಛೇರಿ, ಹಾಸನ.
9. ಶ್ರೀ ಎಲ್. ಬೋರಯ್ಯ, ಪ್ರಥಮ ದರ್ಜೆ ಸಹಾಯಕರು, ಆಯುಕ್ತರ ಕಛೇರಿ, ಬೆಂಗಳೂರು.
10. ಶ್ರೀ ಸಿ. ಎನ್. ಲೋಕೇಶ್, ಪ್ರಥಮ ದರ್ಜೆ ಸಹಾಯಕ, ಸರ್ಕಾರಿ ಪ್ರೌಢಶಾಲೆ, ಬೆಳವಾಡಿ, ಅರಕಲಗೂಡು ತಾ : ಹಾಸನ ಜಿಲ್ಲೆ.
11. ಶ್ರೀ ಸಿ. ಆರ್. ಬೆಟ್ಟೇಗೌಡ, ಪ್ರಥಮ ದರ್ಜೆ ಸಹಾಯಕ, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ಕೃಷ್ಣರಾಜಪೇಟೆ, ಮಂಡ್ಯ ಜಿಲ್ಲೆ.
12. ಶ್ರೀ ಜಿ. ರಂಗನಾಥಸ್ವಾಮಿ, ಕ್ಷೇತ್ರ ಶಿಕ್ಷಣಾಧಿಕಾರಿ, ಕಡೂರು ವಲಯ.

ವಿಚಾರಣೆ ನಡೆಸಲು ಸ್ಥಳಾವಕಾಶ ಹಾಗೂ ಶೀಘ್ರಲಿಪಿಗಾರರ/ಬೆರಳಚ್ಚುಗಾರರ ಸೇವೆಯನ್ನು ವಿಚಾರಣಾಧಿಕಾರಿಗೆ ಒದಗಿಸಲು ಹಾಗೂ ವಿಚಾರಣಾಧಿಕಾರಿಗಳು ವಿಚಾರಣಾ ವರದಿ ಸಲ್ಲಿಸಿದ ನಂತರ ಅವರಿಗೆ ಸಂಭಾವನೆಯನ್ನು ಮತ್ತು ಸಾರಿಗೆ ಭತ್ಯೆಯನ್ನು ಸೇರಿದಂತೆ ಒಟ್ಟು ರೂ. 15,000/- (ರೂ. ಹದಿನೈದು ಸಾವಿರ ಮಾತ್ರ) ಮಂಜೂರು ಮಾಡುವಂತೆ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು, ಇವರಿಗೆ ಸೂಚಿಸಿದೆ.

ವಿಚಾರಣಾಧಿಕಾರಿಗಳು ಪ್ರತಿ ಆರೋಪದ ಬಗ್ಗೆ ನಿಯಮಾನುಸಾರ ವಿಚಾರಣೆ ನಡೆಸಿ, ಸ್ಪಷ್ಟ ನಿರ್ಣಯಗಳನ್ನೊಳಗೊಂಡ ವಿಚಾರಣಾ ವರದಿಯನ್ನು ಈ ಆದೇಶ ತಲುಪಿದ 2 ತಿಂಗಳೊಳಗಾಗಿ ಶಿಸ್ತು ಪ್ರಾಧಿಕಾರಕ್ಕೆ ಸಲ್ಲಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್.925

ಎಸ್.ಬಿ. ಸಸಾಲಟ್ಟಿ
ಸರ್ಕಾರದ ಅಧೀನ ಕಾರ್ಯದರ್ಶಿ
ಶಿಕ್ಷಣ ಇಲಾಖೆ (ಆಡಳಿತ)

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ವಿಷಯ: ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕೆ ಮತ್ತು ಹೂಡಿಕೆ ಆಯುಕ್ತರು, ಕರ್ನಾಟಕ ಎಂಬ ಹುದ್ದೆಯನ್ನು ತಾತ್ಕಾಲಿಕವಾಗಿ ಸೃಜಿಸುವ ಬಗ್ಗೆ.-

ಓದಲಾಗಿದೆ: ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯ ಕಡತ ಸಂಖ್ಯೆ: ಸಿಐ 65 ಎಸ್‌ಪಿಐ 2012ರ ಟಿಪ್ಪಣಿ

ಪ್ರಸ್ತಾವನೆ:

ಮೇಲೆ ಓದಲಾದ ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯ ಕಡತದಲ್ಲಿ ಜೂನ್ 2012ರಲ್ಲಿ ನಡೆಯಲಿರುವ GIM-2012 (Global Investors Meet, 2012) ಕಾರ್ಯಕ್ರಮದ ಅಂಗವಾಗಿ ಬಂಡವಾಳ ಹೂಡಿಕೆದಾರರ ಮತ್ತು FICCI,CII ಮತ್ತು ಕೇಂದ್ರ ಸರ್ಕಾರದ ವಿದೇಶಾಂಗ ವ್ಯವಹಾರಗಳ ಮಂತ್ರಾಲಯಗಳೊಂದಿಗೆ ಕರ್ನಾಟಕ ರಾಜ್ಯದ ಪರವಾಗಿ ಸಮನ್ವಯ ನಡೆಸುವ/ಚರ್ಚಿಸಲು ನಿವಾಸಿ ಆಯುಕ್ತರು, ಕರ್ನಾಟಕ ಭವನ, ನವದೆಹಲಿ ಇವರನ್ನು ಪದನಿಮಿತ್ತ ಸರ್ಕಾರದ ಕಾರ್ಯದರ್ಶಿ, ಕೈಗಾರಿಕೆ/ಹೂಡಿಕೆ, ಕರ್ನಾಟಕ ಸರ್ಕಾರ ಎಂದು ಮರು ಪದನಾಮೀಕರಿಸಲು ಕೋರಿರುತ್ತಾರೆ. ಆದರೆ, ತಾಂತ್ರಿಕ ಹಾಗೂ ಆಡಳಿತಾತ್ಮಕ ಹಿತದೃಷ್ಟಿಯಿಂದ GIM-2012 ಮುಗಿಯುವವರೆಗೆ ತಾತ್ಕಾಲಿಕವಾಗಿ ಸರ್ಕಾರದ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕೆ ಮತ್ತು ಹೂಡಿಕೆ ಆಯುಕ್ತರು, ಕರ್ನಾಟಕ ಎಂಬ ಹೊಸ ಹುದ್ದೆಯನ್ನು ಸೃಜಿಸಿ, ಈ ಹುದ್ದೆಯ ಹೆಚ್ಚುವರಿ ಪ್ರಭಾರವನ್ನು ನಿವಾಸಿ ಆಯುಕ್ತರು, ನವದೆಹಲಿ ಇವರಿಗೆ ವಹಿಸಲು ಪ್ರಸ್ತಾಪಿಸಿದ್ದು, ಈ ಪ್ರಸ್ತಾವನೆಗೆ ಆರ್ಥಿಕ ಇಲಾಖೆಯ ಸಹಮತಿ ವ್ಯಕ್ತಪಡಿಸಿರುತ್ತದೆ.

ಈ ಪ್ರಸ್ತಾವನೆಯನ್ನು ಪರಿಶೀಲಿಸಿದ ಸರ್ಕಾರವು; ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 175 ಸಅಸೇ 2012, ಬೆಂಗಳೂರು, ದಿನಾಂಕ 15-03-2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ 2012ರ GIM ಅಂಗವಾಗಿ ಬಂಡವಾಳ ಹೂಡಿಕೆದಾರರ ಮತ್ತು ಸರ್ಕಾರದ ಮಧ್ಯೆ ಸಮನ್ವಯ ನಡೆಸಲು ಸದರಿ 2012ರ GIM ಮುಗಿಯುವವರೆಗೆ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕೆ ಮತ್ತು ಹೂಡಿಕೆ ಆಯುಕ್ತರು, ಕರ್ನಾಟಕ ಎಂಬ ಹುದ್ದೆಯನ್ನು ತಾತ್ಕಾಲಿಕವಾಗಿ ಸೃಜಿಸಲಾಗಿದೆ. ಸದರಿ ಹುದ್ದೆಯಲ್ಲಿ ನಿವಾಸಿ ಆಯುಕ್ತರು, ಕರ್ನಾಟಕ ಭವನ, ನವದೆಹಲಿ ಇವರನ್ನು ಹೆಚ್ಚುವರಿ ಪ್ರಭಾರದಲ್ಲಿರಿಸಿ, ಆದೇಶಿಸಲಾಗಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 1159 ಪ್ರ.ಕಾ/2012, ದಿನಾಂಕ 7-3-2012ರಲ್ಲಿ ನೀಡಿರುವ ಸಹಮತಿ ಮೇರೆಗೆ ಆದೇಶವನ್ನು ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಎ. ಆರ್. ವಿಜಯಾನಂದ ಶರ್ಮ
ಸರ್ಕಾರದ ಅಧೀನ ಕಾರ್ಯದರ್ಶಿ

ಪಿ.ಆರ್. 926

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವೆಗಳು-3)

WPP-47

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೪೭	ಬೆಂಗಳೂರು, ಗುರುವಾರ, ಮೇ ೩, ೨೦೧೨ (ವೈಶಾಖ ೧೩, ಶಕ ವರ್ಷ ೧೯೩೪)	ಸಂಚಿಕೆ ೧೮

ಭಾಗ – ೨

ನೇಮಕಗಳು, ಸ್ಥಳ ನೇಮಕಗಳು, ವರ್ಗಾವಣೆಗಳು, ರಜೆ ಮತ್ತು ಅಧಿಕಾರಿಗಳು, ಕರ್ನಾಟಕ ಉಚ್ಛ ನ್ಯಾಯಾಲಯದ ಅಧಿಸೂಚನೆಗಳು

ನಗರಾಭಿವೃದ್ಧಿ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ನಅಇ 113 ಇಎಂಸಿ 2011, ಬೆಂಗಳೂರು, ದಿನಾಂಕ: 11ನೇ ಏಪ್ರಿಲ್, 2012.

ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ : ಎಫ್‌ಡಿ 31 ಎಸ್‌ಆರ್‌ಪಿ 2007(10), ದಿನಾಂಕ: 14–8–2008 ರನ್ವಯ 6 ವರ್ಷಗಳ ಸೇವೆಯನ್ನು ಪೂರೈಸಿರುವ ಎ ಗುಂಪಿನ ಅಧಿಕಾರಿಗಳಿಗೆ ಆಯ್ಕೆ ದರ್ಜೆ ವೇತನ ಶ್ರೇಣಿಯನ್ನು ನೀಡಲು ಆದೇಶಿಸಿರುವುದರಿಂದ, ಸರ್ಕಾರದ ಅಧಿಸೂಚನೆ ಸಂಖ್ಯೆ :ನಅಇ 02 ಇಎಂಸಿ 2006, ದಿನಾಂಕ: 18–1–2007 ರಲ್ಲಿ ಪ್ರಕಟಿಸಿರುವ ಕೆ.ಎಂ.ಎ.ಎಸ್ ಪೌರಾಯುಕ್ತರು ಶ್ರೇಣಿ–2 ರ ಅಂತಿಮ ಜೇಷ್ಠತಾ ಪಟ್ಟಿಯ ಆಧಾರದ ಮೇಲೆ ಶ್ರೀ.ಬಿ.ಸಿ.ಪೂಜಾರಿ, ಕೆ.ಎಂ.ಎ.ಎಸ್ ನಿವೃತ್ತ ಪೌರಾಯುಕ್ತರು ಶ್ರೇಣಿ–1 ಇವರಿಗೆ ದಿನಾಂಕ:01–08–2008 ರಿಂದ ಜಾರಿಗೆ ಬರುವಂತ ಹಾಗೂ ಮುಂದಿನ ಆದೇಶದವರೆಗೆ ರೂ 22125–30300ರ ಆಯ್ಕೆ ಶ್ರೇಣಿ ವೇತನ ಮಂಜೂರು ಮಾಡಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಕೆ.ವಿ.ರಾಮಪ್ಪ,
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ.

ಪಿ.ಆರ್. 564

ನಗರಾಭಿವೃದ್ಧಿ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ನಅಇ 314 ಟಿಎಂಇ 2011, ಬೆಂಗಳೂರು, ದಿನಾಂಕ: 11ನೇ ಏಪ್ರಿಲ್, 2012.

ಪೌರ ಸೇವಾ ವೃಂದದ ಈ ಕೆಳಕಂಡ ಸಹಾಯಕ ಅಭಿಯಂತರರು / ಕಿರಿಯ ಅಭಿಯಂತರರುಗಳಿಗೆ ಕರ್ನಾಟಕ ಪುರಸಭೆ (ಅಧಿಕಾರಿ ಮತ್ತು ನೌಕರರ ವೃಂದ ಮತ್ತು ನೇಮಕಾತಿ) ನಿಯಮಾವಳಿಗಳು 2010ರ ನಿಯಮದನ್ವಯ ಸಹಾಯಕ ಕಾರ್ಯಪಾಲಕ ಅಭಿಯಂತರರಾಗಿ ಸ್ಥಾನಪನ್ನ ಆಧಾರದ ಮೇಲೆ ವೇತನ ಶ್ರೇಣಿ ರೂ.14050–25050ರಲ್ಲಿ ದಿನಾಂಕ 04–05–2011ರಿಂದ ಜಾರಿಗೆ ಬರುವಂತೆ ಬಡ್ತಿ ನೀಡಲಾಗಿದೆ.

ಬಡ್ತಿ ಮೇಲೆ ಈ ಅಧಿಕಾರಿಗಳನ್ನು ಕೆಳಕಾಣಿಸಿರುವ ಪ್ರಕಾರ ಅವರ ಹೆಸರಿನ ಮುಂದೆ ನಮೂದಿಸಿರುವ ಸ್ಥಳಗಳಿಗೆ ಕೂಡಲೇ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ನೇಮಿಸಲಾಗಿದೆ.

ಕ್ರ.ಸಂ.	ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ಸ್ಥಳ ಮತ್ತು ಹುದ್ದೆ	ವರ್ಗಾಯಿಸಿ ನೇಮಿಸಿರುವ ಸ್ಥಳ
1.	ಶ್ರೀ.ವಿ. ನಟರಾಜ, ಸಹಾಯಕ ಅಭಿಯಂತರರು, ನಗರಸಭೆ, ಕೋಲಾರ.	ಚಿಂತಾಮಣಿ ನಗರಸಭೆಯಲ್ಲಿ ಖಾಲಿ ಇರುವ ಸಹಾಯಕ ಕಾರ್ಯಪಾಲಕ ಅಭಿಯಂತರರ ಹುದ್ದೆಗೆ.

ಕ್ರ.ಸಂ.	ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ಸ್ಥಳ ಮತ್ತು ಹುದ್ದೆ	ವರ್ಗಾಯಿಸಿ ನೇಮಿಸಿರುವ ಸ್ಥಳ
2.	ಶ್ರೀ.ಬಿ.ವೈ ಸುರಕೋಡ, ಕಿರಿಯ ಅಭಿಯಂತರರು, ಪುರಸಭೆ ಮೂಡಲಗಿ.	ಜಿಲ್ಲಾ ನಗರಾಭಿವೃದ್ಧಿ ಕೋಶ, ಬಳ್ಳಾರಿ ಜಿಲ್ಲೆ, ಬಳ್ಳಾರಿ - ಶ್ರೀ ಟಿ.ಎ. ಮಂಜುನಾಥ, ಸಹಾಯಕ ಕಾರ್ಯಪಾಲಕ ಅಭಿಯಂತರರು ಇವರ ವರ್ಗಾವಣೆಯಿಂದ ತೆರವಾದ ಹುದ್ದೆಗೆ,
3.	ಶ್ರೀ ಟಿ.ಎ. ಮಂಜುನಾಥ, ಸಹಾಯಕ ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಬಳ್ಳಾರಿ ಜಿಲ್ಲೆ, ಬಳ್ಳಾರಿ.	ಮುಂದಿನ ನೇಮಕಾತಿಗಾಗಿ ನಗರಾಭಿವೃದ್ಧಿ ಇಲಾಖೆಯಲ್ಲಿ ವರದಿ ಮಾಡಿಕೊಳ್ಳುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಕೆ.ವಿ.ರಾಮಪ್ಪ,
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ.

ಪಿ.ಆರ್. 565

ಸಮಾಜ ಕಲ್ಯಾಣ ಸಚಿವಾಲಯ

ಹೆಚ್ಚೋಲೆ

ಸಂಖ್ಯೆ: ಸಕಇ 3 ಎಸ್‌ಟಿಸಿ 2011, ಬೆಂಗಳೂರು, ದಿನಾಂಕ: 14ನೇ ಮಾರ್ಚ್, 2012.

ದಿನಾಂಕ: 09-05-2005ರ ಅಧಿಸೂಚನೆ ಸಂಖ್ಯೆ: ಎಸ್‌ಡಬ್ಲ್ಯೂಡಿ 47 ಎಸ್‌ಟಿಸಿ 2004ರಲ್ಲಿ ಕ್ರಮಸಂಖ್ಯೆ:(2) ನೇ ಪರಂತುಕದ ನಂತರ (3) ನೇ ಪರಂತುಕವನ್ನು ಈ ಕೆಳಕಂಡಂತೆ ಸೇರಿಸಿಕೊಂಡು ಓದಿಕೊಳ್ಳತಕ್ಕದ್ದು.

"ಮತ್ತೂ ಪರಂತು, ಯಾವುದೇ ಸಾರ್ವಜನಿಕ ಉದ್ಯಮಗಳಲ್ಲಿ ಅಸಿಸ್ಟೆಂಟ್ ಜನರಲ್ ಮ್ಯಾನೇಜರ್, ಡೆಪ್ಯೂಟಿ ಜನರಲ್ ಮ್ಯಾನೇಜರ್, ಮತ್ತು ಜನರಲ್ ಮ್ಯಾನೇಜರ್ ಇದಕ್ಕೆ ಮೇಲ್ಪಟ್ಟ ಹುದ್ದೆಗಳ ಪ್ರಕರಣಗಳಲ್ಲಿ ಗರಿಷ್ಟ ವಯೋಮಿತಿಯು 59 ವರ್ಷಗಳಾಗಿರತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಸ್. ಲೋಕನಾಥರಾವ್,
ಸರ್ಕಾರದ ಅಧೀನ ಕಾರ್ಯದರ್ಶಿ-2,
ಸಮಾಜ ಕಲ್ಯಾಣ ಇಲಾಖೆ.

ಪಿ.ಆರ್. 566

ಒಳಾಡಳಿತ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಹೆಚ್‌ಡಿ 302 ಎಸ್‌ಎಸ್‌ಟಿ 2011, ಬೆಂಗಳೂರು, ದಿನಾಂಕ: 13ನೇ ಏಪ್ರಿಲ್, 2012.

ದಂಡ ಪ್ರಕ್ರಿಯಾ ಸಂಹಿತೆ (1978ರ ತಿದ್ದುಪಡಿ ಅಧಿನಿಯಮ) ಮೂಲಕ ತಿದ್ದುಪಡಿಯಾದಂತೆ ದಂಡ ಪ್ರಕ್ರಿಯಾ ಸಂಹಿತೆ 1973ರ (1974ರ ಕೇಂದ್ರ ಅಧಿನಿಯಮ ಸಂಖ್ಯೆ 2) ಕಲಂ:24ರ ಉಪಕಲಂ (8) ಮತ್ತು ಕರ್ನಾಟಕ ಕಾನೂನು ಅಧಿಕಾರಿಗಳ (ನೇಮಕಾತಿ ಮತ್ತು ಸೇವಾ ಷರತ್ತುಗಳು) ನಿಯಮಾವಳಿ 1977ರ ನಿಯಮ 30ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕಾನೂನುಬಾಹಿರ ಚಟುವಟಿಕೆಗಳು (ತಡೆಗಟ್ಟುವಿಕೆ) ನ್ಯಾಯಮಂಡಳಿ (Unlawful Activities (Prevention) Tribunal) ಮುಂದೆ SIMI ಪ್ರಕರಣಗಳಲ್ಲಿ ಸರ್ಕಾರದ ಪರವಾಗಿ ಹಾಜರಾಗಲು ಮತ್ತು ಪ್ರಕರಣವನ್ನು ನಡೆಸಲು ಶ್ರೀ ಹೆಚ್.ಎನ್.ನಿಲೋಗಲ್. ವಕೀಲರು, ಬೆಂಗಳೂರು ಅವರನ್ನು ವಿಶೇಷ ಸರ್ಕಾರಿ ಅಭಿಯೋಜಕರಾಗಿ ನೇಮಿಸಲಾಗಿದೆ.

ವಿಶೇಷ ಸರ್ಕಾರಿ ಅಭಿಯೋಜಕರ ಸಂಭಾವನೆ/ವೆಚ್ಚದ ಬಗ್ಗೆ ಪ್ರತ್ಯೇಕ ಆದೇಶವನ್ನು ಹೊರಡಿಸಲಾಗುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪ್ರಕಾಶ ವೈ.ಕೆ,
ಸರ್ಕಾರದ ಅಧೀನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ (ಕಾನೂನು ಮತ್ತು ಸುವ್ಯವಸ್ಥೆ).

ಪಿ.ಆರ್. 567

ಒಳಾಡಳಿತ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಒಇ 330 ಪೊಸಿಪ 2011, ಬೆಂಗಳೂರು, ದಿನಾಂಕ: 12ನೇ ಏಪ್ರಿಲ್, 2012.

ಶ್ರೀ.ಎಂ. ವಿಜಯ ಕುಮಾರ, ಪಿ.ಐ. (ನಿಸ್ತಂತು), ರಾಜ್ಯ ಗುಪ್ತವಾರ್ತೆ, ಬೆಂಗಳೂರು ರವರಿಗೆ ವೇತನ ಶ್ರೇಣಿ ರೂ.14050-25050 ರ ಡಿವೈ.ಎಸ್.ಪಿ. (ನಿಸ್ತಂತು), ಹುದ್ದೆಗೆ ಮುಂಬಡ್ತಿ ನೀಡಿ ಡಿವೈ.ಎಸ್.ಪಿ. (ನಿಸ್ತಂತು), ದಕ್ಷಿಣವಲಯ, ಮೈಸೂರು ಇಲ್ಲಿಗೆ ಶ್ರೀ ವಿರೂಪಾಕ್ಷಯ್ಯ ರವರ ನಿವೃತ್ತಿಯಿಂದ ತೆರವುಗೊಂಡ ಖಾಲಿ ಹುದ್ದೆಗೆ ಈ ಕೂಡಲೇ ಜಾರಿಗೆ ಬರುವಂತೆ ಮುಂದಿನ ಆದೇಶದವರೆಗೆ ಸ್ಥಳ ನಿಯುಕ್ತಿಗೊಳಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಟಿ.ಎನ್. ರವಿಪ್ರಕಾಶ್,

ಸರ್ಕಾರದ ಅಧೀನ ಕಾರ್ಯದರ್ಶಿ,

ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು-ಎ).

ಪಿ.ಆರ್. 568

ಒಳಾಡಳಿತ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಒಇ 37 ಕಗೃಸೇ 2012, ಬೆಂಗಳೂರು, ದಿನಾಂಕ: 13ನೇ ಏಪ್ರಿಲ್, 2012.

ಕರ್ನಾಟಕ ಗೃಹರಕ್ಷಕ ಅಧಿನಿಯಮ 1962ರ (ತಿದ್ದುಪಡಿ ನಿಯಮಗಳು 2003) ನಿಯಮ 3ಬಿ ರ ಉಪ ಕಲಂ (3) ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಶ್ರೀ ಕೆ.ಎಂ. ಮಹೇಶ ಬಿನ್ ಲೇಟ್ ಕೆ. ಮಾದೇಗೌಡ ಸರಸ್ವತಿ ನಿಲಯ, 9ನೇ ಅಡ್ಡರಸ್ತೆ, ಚಾಮುಂಡೇಶ್ವರಿ ನಗರ, ಮಂಡ್ಯ ಇವರನ್ನು ಮಂಡ್ಯ ಜಿಲ್ಲೆ ಗೃಹರಕ್ಷಕ ದಳದ ಗೌರವಸಮಾದೇಷ್ಟರನ್ನಾಗಿ ಈ ತಕ್ಷಣದಿಂದ ಜಾರಿಗೆ ಬರುವಂತೆ ಮುಂದಿನ ಆದೇಶದವರೆಗೆ ನೇಮಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಬಿ.ರಾಜಮ್ಮ,

ಸರ್ಕಾರದ ಅಧೀನ ಕಾರ್ಯದರ್ಶಿ,

ಒಳಾಡಳಿತ ಇಲಾಖೆ (ಪೊಲೀಸ್ ಸಹಾಯಕ ಸೇವೆಗಳು).

ಪಿ.ಆರ್. 569

ಒಳಾಡಳಿತ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಒಇ 32 ಕಗೃಸೇ 2012, ಬೆಂಗಳೂರು, ದಿನಾಂಕ: 13ನೇ ಏಪ್ರಿಲ್, 2012.

ಶ್ರೀ ಗಣಪತಿ ಭಟ್ ಗೌರವಸಮಾದೇಷ್ಟರು, ಗೃಹರಕ್ಷಕ ದಳ ಉಡುಪಿ ಜಿಲ್ಲೆ, ಇವರ ಅವಧಿಯು ದಿನಾಂಕ:09-03-2012 ರಂದು ಮುಕ್ತಾಯವಾಗಿದ್ದು, ಇವರು ತಮ್ಮ ಕರ್ತವ್ಯವನ್ನು ತೃಪ್ತಿಕರವಾಗಿ ನಿರ್ವಹಿಸುವಲ್ಲಿ ವಿಫಲರಾಗಿರುವ ಹಿನ್ನೆಲೆಯಲ್ಲಿ ಇವರನ್ನು ಕರ್ನಾಟಕ ಗೃಹರಕ್ಷಕ ತಿದ್ದುಪಡಿ 2003ರ ನಿಯಮ 3ಇ(5)ರನ್ವಯ ಈ ತಕ್ಷಣದಿಂದ ಜಾರಿಗೆ ಬರುವಂತೆ ಉಡುಪಿ ಜಿಲ್ಲಾ ಗೌರವಸಮಾದೇಷ್ಟರ ಹುದ್ದೆಯ ಕರ್ತವ್ಯದಿಂದ ಪದವಿಮುಕ್ತಿಗೊಳಿಸಿದೆ.

ಉಡುಪಿ ಜಿಲ್ಲಾ ಹೆಚ್ಚುವರಿ ಪೊಲೀಸ್ ಅಧೀಕ್ಷಕರನ್ನು ಗೃಹರಕ್ಷಕ ದಳದ ಸಮಾದೇಷ್ಟರ ಹುದ್ದೆಯ ಕರ್ತವ್ಯಗಳನ್ನು ನೋಡಿಕೊಳ್ಳಲು ಪ್ರಭಾರದಲ್ಲಿಟ್ಟು ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಬಿ.ರಾಜಮ್ಮ,

ಸರ್ಕಾರದ ಅಧೀನ ಕಾರ್ಯದರ್ಶಿ,

ಒಳಾಡಳಿತ ಇಲಾಖೆ (ಪೊಲೀಸ್ ಸಹಾಯಕ ಸೇವೆಗಳು).

ಪಿ.ಆರ್. 570

ಶಿಕ್ಷಣ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಇಡಿ 86 ಟಿಪಿಯು 2006, ಬೆಂಗಳೂರು, ದಿನಾಂಕ: 03ನೇ ಏಪ್ರಿಲ್, 2012.

ಸರ್ಕಾರದ ಅಧಿಸೂಚನೆ ಸಂಖ್ಯೆ : ಇಡಿ 86 ಟಿಪಿಯು 2006 ದಿನಾಂಕ: 11-08-2010 ರಲ್ಲಿ ರಚಿಸಲಾದ Karnataka Educational Institutions (Absorption of persons working as part time Lecturers in the aided private Educational Institutions) (Special) Rules

2010 ರಲ್ಲಿ ಅನುದಾನಿತ ಪದವಿ ಕಾಲೇಜುಗಳಲ್ಲಿ 1993-94 ಮತ್ತು 1994-95ನೇ ಸಾಲಿನಿಂದ ಇತ್ತೀಚಿನವರೆಗೆ ಸತತವಾಗಿ ಅರೆಕಾಲಿಕ ಉಪನ್ಯಾಸಕರಾಗಿ ಕಾರ್ಯ ನಿರ್ವಹಿಸಿದವರ ಸೇವೆಯನ್ನು ಅನುದಾನಿತ ಬೇರ್ಪಟ್ಟ ಪದವಿ ಪೂರ್ವ ಕಾಲೇಜುಗಳಲ್ಲಿನ ಅನುದಾನಿತ ಉಪನ್ಯಾಸಕರ ಹುದ್ದೆಗಳಲ್ಲಿ ಸೇವಾ ಸಕ್ರಮಗೊಳಿಸಲು ಅವಕಾಶ ಕಲ್ಪಿಸಲಾಗಿತ್ತು. ಈ ಸಂಬಂಧದಲ್ಲಿ ಸದರಿ ನಿಯಮಗಳನ್ವಯ ಸರ್ಕಾರದ ಆದೇಶ ಸಂಖ್ಯೆ : ಇಡಿ 86 ಟಿಪಿಯು 2006 ದಿನಾಂಕ: 13-09-2010 ರಲ್ಲಿ ಈ ನಿಯಮಗಳನ್ವಯ ಸೇವಾ ಸಕ್ರಮಕ್ಕೆ ಅರ್ಹರಾಗುವವರ ಪಟ್ಟಿಯನ್ನು ತಯಾರಿಸಿ, ಸರ್ಕಾರಕ್ಕೆ ಸಲ್ಲಿಸಲು ಕಾಲೇಜು ಶಿಕ್ಷಣ ಇಲಾಖೆಯ ಆಯುಕ್ತರ ಅಧ್ಯಕ್ಷತೆಯಲ್ಲಿ ಪರಾಮರ್ಶಕ ಸಮಿತಿಯನ್ನು ರಚಿಸಲಾಗಿತ್ತು. ಅದರಂತೆ ಸದರಿ ಸಮಿತಿಯು ಸಲ್ಲಿಸಿರುವ ವರದಿಯಲ್ಲಿ ಶಿಫಾರಸ್ಸು ಮಾಡಿರುವಂತೆ ಈ ಅಧಿಸೂಚನೆಗೆ ಅನುಬಂಧಿಸಲಾಗಿರುವ 24 ಅರೆಕಾಲಿಕ ಉಪನ್ಯಾಸಕರುಗಳನ್ನು ರೂ.11,400-21,600 ವೇತನ ಶ್ರೇಣಿಯ ಅನುದಾನಿತ ಉಪನ್ಯಾಸಕರ ಹುದ್ದೆಗಳಲ್ಲಿ ಭವಿಷ್ಯಾನ್ವಯವಾಗಿ ಈ ಕೆಳಕಂಡ ಷರತ್ತುಗಳೊಂದಿಗೆ ಸೇವಾ ವಿಲೀನಗೊಳಿಸಲಾಗಿದೆ.

1. ಸೇವಾ ಸಕ್ರಮಗೊಳಿಸಲಾದ ಹುದ್ದೆಯು ಅನುದಾನಿತ ಹುದ್ದೆಯಾಗಿರತಕ್ಕದ್ದು.
2. ಸಂಬಂಧಿಸಿದ ಪದವಿ ಪೂರ್ವ ಕಾಲೇಜಿನಲ್ಲಿ ಮಂಜೂರಾದ ಹುದ್ದೆ ಇರತಕ್ಕದ್ದು ಹಾಗೂ ಆ ಹುದ್ದೆಗೆ ನಿಯಮಾನುಸಾರ ನಿಗಧಿತ ಕಾರ್ಯಭಾರ ಇರತಕ್ಕದ್ದು.
3. ಈ ಹುದ್ದೆಯು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಅಭ್ಯರ್ಥಿಗೆ ಮೀಸಲಿರಿಸಿದ ಹುದ್ದೆಯಾಗಿಲ್ಲವೆಂಬುದನ್ನು ಖಚಿತಪಡಿಸಿಕೊಳ್ಳತಕ್ಕದ್ದು.
4. ಸೇವಾ ಸಕ್ರಮಗೊಂಡ ಉಪನ್ಯಾಸಕರಿಗೆ ಕರ್ನಾಟಕ ಶಿಕ್ಷಣ ಕಾಯ್ದೆ, 1983 ಮತ್ತು ಕರ್ನಾಟಕ ಪದವಿ ಪೂರ್ವ ಶಿಕ್ಷಣ (ಶೈಕ್ಷಣಿಕ, ನೋಂದಣಿ, ಆಡಳಿತ ಮತ್ತು ಸಹಾಯಾನುದಾನ ಇತರ) ನಿಯಮಗಳು 2006 ರಲ್ಲಿನ ಸೇವಾ ಷರತ್ತುಗಳು ಮತ್ತು ಸರ್ಕಾರವು ಕಾಲಕಾಲಕ್ಕೆ ನಿಗಧಿಪಡಿಸಿರುವ/ನಿಗಧಿಪಡಿಸಬಹುದಾದ ಸೇವಾ ಷರತ್ತುಗಳು ಅನ್ವಯವಾಗುತ್ತವೆ.
5. ಸೇವಾ ಸಕ್ರಮಗೊಂಡ ಉಪನ್ಯಾಸಕರು ಸೇವಾ ಸಕ್ರಮಗೊಂಡ ದಿನಾಂಕದಿಂದ ಹುದ್ದೆಯ ಕನಿಷ್ಠ ವೇತನ್ ಶ್ರೇಣಿಯಲ್ಲಿ ಅರ್ಹವಿರುವ ವೇತನ ಭತ್ಯೆಗಳನ್ನು ಪಡೆಯಲು ಅರ್ಹರಾಗುತ್ತಾರೆ. ಸೇವಾ ಸಕ್ರಮಗೊಳ್ಳುವ ಪೂರ್ವದಲ್ಲಿ ಸಲ್ಲಿಸಿರುವ ಸೇವೆಯನ್ನು ಯಾವುದೇ ಸೇವಾ ಸೌಲಭ್ಯಗಳಿಗೂ ಮತ್ತು ಪಿಂಚಣಿಗೆ ಪರಿಗಣಿಸಲು ಅವಕಾಶವಿರುವುದಿಲ್ಲ. ಈ ಕುರಿತಂತೆ ಕರ್ನಾಟಕ ಪದವಿ ಪೂರ್ವ ಶಿಕ್ಷಣ (ಶೈಕ್ಷಣಿಕ, ನೋಂದಣಿ, ಆಡಳಿತ ಮತ್ತು ಸಹಾಯಾನುದಾನ ಇತರ) ನಿಯಮಗಳು, 2006ರ ನಿಯಮ 21(2)ರನ್ವಯ ಮತ್ತು 21(3)ರನ್ವಯ ಸದರಿ ಸಿಬ್ಬಂದಿಗಳು ಅನುದಾನರಹಿತ ಅವಧಿಯಲ್ಲಿ ಸಲ್ಲಿಸಿದ ಸೇವೆಯನ್ನು ಯಾವುದೇ ಸೇವಾ ಸೌಲಭ್ಯಗಳಿಗೆ ಪರಿಗಣಿಸಲಾಗುವುದಿಲ್ಲವೆಂಬ ಷರತ್ತಿಗೆ ಬದ್ಧನಾಗಿರುತ್ತೇನೆ ಎಂದು ಈ ಸಿಬ್ಬಂದಿಗಳಿಂದ ಮುಚ್ಚಳಿಕೆ ಪತ್ರವನ್ನು ಬರೆಸಿಕೊಂಡ ನಂತರವೇ ವೇತನ ಬಿಡುಗಡೆ ಮಾಡುವ ಬಗ್ಗೆ ಮುಂದಿನ ಕ್ರಮವಹಿಸತಕ್ಕದ್ದು.
6. ಮೇಲಿನ ಷರತ್ತುಗಳಲ್ಲದೇ, ಕರ್ನಾಟಕ ಶಿಕ್ಷಣ ಕಾಯ್ದೆ, 1983 ಮತ್ತು ಕರ್ನಾಟಕ ಪದವಿ ಪೂರ್ವ ಶಿಕ್ಷಣ (ಶೈಕ್ಷಣಿಕ, ನೋಂದಣಿ, ಆಡಳಿತ ಮತ್ತು ಸಹಾಯಾನುದಾನ ಇತರ) ನಿಯಮಗಳು 2006ರನ್ವಯ ಈ ಹುದ್ದೆಗೆ ನಿಗಧಿತ ಕಾರ್ಯಭಾರ, ಫಲಿತಾಂಶ ಮತ್ತು ಇತರ ಅನ್ವಯಿತ ಷರತ್ತುಗಳನ್ನು ಪೂರೈಸಿರುವ ಬಗ್ಗೆ ಖಚಿತಪಡಿಸಿಕೊಂಡು ವೇತನ ಬಿಡುಗಡೆ ಮಾಡತಕ್ಕದ್ದು.

ಮೇಲ್ಕಂಡ ಷರತ್ತುಗಳನ್ನು ಪೂರೈಸಿರುವುದನ್ನು ಖಚಿತಪಡಿಸಿಕೊಂಡು Karnataka Educational Institutions (Absorption of persons working as part time Lecturers in the aided private Educational Institutions) (Special) Rules, 2010 ರನ್ವಯ ಈ ಉಪನ್ಯಾಸಕರುಗಳನ್ನು ಸೇವಾ ಸಕ್ರಮಗೊಳಿಸಲು ನಿರಾಕ್ಷೇಪಣಾ ಪತ್ರ ನೀಡಿರುವ ಸಂಸ್ಥೆಗಳ ಪದವಿ ಪೂರ್ವ ಕಾಲೇಜುಗಳ ಹುದ್ದೆಗಳಿಗೆ ಸ್ಥಳನಿಯುಕ್ತಿಗೊಳಿಸಿ, ವೇತನಾನುದಾನವನ್ನು ಬಿಡುಗಡೆ ಮಾಡಲು ಆಯುಕ್ತರು, ಪದವಿ ಪೂರ್ವ ಶಿಕ್ಷಣ ಇಲಾಖೆರವರು ಮುಂದಿನ ಕ್ರಮವಹಿಸತಕ್ಕದ್ದು.

ಸರ್ಕಾರದ ಅಧಿಸೂಚನೆ ಸಂಖ್ಯೆ : ಇಡಿ 86 ಟಿಪಿಯು 2006 ದಿನಾಂಕ: 03-04-2012 ರ ಅನುಬಂಧ

ಕ್ರಮ ಸಂಖ್ಯೆ	ಅಭ್ಯರ್ಥಿಯ ಹೆಸರು ಮತ್ತು ಕಾಲೇಜು ಶ್ರೀ/ಶ್ರೀಮತಿ	ಜನ್ಮ ದಿನಾಂಕ	ಪ್ರವರ್ಗ
1	ನಾಗಮಣಿ ಕೆ., ಕೊಂಗಾಡಿಯಪ್ಪ ಕಾಲೇಜು, ದೊಡ್ಡಬಳ್ಳಾಪುರ.	20-7-1967	ಸಾಮಾನ್ಯ
2	ಜೀವನ್‌ದಾಸ್ ಎ., ವಿವೇಕಾನಂದ ಕಾಲೇಜು, ಪುತ್ತೂರು.	22-09-1959	ಸಾಮಾನ್ಯ
3	ವಿಜಯಲಕ್ಷ್ಮಿ ಸಿ. ಪಾಟೀಲ್, ಅಕ್ಕಮಹಾದೇವಿ ಮಹಿಳಾ ಕಾಲೇಜು, ಬೀದರ್.	23-03-1967	ಪ್ರವರ್ಗ-3ಬಿ
4	ಚಂದ್ರಕಾಂತ ಪಾಟೀಲ, ಅಕ್ಕಮಹಾದೇವಿ ಮಹಿಳಾ ಕಾಲೇಜು, ಬೀದರ್.	01-04-1958	ಪ್ರವರ್ಗ-3ಬಿ

ಕ್ರಮ ಸಂಖ್ಯೆ	ಅಭ್ಯರ್ಥಿಯ ಹೆಸರು ಮತ್ತು ಕಾಲೇಜು ಶ್ರೀ/ಶ್ರೀಮತಿ	ಜನ್ಮ ದಿನಾಂಕ	ಪ್ರವರ್ಗ
5	ಜಿ. ಶ್ರೀನಿವಾಸ. ಶ್ರೀ ಗವಿಸಿದ್ದೇಶ್ವರ ಕಾಲೇಜು. ಕೊಪ್ಪಳ.	1-06-1960	ಪರಿಶಿಷ್ಟ ಪಂಗಡ
6	ಸಿದ್ಧರಾಮಗೌಡ ಪಾಟೀಲ. ಶ್ರೀ ಶಂಕರ ಕಾಲೇಜು, ನವಲಗುಂದ.	01-06-1967	ಪ್ರವರ್ಗ-3ಬಿ
7	ಈರಪ್ಪ ಅಣ್ಣಪ್ಪ ಚೌಗಲಿ. ಎಸ್.ಎಸ್.ಟಿ.ಪಿ., ಕಾಲೇಜು, ಸಂಕೇಶ್ವರ.	01-06-1963	ಪ್ರವರ್ಗ-3ಬಿ
8	ಪಾಟೀಲ ಎಂ.ಎಸ್., ಕೆ.ಎನ್.ವಿ.ವಿ., ಕಾಲೇಜು, ಕಿತ್ತೂರು.	12-07-1969	ಪ್ರವರ್ಗ-3ಬಿ
9	ಸರೋಜ ಶೇಶು ನಾಯ್ಕ, ಎಂ.ಎಂ.ಕಲಾ ಮತ್ತು ವಿಜ್ಞಾನ ಕಾಲೇಜು, ಸಿರಸಿ.	22-09-1966	ಪ್ರವರ್ಗ-3ಬಿ
10	ಮಂಜುನಾಥ ಭಟ್. ಎಂ.ಎಂ.ಕಲಾ ಮತ್ತು ವಿಜ್ಞಾನ ಕಾಲೇಜು, ಸಿರಸಿ.	01-07-1967	ಸಾಮಾನ್ಯ
11	ಮಮತಾ ಆರ್. ನಾಯ್ಕ, ಎಂ.ಎಂ.ಕಲಾ ಮತ್ತು ವಿಜ್ಞಾನ ಕಾಲೇಜು, ಸಿರಸಿ.	09-05-1968	ಸಾಮಾನ್ಯ
12	ಜೇಮ್ಸ್ ಝುಡ್ ಅಲ್ಮೇಡಾ, ಶಿವಾಜಿ ಕಲಾ ಮತ್ತು ವಾಣಿಜ್ಯ ಕಾಲೇಜು, ಬಾಡ.	10-05-1963	ಪ್ರವರ್ಗ-3ಬಿ
13	ಮನೋಹರ್ ಟಿ. ಗೌಡ, ಶಿವಾಜಿ ಕಲಾ ಮತ್ತು ವಾಣಿಜ್ಯ ಕಾಲೇಜು, ಬಾಡ.	09-05-1961	ಪ್ರವರ್ಗ-1
14	ನಾರಾಯಣ ಗಣೇಶ ಹೆಗಡೆ, ಡಾ. ಎ.ವಿ. ಬಾಳಿಗಾ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜು, ಕುಮಟಾ.	16-03-1965	ಸಾಮಾನ್ಯ
15	ವಿ.ಎಸ್. ಬೆಕಿನಾಳ. ಎಸ್.ಎಂ. ಭಂಡಾರಿ ವ ಎಸ್.ಕೆ. ರಾಠಿ ಕಾಲೇಜು, ಗುಳೇದಗುಡ್ಡ.	08-6-1966	ಪ್ರವರ್ಗ-3ಬಿ
16	ವೇದಾಂತ ಎ ಗಳತಗೆ, ಜಿ.ಐ.ಬಾಗೆವಾಡಿ ಕಾಲೇಜು, ನಿಪ್ಪಾಣಿ.	04-03-1961	ಸಾಮಾನ್ಯ
17	ಎಸ್.ಸಿ. ರುಕ್ಮಿಣಿ, ವಿದ್ಯಾವರ್ಧಕ ಕಾಲೇಜು, ಮೈಸೂರು.	05-07-1967	ಪರಿಶಿಷ್ಟ ಜಾತಿ
18	ಎಂ.ಎಸ್.ಜ್ಞಾನೇಶ್ ಮೂರ್ತಿ, ಹೆಚ್.ಕೆ.ವಿ.ಕಾಲೇಜು, ಮೈಸೂರು.	09-05-1965	ಪ್ರವರ್ಗ-2ಎ
19	ಮರಿಗೌಡ ಜಿ.ಕೆ. [illegible] ವಿಜ್ಞಾನ ಕಾಲೇಜು. ಮಂಡ್ಯ.	06-01-1964	ಪ್ರವರ್ಗ-3ಎ
20	ಕೆ.ಎನ್.ವೀಣಾ. ಪಿ.ಇ.ಎಸ್.ವಿಜ್ಞಾನ ಕಾಲೇಜು, ಮಂಡ್ಯ.	30-03-1966	ಸಾಮಾನ್ಯ
21	[illegible] ಆಚಾರ್ಯ ತುಳಸಿ ರಾ.ವಾ.ಕಾ., ಶಿವಮೊಗ್ಗ.	10-02-1964	ಪ್ರವರ್ಗ-[illegible]
22	ಶಿವಣ್ಣಗೌಡ ಎ.ಬಿ., ಎಸ್.ಎಂ.ಎಸ್., ಕಾಲೇಜು, ಹೊನ್ನಾಳಿ.	18-12-1962	ಪ್ರವರ್ಗ-3ಬಿ

ಕ್ರಮ ಸಂಖ್ಯೆ	ಅಭ್ಯರ್ಥಿಯ ಹೆಸರು ಮತ್ತು ಕಾಲೇಜು ಶ್ರೀ/ಶ್ರೀಮತಿ	ಜನ್ಮ ದಿನಾಂಕ	ಪ್ರವರ್ಗ
23	ಮಲ್ಲಿಕಾರ್ಜುನ ಗೌಡ. ಕೆ., ಹೆಚ್.ಪಿ.ಎಸ್., ಕಾಲೇಜು, ಹರಪನಹಳ್ಳಿ.	10-09-1965	ಪ್ರವರ್ಗ-3ಬಿ
24	ಬಿ.ಆರ್.ವೇದಮೂರ್ತಿ, ಬಿ.ಪಿ.ಕಲಾ ಮತ್ತು ವಾಣಿಜ್ಯ ಕಾಲೇಜು, ಹೊಳಲ್ಕೆರೆ.	27-02-1958	ಪ್ರವರ್ಗ-3ಬಿ

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಸ್.ಹೆಚ್. ಕುರಿಯವರ್,

ಸರ್ಕಾರದ ಅಧೀನ ಕಾರ್ಯದರ್ಶಿ,

ಶಿಕ್ಷಣ ಇಲಾಖೆ (ಪದವಿ ಪೂರ್ವ ಶಿಕ್ಷಣ).

ಪಿ.ಆರ್. 571

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಸಿಆಸುಇ 211 ಆಸೇವ 2011, ಬೆಂಗಳೂರು, ದಿನಾಂಕ: 10ನೇ ಏಪ್ರಿಲ್, 2012.

ಅಧಿಸೂಚನೆ ಸಂಖ್ಯೆ :ಸಿಆಸುಇ 211 ಆಸೇವ 2011 ದಿನಾಂಕ 05-12-2011ರಲ್ಲಿ ವಿಶೇಷ ಭೂ ಸ್ವಾಧೀನಾಧಿಕಾರಿ, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ, ಬೆಂಗಳೂರು- ಇಲ್ಲಿಗೆ ವರ್ಗಾವಣೆ ಆದೇಶದಲ್ಲಿರುವ ಶ್ರೀ.ಡಿ.ಪಿ.ವೆಂಕಟೇಶ್, ಕೆ.ಎ.ಎಸ್(ಕಿರಿಯ ಶ್ರೇಣಿ) ಅಧಿಕಾರಿ, ಇವರ ವರ್ಗಾವಣೆ ಆದೇಶವನ್ನು ರದ್ದುಪಡಿಸಿ, ಅವರನ್ನು ಹಾಲಿ ಕಾರ್ಯನಿರ್ವಹಿಸುತ್ತಿರುವ, ಹೇಮಾವತಿ ನೀರಾವರಿ ಯೋಜನೆಯ, ವಿಶೇಷ ಭೂ ಸ್ವಾಧೀನಾಧಿಕಾರಿ, ನಾಗಮಂಗಲ, ಹುದ್ದೆಯಲ್ಲಿಯೇ ಮುಂದುವರಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ವಡಗಾವೆ ಬಸವರಾಜ,

ಸರ್ಕಾರದ ಅಧೀನ ಕಾರ್ಯದರ್ಶಿ,

ಸಿ.ಆ.ಸು.ಇಲಾಖೆ (ಸೇವೆಗಳು-2).

ಪಿ.ಆರ್. 572

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಸಿಆಸುಇ 61 ಎಸ್ಐಎಸ್ 2012, ಬೆಂಗಳೂರು, ದಿನಾಂಕ: 16ನೇ ಏಪ್ರಿಲ್, 2012.

ಶ್ರೀ ಐ.ಆರ್.ಪೆರುಮಾಳ್, ಐ.ಎ.ಎಸ್., ಸರ್ಕಾರದ ಪ್ರಧಾನ ಕಾರ್ಯದರ್ಶಿ, ಯುವಜನ ಸೇವಾ ಇಲಾಖೆ, ಬೆಂಗಳೂರು ಇವರಿಗೆ ದಿನಾಂಕ:17-04-2012ರಿಂದ 30-04-2012ರವರೆಗೆ ಒಟ್ಟು 14 ದಿನಗಳ ಅರ್ಧವೇತನ ರಜೆಯನ್ನು ಉಪಯೋಗಿಸಿಕೊಂಡು ಅವರ ಕುಟುಂಬದ ಈ ಕೆಳಕಾಣಿಸಿದ ಸದಸ್ಯರೊಂದಿಗೆ ಪ್ರಸಕ್ತ 2012-13ರ ಬ್ಲಾಕ್ ಅವಧಿಯಲ್ಲಿ ಬಾಗ್‌ಡೋಗರ್ (ಪಶ್ಚಿಮ ಬಂಗಾಳ)ಗೆ ಹೋಗಿ-ಬರಲು ರಜಾ ಪ್ರಯಾಣ ರಿಯಾಯಿತಿಯನ್ನು ಉಪಯೋಗಿಸಿಕೊಳ್ಳಲು ಅನುಮತಿ ನೀಡಲಾಗಿದೆ.

ಕ್ರ.ಸಂ.	ಹೆಸರು ಶ್ರೀ/ಶ್ರೀಮತಿ	ಅಧಿಕಾರಿಯೊಂದಿಗೆ ಸಂಬಂಧ
1.	ಐ.ಆರ್.ಪೆರುಮಾಳ್	ಸ್ವತಃ
2.	ಲಲಿತಾ ಪೆರುಮಾಳ್	ಪತ್ನಿ

ಶ್ರೀ ಐ.ಆರ್.ಪೆರುಮಾಳ್, ಐ.ಎ.ಎಸ್., ರವರ ರಜಾ ಅವಧಿಯಲ್ಲಿ ಸರ್ಕಾರದ ಪ್ರಧಾನ ಕಾರ್ಯದರ್ಶಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು ಇವರನ್ನು ಸರ್ಕಾರದ ಪ್ರಧಾನ ಕಾರ್ಯದರ್ಶಿ, ಯುವಜನ ಸೇವಾ ಇಲಾಖೆ, ಬೆಂಗಳೂರು ಈ ಹುದ್ದೆಯ ಅಧಿಕ ಪ್ರಭಾರದಲ್ಲಿಡಲಾಗಿದೆ.

ಶ್ರೀ ಐ.ಆರ್.ಪೆರುಮಾಳ್, ಐ.ಎ.ಎಸ್., ರವರು ರಜೆಯ ಮೇಲೆ ಹೋಗಿರದಿದ್ದರೆ ಸರ್ಕಾರದ ಪ್ರಧಾನ ಕಾರ್ಯದರ್ಶಿ, ಯುವಜನ ಸೇವಾ ಇಲಾಖೆ, ಬೆಂಗಳೂರು ಈ ಹುದ್ದೆಯಲ್ಲೇ ಸ್ಥಾನಪನ್ನರಾಗಿರುತ್ತಿದ್ದರೆಂದು ದೃಢೀಕರಿಸಿದೆ.

ಸದರಿ ಉದ್ದೇಶಕ್ಕಾಗಿ ತಗಲುವ ವಾಸ್ತವಿಕ ಪ್ರಯಾಣ ವೆಚ್ಚದ ಶೇಕಡ 90ರಷ್ಟು ಹಣವನ್ನು ಅಂತಿಮ ಪ್ರಯಾಣಭತ್ಯೆ ಬಿಲ್ಲಿನಲ್ಲಿ ಹೊಂದಾಣಿಕೆ ಮಾಡುವ ಷರತ್ತಿಗೆ ಒಳಪಟ್ಟು ಮುಂಗಡ ಪ್ರಯಾಣಭತ್ಯೆಯನ್ನು ಮಂಜೂರು ಮಾಡಲಾಗಿದೆ.

ಕೇಂದ್ರ ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ : O.M.No.14028/4/2009-Estt(L), ದಿನಾಂಕ:03-06-2009 ರನ್ವಯ ಹಾಗೂ ಕೇಂದ್ರ ಸರ್ಕಾರದ ದಿನಾಂಕ: 03-06-2009 ಸಂಖ್ಯೆ : 11019/24/2005-AIS-III ದಿನಾಂಕ: 03-11-2009ರ ಪತ್ರದಲ್ಲಿ ನೀಡಿರುವ ಸ್ಪಷ್ಟೀಕರಣದನ್ವಯ 10 ದಿನಗಳ ಗಳಿಕೆ ರಜೆಯ ನಗಧೀಕರಣ ಸೌಲಭ್ಯವನ್ನು ಉಪಯೋಗಿಸಿಕೊಳ್ಳಲು ಸಹ ಅನುಮತಿ ನೀಡಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಯು.ಹೆಚ್. ನಾರಾಯಣಸ್ವಾಮಿ,
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿ.ಆ.ಸು.ಇಲಾಖೆ (ಸೇವೆಗಳು-1).

ಪಿ.ಆರ್. 573

ಕಂದಾಯ ಸಚಿವಾಲಯ

ಸ್ಥಾನಪನ್ನ ಪ್ರಮಾಣ ಪತ್ರ

ಸಂಖ್ಯೆ: ಆರ್‌ಡಿ 101 ಎಎಸ್‌ಡಿ 2012, ಬೆಂಗಳೂರು, ದಿನಾಂಕ: 12ನೇ ಏಪ್ರಿಲ್, 2012.

ಕರ್ನಾಟಕ ನಾಗರೀಕ ಸೇವಾ ನಿಯಮಗಳು-1958ರ ನಿಯಮ 53(ಎಫ್) ಪ್ರಕಾರ ಶ್ರೀ.ಎಸ್.ಕೆ.ರೇಣುಕಾ, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು ಈ ಹುದ್ದೆಗೆ ದಿನಾಂಕ: 01-02-2011ರಿಂದ ಈ ತಹಲ್‌ವರೆಗೆ ನಿಯೋಜನೆಯ ಮೇಲೆ ತೆರಳದಿದ್ದಲ್ಲಿ ಸದರಿ ಅಧಿಕಾರಿಯವರು ಮಾತೃ ಇಲಾಖೆಯಾದ ಕಂದಾಯ ಇಲಾಖೆಯಲ್ಲಿ ತಹಶೀಲ್ದಾರ್ ಹುದ್ದೆಯಲ್ಲಿ ಸ್ಥಾನಪನ್ನರಾಗಿ ಮುಂದುವರೆಯುತ್ತಿದ್ದರೆಂದು ದೃಢೀಕರಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಬಿ.ವಿ.ರಾಮಲಿಂಗಯ್ಯ,
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ (ಸೇವೆಗಳು-3).

ಪಿ.ಆರ್. 574

ಕಂದಾಯ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಆರ್‌ಡಿ 20 ಎಟಿಎಸ್ 2012, ಬೆಂಗಳೂರು, ದಿನಾಂಕ: 13ನೇ ಏಪ್ರಿಲ್, 2012.

ಶ್ರೀ ಎಸ್. ಯೋಗೇಶ್ವರ, ತಹಶೀಲ್ದಾರ್, ಸಾಗರ ತಾಲ್ಲೂಕು, ಶಿವಮೊಗ್ಗ ಜಿಲ್ಲೆ ಇವರನ್ನು ಆಡಳಿತ ಹಿತದೃಷ್ಟಿಯಿಂದ ಕರ್ನಾಟಕ ನಾಗರೀಕ ಸೇವಾ ನಿಯಮಗಳು-1958ರ ನಿಯಮ 68ರ ಮೇರೆಗೆ ಹಾಲಿ ಹೊಂದಿರುವ ಹುದ್ದೆಯ ಜೊತೆಗೆ ಖಾಲಿ ಇರುವ ತಹಶೀಲ್ದಾರ್, ಭದ್ರಾವತಿ ತಾಲ್ಲೂಕು, ಶಿವಮೊಗ್ಗ ಜಿಲ್ಲೆ, ಇಲ್ಲಿನ ಹುದ್ದೆಯ ಅಧಿಕ ಪ್ರಭಾರದಲ್ಲಿರಿಸಿ ಈ ಕೂಡಲೇ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ನೇಮಿಸಿದೆ. ಈ ಅಧಿಕಾರಿಯು ನಿಯಮಾನುಸಾರ ಪ್ರಭಾರ ಭತ್ಯೆ ಪಡೆಯಲು ಅರ್ಹರಾಗಿರುತ್ತಾರೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಬಿ.ವಿ.ರಾಮಲಿಂಗಯ್ಯ,
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ (ಸೇವೆಗಳು-3).

ಪಿ.ಆರ್. 575

ವಾಣಿಜ್ಯ ಮತ್ತು ಕೈಗಾರಿಕೆ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ವಾಕೈ 19 ಎಸ್‌ಜಿಎಫ್ 2012, ಬೆಂಗಳೂರು, ದಿನಾಂಕ: 10ನೇ ಏಪ್ರಿಲ್, 2012.

ಶ್ರೀಮತಿ ಪ್ರಜ್ಞಾ ಅಮ್ಮೆಂಬಳ, ಮುಖ್ಯ ಆಡಳಿತಾಧಿಕಾರಿ ದಿ ಮೈಸೂರು ಸಕ್ಕರೆ ಕಾರ್ಖಾನೆ ನಿ., ಮಂಡ್ಯ ಇವರು ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯಲ್ಲಿ ಸ್ಥಳನಿಯುಕ್ತಿಗಾಗಿ ದಿನಾಂಕ 24-01-2012 ರಿಂದ 15-02-2012 ರವರೆಗೆ ಕಾಯ್ದು ಅವಧಿಯನ್ನು ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳ ನಿಯಮ 8(15)(ಎಫ್) ಪ್ರಕಾರ ಕಡ್ಡಾಯ ನಿರೀಕ್ಷಣಾ ಅವಧಿ ಎಂದು ಪರಿಗಣಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಶಿವಶಂಕರ್ ನಾಯಕ್.ಎಲ್.
ಪೀಠಾಧಿಕಾರಿ (ಸಕ್ಕರೆ)
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.

ಪಿ.ಆರ್. 576

HIGH COURT OF KARNATAKA

NOTIFICATION

No. GOB (I) 26/2012, Bangalore, Dated 13th April, 2012

PART-I

In exercise of the powers conferred by Clauses (a) and (b) of Sub-Section (3) of Section 28 of the Karnataka Civil Courts Act, 1964 (Karnataka Act No. 21/1964), the High Court of Karnataka hereby designates the District Judges/Senior Civil Judges mentioned in Column No. 2 of the table below, as the Vacation Judges, for the duration of adjournment of District Court mentioned in Column No. 3 for the period of Summer Vacation of 2012, noted in Column No. 4.

TABLE

(Proposal in respect of District Courts in the State)

Sl. No.	Designation	District Court	Periods	
			From	To
1	2	3	4	5
1.	Presiding Officer, Fast Track Court-V, Bangalore Rural District, Bangalore.	Bangalore Rural	23-04-2012	25-04-2012
2.	Presiding Officer, Fast Track Court-III, Bangalore Rural District, Bangalore.	-do -	26-04-2012	29-04-2012
3.	II Addl. Senior Civil Judge, Bangalore Rural District, Bangalore.	-do -	30-04-2012	06-05-2012
4.	I Addl. Senior Civil Judge, Bangalore Rural District, Bangalore.	-do -	07-05-2012	13-05-2012
5.	Presiding Officer, Fast Track Court-IV, Bangalore Rural District, Bangalore.	-do -	14-05-2012	20-05-2012
6.	Senior Civil Judge and JMFC, Hungund	Bagalkot	23-04-2012	06-05-2012
7.	Prl. Senior Civil Judge and CJM, Bagalkot.	-do-	07-05-2012	20-05-2012
8.	IV Addl. District and Sessions Judge, Belgaum.	Belgaum	23-04-2012	24-04-2012
9.	III Addl. District and Sessions Judge, Belgaum.	-do-	25-04-2012	06-05-2012
10.	Presiding Officer, Fast Track Court-III, Belgaum.	-do-	07-05-2012	15-05-2012
11.	V Addl. District & Sessions Judge, Belgaum.	-do-	16-05-2012	20-05-2012
12.	I Addl. District & Sessions Judge, Bellary.	Bellary	23-04-2012	06-05-2012
13.	I Addl. Senior Civil Judge, Bellary	-do-	07-05-2012	10-05-2012
14.	II Addl. District & Sessions Judge, Bellary.	-do-	11-05-2012	20-05-2012
15.	Presiding Officer, Fast Track Court-I, Bidar.	Bidar	23-04-2012	29-04-2012

Sl. No.	Designation	District Court	Periods	
			From	To
16.	Presiding Officer, Fast Track Court-II, Bidar.	-do-	30-04-2012	06-05-2012
17.	The Prl. Senior Civil Judge & CJM, Bidar.	-do-	07-05-2012	20-05-2012
18.	Presiding Officer, Fast Track Court-II, Bijapur.	Bijapur	23-04-2012	06-05-2012
19.	I Addl. District and Sessions Judge, Bijapur.	-do-	07-05-2012	20-05-2012
20.	Prl. District and Sessions Judge, Chamarajanagar.	Chamarajanagar	23-04-2012	06-05-2012
21.	Presiding Officer, Fast Track Court, Kollegal.	-do-	07-05-2012	20-05-2012
22.	Addl. District & Sessions Judge, Chickmagalur	Chickmagalur	23-04-2012	30-04-2012
23.	Addl. Senior Civil Judge & JMFC, Chikmagalur.	-do-	01-05-2012	06-05-2012
24.	Presiding Officer, Fast Track Court, Chikmagalur.	Chikmagalur	07-05-2012	15-05-2012
25.	Senior Civil Judge & CJM, Chikmagalur.	-do-	16-05-2012	20-05-2012
26.	Presiding Officer, Fast Track Court, Chickballapur/Chintamani.	Chickballapur	23-04-2012	06-05-2012
27.	Senior Civil Judge and CJM, Chickballapur.	-do-	07-05-2012	20-05-2012
28.	Addl. District and Sessions Judge, Chitradurga.	Chitradurga	23-04-2012	06-05-2012
29.	Presiding Officer, Fast Track Court, Chitradurga.	-do-	07-05-2012	13-05-2012
30.	II Addl. Senior Civil Judge & JMFC, Chitradurga.	-do-	14-05-2012	20-05-2012
31.	I Addl. District & Sessions Judge, Davanagere.	Davanagere	23-04-2012	29-04-2012
32.	Prl. District & Sessions Judge, Davanagere.	-do-	30-04-2012	03-05-2012
33.	I Addl. Senior Civil Judge, Davanagere.	-do-	04-05-2012	06-05-2012
34.	Prl. Senior Civil Judge & CJM, Davanagere.	-do-	07-05-2012	
35.	II Addl. District & Sessions Judge Davanagere.	-do-	08-05-2012	20-05-2012
36.	Judge, Family Court, Dharwad.	Dharwad	23-04-2012	06-05-2012
37.	Presiding Officer, Fast Track Court, Dharwad.	-do-	07-05-2012	20-05-2012
38.	Senior Civil Judge & CJM, Gadag.	Gadag	23-04-2012	06-05-2012

Sl. No.	Designation	District Court	Periods	
			From	To
39.	Presiding Officer, Fast Track Court, Gadag.	-do-	07-05-2012	20-05-2012
40.	Prl. Sr. Civil Judge and CJM, Gulbarga.	Gulbarga	23-04-2012	06-05-2012
41.	IV Addl. District & Sessions Judge, Gulbarga.	-do-	07-05-2012	20-05-2012
42.	Presiding Officer, Fast Track Court-I, Hassan.	Hassan	23-04-2012	29-04-2012
43.	Prl. Senior Civil Judge & CJM, Hassan	Hassan	30-04-2012	06-05-2012
44.	Presiding Officer, Fast Track Court-II, Hassan.	-do-	07-05-2012	13-05-2012
45.	Addl. Senior Civil Judge & JMFC, Hassan:	-do-	14-05-2012	20-05-2012
46.	Addl. Senior Civil Judge and JMFC, Haveri.	Haveri	23-04-1012	06-05-2012
47.	Senior Civil Judge and CJM, Haveri.	-do-	07-05-2012	20-05-2012
48.	I Addl. District & Sessions Judge, D.K. Mangalore.	D.K. Mangalore	23-04-2012	01-05-2012
49.	II Addl. District & Sessions Judge, D.K. Mangalore.	-do-	02-05-2012	06-05-2012
50.	III Addl. Sr. Civil Judge & JMFC, D.K. Mangalore.	-do-	07-05-2012	09-05-2012
51.	Presiding Officer, Fast Track Court-I, D. K. Mangalore.	-do-	10-05-2012	20-05-2012
52.	Presiding Officer, Fast Track Court, Kodagu-Madikeri.	Kodagu-Madikeri	23-04-2012 11-05-2012	26-04-2012 20-05-2012
53.	Senior Civil Judge & CJM, Madikeri.	-do-	27-04-2012	10-05-2012
54.	Prl. Senior Civil Judge & CJM, Kolar.	Kolar	23-04-2012	06-05-2012
55.	I Addl. Senior Civil Judge & CJM, Kolar.	-do-	07-05-2012	13-05-2012
56.	II Addl. Senior Civil Judge & JMFC, Kolar.	-do-	14-05-2012	20-05-2012
57.	Sr. Civil Judge & CJM, Koppal.	Koppal	23-05-2012	06-05-2012
58.	Presiding Officer, Fast Track Court-II, Koppal.	-do-	07-05-2012	20-05-2012
59.	Addl. District & Sessions Judge, Mandya.	Mandya	23-04-2012	01-05-2012
60.	Addl. Senior Civil Judge & CJM, Mandya.	-do-	02-05-2012	06-05-2012
61.	Prl. Senior Civil Judge & CJM, Mandya.	-do-	07-05-2012	08-05-2012

Sl. No.	Designation	District Court	Periods	
			From	To
62.	Presiding Officer, Fast Track Court-III, Mandya.	Mandya	09-05-2012	20-05-2012
63.	II Addl. District and Sessions Judge, Mysore.	Mysore	23-04-2012	06-05-2012
64.	I Addl. District & Sessions Judge, Mysore.	-do-	07-05-2012	20-05-2012
65.	District and Sessions Judge, Ramanagara.	Ramanagara	23-04-2012	06-05-2012
66.	Presiding Officer, Fast Track Court, Ramanagara	-do-	07-05-2012	20-05-2012
67.	Prl. Senior Civil Judge and CJM, Raichur.	Raichur	23-04-2012	06-05-2012
68.	Presiding Officer, Fast Track Court, Raichur	-do-	07-05-2012	20-05-2012
69.	I Addl. Senior Civil Judge & CJM, Shiomaga.	Shimoga	23-04-2012	29-04-2012
70.	Prl. Senior Civil Judge & CJM, Shimoga.	-do-	30-04-2012	06-05-2012
71.	Presiding Officer, Fast Track Court, Bhadravathi.	-do-	07-05-2012	08-05-2012
72.	Judge, Family Court, Shimoga.	-do-	09-05-2012	15-05-2012
73.	Presiding Officer, Fast Track Court-I, Shimoga.	-do-	16-05-2012	20-05-2012
74.	II Addl. District and Sessions Judge, Tumkur.	Tumkur	23-04-2012	30-04-2012
75.	Presiding Officer, Fast Track Court-II, Tumkur.	-do-	01-05-2012	06-05-2012
76.	III Addl. District & Sessions Judge, Tumkur.	-do-	07-05-2012	17-05-2012
77.	Presiding Officer, Fast Track Court-I, Tumkur.	-do-	18-05-2012	20-05-2012
78.	Prl. Senior Civil Judge and CJM, Udupi.	Udupi	23-04-2012	06-05-2012
79.	Presiding Officer, Fast Track Court, Udupi.	-do-	07-05-2012	20-05-2012
80.	District & Sessions Judge, Karwar.	U.K. Karwar	23-04-2012	06-05-2012
81.	Addl. Senior Civil Judge, Karwar.	-do-	07-05-2012	20-05-2012
82.	Civil Judge and JMFC, Yadgir.	Yadgir	23-04-2012	06-05-2012
83.	Senior Civil Judge & CJM, Yadgir.	-do-	07-05-2012	20-05-2012

PART-II

In exercise of the powers conferred under sub-Section (3) of Section 28 of the Karnataka Civil Courts Act, 1964, the Vacation Judges are directed to dispose of urgent civil matters in which injunction, stay of proceedings and attachment orders etc., are sought for during the Summer Vacation of 2012.

PART-III

In exercise of the powers conferred under sub-Section (5) of Section 28 of the Karnataka Civil Courts Act, 1964, the Vacation Judges are directed to exercise the same administrative control over the staff of the Civil Courts that are being exercised by the Prl. District and Sessions Judges, during the period of Summer Vacation of 2012, in the absence of Prl. District and Sessions Judges.

PART-IV

Wherever the Senior Civil Judges mentioned in column No. 2 are designated as Vacation Civil Judges, the District Judges shall issue a Notification as required under Sub-Section (3) of Section 10 of the Criminal Procedure Code making provisions for the disposal of any urgent application appointing such officers.

By Order of the High Court
P. Krishna Bhat,
Registrar General

P.R. 577

HIGH COURT OF KARNATAKA
NOTIFICATION
No. GOB (I) 26/2012, Bangalore, Dated 13th April, 2012.

In exercise of the powers conferred by sub-Section (3) of Section 11 of the Bangalore City Civil Court Act, 1979 the High Court of Karnataka hereby designates the following Judges of the Bangalore City Civil Court, mentioned in Column No. 2 of the table below, as the Vacation City Civil Judges, for hearing of all the matters which are required to be immediately and promptly dealt with during Summer Vacation of 2012 for the periods mentioned in Column No. 4 of the table below.

TABLE

(Proposal in respect of City Civil Court, Bangalore)

Sl. No.	Designation	City Civil Court	Periods	
			From	To
1	2	3	4	
1	XXX Addl. City Civil and Sessions Judge, Bangalore	Bangalore	23-04-2012	29-04-2012
2.	XLVI Addl. City Civil and Sessions Judge, Bangalore	-do-	30-04-2012	06-05-2012
3	XLIV Addl. City Civil and Sessions Judge, Bangalore	-do-	07-05-2012	16-05-2012
4	XI Addl. City Civil and Sessions Judge, Bangalore	-do-	17-05-2012	20-05-2012

PART-II

In exercise of the powers conferred under sub-Section (3) (a) of Section 11 of the Bangalore City Civil Court Act, 1979, the Vacation City Civil Judges are directed to dispose of urgent civil matters in which injunction, stay of proceedings and attachment orders etc., are sought for during the Summer Vacation of 2012.

PART-III

In exercise of the powers conferred under sub-Section (3)(c) of Section 11 of the Bangalore City Civil Court Act, 1979, the Vacation City Civil Judges are directed to exercise the same administrative control over the staff of the City Civl Court, Bangalore ,

that are being exercised by the the Principal City Civil and Sessions Judge, Bangalore, during the period of Summer Vacation of 2012, in the absence of Prl. City Civil and Sessions Judge, Bangalore.

By Order of the High Court

P. Krishna Bhat,

Registrar General

P.R. 578

HIGH COURT OF KARNATAKA

NOTIFICATION

No. GOB (I) 26/2012, Bangalore, Dated 13th April, 2012.

PART-I

In exercise of the powers conferred by Clause (a) of sub-Section (3) of Section 21 of the Karnataka Small Causes Courts Act, 1964, the High Court of Karnataka hereby designates the Civil Judges mentioned in Column No. 2 of the table below as the vacation Judges for the duration of adjournment of Small Causes Courts mentioned in Column No. 3 for the periods of Summer Vacation of 2012 notied in Column No. 4.

TABLE

(ProposalS in respect of Small Causes Courts, Bangalore and Mysore)

Sl. No.	Designation	Small Causes Court	Periods	
			From	To
1	2	3	4	
1	XIX Addl. Judge, Court of Small Causes, Bangalore	Bangalore	23-04-2012	06-05-2012
2.	XXIII Addl. Judge, Court of Small Causes, Bangalore	-do-	07-05-2012	20-05-2012
3	I Addl. Sr. Civil Judge & CJM, Mysore.	Mysore	23-04-2012	06-05-2012
4	Judge, Court of Small Causes, Mysore.	-do-	07-05-2012	20-05-2012

PART-II

In exercise of the powers conferred under Clause (b) of Sub-Section (3) of Section 21 of the Karnataka Small Causes Courts Act, 1964 Vacation Judges of Court of Small Causes are hereby directed to dispose of urgent civil matters in which injuction, stay of Proceedings and attachment orders etc., are sought for, during the Summer Vacation of 2012.

PART-III

In exercise of the powers conferred by Sub-Section (5) of Section 21 of the Karnataka Small Causes Courts Act, 1964 the Vacation Judges are directed to have the Administrative control over the Staff of Court of Small Causes concerned, during Summer Vacation of 2112, in the absence of unit head in the headquarters.

By Order of the High Court

P. Krishna Bhat,

Registrar General

P.R. 579

HIGH COURT OF KARNATAKA

NOTIFICATION

No. GOB (I) 26/2012, Bangalore, Dated 13th April, 2012.

In exercise of the powers conferred by Clause (a) of Sub-Rule (3) of Rule 6 of the Family Courts (Procedure) Rules, 1987, the High Court of Karnataka hereby designates the Officers mentioned in column (2) as Vacation Judges of the Family Courts

mentioned in column No. (3) for hearing of all matters which are required to be immediately and promptly dealth with during the Summer Vacation of 2012 for the periods noted against them in Column No. 4.

TABLE

(Proposal in respect of Family Courts in the State)

Sl. No.	Designation	Family Court	Periods	
			From	To
1	2	3	4	
1	II Addl. Prl. Judge, Family Court, Bangalore	Bangalore	23-04-2012	26-04-2012
2	III Addl. Prl. Judge, Family Court, Bangalore	-do-	27-04-2012	30-04-2012
3	V Addl. Prl. Judge, Family Court, Bangalore	-do-	01-05-2012	06-05-2012
4	I Addl. Prl. Judge, Family Court, Bangalore	-do-	07-05-2012	15-05-2012
5	Prl. Judge, Family Court, Bangalore	-do-	14-05-2012	15-05-2012
6	IV Addl. Prl. Judge, Family Court, Banglore	-do-	16-05-2012	20-05-2012
7	Judge, Family Court, Belgaum	Belgaum	23-04-2012	06-05-2012
8	Presiding Officer, Fast Track Court-III, Belgaum	-do-	07-05-2012	20-05-2012
9	Presiding Officer, Fast Track Court-II, Bijapur	Bijapur	23-04-2012	06-05-2012
10	I Addl. District and Sessions Judge, Bijapur	-do-	07-05-2012	20-05-2012
11	Judge, Family Court, Davanagere	Davanagere	23-04-2012	29-04-2012
12	Prl. District & Sessions Judge, Davanagere	-do-	30-04-2012	03-05-2012
13	I Addl. Sr. Civil Judge, Davanagere	-do-	04-05-2012	06-05-2012
14	Prl. Senior Civil Judge & CJM, Davanagere	-do-	07-05-2012	
15	II Addl. District & Sessions Judge, Davanagere	-do-	08-05-2012	20-05-2012
16	Judge, Family Court, D.K. Mangalore	D.K. Mangalore	23-04-2012	29-04-2012
17	II Addl. District & Sessions Judge, D.K. Mangalore	-do-	30-04-2012	06-05-2012
18	III Addl. Sr. Civil Judge & JMFC, D.K. Mangalore	-do-	07-05-2012	09-05-2012
19	Presiding Officer, Fast Track Court, D.K. Mangalore	-do-	10-05-2012	20-05-2012

Sl. No.	Designation	Family Court	Periods	
			From	To
20	Judge, Family Court, Dharwad	Dharwad	23-04-2012	06-05-2012
21	Presiding Officer, Fast Track Court-III, Dharwad	-do-	07-05-2012	20-05-2012
22	Judge, Family Court, Gulbarga	Gulbarga	23-04-2012 16-05-2012	01-05-2012 20-05-2012
23	Presiding Officer, Labour Court, Gulbarga	-do-	02-05-2012	15-05-2012
24	VI Addl. District & Sessions Judge, Mysore	Mysore	23-04-2012	06-05-2012
25	III Addl. District & Sessions Judge, Mysore	Mysore	07-05-2012	08-05-2012
26	Judge, Family Court, Mysore	-do-	09-05-2012	20-05-2012
27	Prl. Senior Civil Judge and CJM, Raichur	Raichur	23-04-2012	06-05-2012
28	Presiding Officer, Fast Track Court, Raichur	-do-	07-05-2012	20-05-2012
29	Presiding Officer, Fast Track Court-II, Shimoga	Shimoga	23-04-2012	06-05-2012
30	Presiding Officer, Fast Track Court, Shimoga	-do-	07-05-2012	08-05-2012
31	Judge, Family Court, Shimoga	-do-	09-05-2012	20-05-2012

By Order of the High Court

P. Krishna Bhat,

Registrar General

P.R. 580

HIGH COURT OF KARNATAKA

NOTIFICATION

No. GOB (I) 26/2012, Bangalore, Dated 13th April, 2012.

PART-I

In exercise of the powers vested under sub-section (2) of Section 12 of the Code of Criminal Procedure, 1973 (Central Act No. 2/1974), the High Court of Karnataka hereby appoints the Senior Civil Judges mentioned in Column No. 2 as Addl. Chief Judicial Magistrates for the Districts mentioned in Column No. 3 for the periods mentioned in Column No. 4, during Summer Vacation 2012.

TABLE

(Proposal for appointment of Addl. CJM)

Sl. No.	Designation	District Court	Periods	
			From	To
1	2	3	4	
1	II Addl. Senior Civil Judge, Bangalore Rural District, Bangalore	Bangalore Rural	30-04-2012	06-05-2012
2.	I Addl. Senior Civil Judge, Bangalore Rural Disrict, Bangalore	-do-	07-05-2012	13-05-2012

Sl. No.	Designation	District Court	Periods	
			From	To
3	Senior Civil Judge & JMFC, Hungund	Bagalkot	23-04-2012	06-05-2012
4	I Addl. Senior Civil Judge, Bellary	Bellary	07-05-2012	10-05-2012
5	Addl. Senior Civil Judge & JMFC, Chikmagular	Chikmagalur	01-05-2012	06-05-2012
6	II Addl. Senior Civil Judge & JMFC, Chitraduraga	Chikmagalur	14-05-2012	20-05-2012
7	I Addl. Senior Civil Judge, Davanagere	Davanagere	04-05-2012	06-05-2012
8	Addl. Senior Civil Judge & JMFC, Hassan	Hassan	14-05-2012	20-05-2012
9	Addl. Senior Civil Judge & JMFC, Haveri	Haveri	23-04-2012	06-05-2012
10	III Addl. Sr. Civil Judge & JMFC, D.K. Mangalore	D.K. Mangalore	07-05-2012	09-05-2012
11	II Addl. Senior Civil Judge & JMFC, Kolar	Kolar	14-05-2012	20-05-2012
12	Addl. Senior Civil Judge, Karwar	-do-	07-05-2012	20-05-2012
13	Civil Judge and JMFC, Yadgir	Yadgir	23-04-2011	06-05-2012

PART-II

In exercise of the powers conferred under Section 9(5) of the Code of Criminal Procedure, 1973, the Senior Civil Judges mentioned in Column No. 2 of the above table are hereby directed to dispose of any urgent application which is, or may be, made or pending before the District Judge of the District Courts mentioned in Column No. 3 of the above table, during Summer Vacation of 2012..

By Order of the High Court

P. Krishna Bhat,

Registrar General

P.R. 581

HIGH COURT OF KARNATAKA

NOTIFICATION

No. GOB (I) 28/2001, Bangalore, Dated 13th April, 2012.

In pursuance to Rule 118-A(1) of K.C.S.Rs. sanction is hereby accorded for payment of cash equivalent of leave salary for Earned Leave at the credit of Sri A.K. Mulla, District Judge, subject to maximum of 240 days, on the date of his attaining the age of superannuation i.e., on 31-03=2012. It is certified that no Departmental Enquiry was pending against the said Officer, as on that date.

By Order of the High Court

P. Krishna Bhat,

Registrar General

P.R. 582

WPP-47

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೪೭	ಬೆಂಗಳೂರು, ಗುರುವಾರ, ಮೇ ೩, ೨೦೧೨ (ವೈಶಾಖ ೧೩, ಶಕ ವರ್ಷ ೧೯೩೪)	ಸಂಚಿಕೆ ೧೮

ಭಾಗ–೩

ಸರ್ಕಾರದ ಆಯಾ ಇಲಾಖೆಗಳ ಮುಖ್ಯಸ್ಥರ ಮತ್ತು ಸ್ಥಳೀಯ ಪ್ರಾಧಿಕಾರಿಗಳಿಗೆ ಸಂಬಂಧಿಸಿದ ಅಧಿಸೂಚನೆಗಳು

ಸಹಕಾರ ಸಂಘಗಳ ಸಹಾಯಕ ನಿಬಂಧಕರು ಹಾಗೂ ವಸೂಲಾಧಿಕಾರಿಗಳು, ಶಿರಸಿ ಉಪವಿಭಾಗ, ಶಿರಸಿ ಇವರ ನಡವಳಿಕೆಗಳು

ವಿಷಯ: ದಿ ತೋಟಗಾರ್ಸ್ ಕೋ–ಆಪರೇಟಿವ್ ಸೇಲ್ ಸೊಸೈಟಿ ಲಿಮಿಟೆಡ್., ಶಿರಸಿ ಇವರ ಅಮಲ್ಜಾರಿ ಪ್ರಕರಣ ಸಂಖ್ಯೆ ಸಿ.ಇ.ಪಿ59/2010–11ಕ್ಕೆ ಸಂಬಂಧಪಟ್ಟಂತೆ ಸ್ಥಿರಾಸ್ತಿಯನ್ನು 1960ನೇ ಸಹಕಾರ ಸಂಘಗಳ ನಿಯಮಗಳು ನಿಯಮ 38(5)(ಎ) ರನ್ವಯ ಮಾರಾಟ ಸ್ಥಿರೀಕರಣಗೊಳಿಸುವ ಬಗ್ಗೆ.

ಉಲ್ಲೇಖ: (1) ದಾವಾ ಸಂಖ್ಯೆ:.ಡಿಆರ್.ಎನ್/ಎಫ್/ಡಿಡಿಎಸ್/1490/2009–10

(2) ಅಮಲ್ಜಾರಿ ಸಂಖ್ಯೆ: ಸಿ.ಇ.ಪಿ. 59/2010–11

(3) ಮಾರಾಟಾಧಿಕಾರಿಗಳ ವರದಿ ದಿನಾಂಕ: 19–09–2011

ದಿ ತೋಟಗಾರ್ಸ್ ಕೋ–ಆಪರೇಟಿವ್ ಸೇಲ್ ಸೊಸೈಟಿ ಲಿಮಿಟೆಡ್.,ಶಿರಸಿ (ಉ.ಕ.) .... ಅವಾರ್ಡುದಾರ

– ವಿರುದ್ಧ–

ಶ್ರೀ ಅನಂತ ನಾರಾಯಣ ಗದ್ದೇಮನೆ .... ತೀರ್ಪುಬಾಕಿದಾರ

ಪ್ರಸ್ತಾವನೆ:–

ಶ್ರೀ ಅನಂತ ನಾರಾಯಣ ಗದ್ದೇಮನೆ, ಮೆ॥ ವೆಂಕಟೇಶ ಟ್ರೇಡರ್ಸ, ಗ್ರಾಮ ಶಿರಸಿ, ತಾ:ಶಿರಸಿ ಇವರು ದಿ ತೋಟಗಾರ್ಸ್ ಕೋ–ಆಪರೇಟಿವ್ ಸೇಲ್ ಸೊಸೈಟಿ ಲಿಮಿಟೆಡ್.,ಶಿರಸಿ (ಉ.ಕ.) ಇದರ ಪ್ರಧಾನ ಕಛೇರಿಯಿಂದ ದಿನಾಂಕ:09–05–2011 ರಂದು ರೂ.20,36,000/– (ರೂ ಇಪ್ಪತ್ತು ಲಕ್ಷದ ಮೂವತ್ತಾರು ಸಾವಿರಗಳು ಮಾತ್ರ) ಗಳನ್ನು ಖರೀದಿದಾರರ ಮುಂಗಡವಾಗಿ ಪಡೆದಿದ್ದು, ಸದರ್ ಸಾಲವನ್ನು ಮರುಪಾವತಿಸಲು ವಿಫಲರಾಗಿ ಸುಸ್ತಿದಾರರಾದ ಕಾರಣ ಸಾಲ ವಸೂಲಾತಿಗಾಗಿ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ಅಡಿಯಲ್ಲಿ ಗೌರವ ಮಧ್ಯಸ್ಥಗಾರರು, ಸಹಕಾರ ಸಂಘಗಳು ಇವರ ನ್ಯಾಯಾಲಯದಿಂದ ಪಡೆದ ದಾವಾ ಕ್ರಮ ಸಂಖ್ಯೆ. ಡಿಆರ್.ಎನ್/ಎಫ್/ಡಿಡಿಎಸ್/1490/2009–10 ಆದೇಶ ದನ್ವಯ ದಿ ತೋಟಗಾರ್ಸ್ ಕೋ–ಆಪರೇಟಿವ್ ಸೇಲ್ ಸೊಸೈಟಿ ಲಿಮಿಟೆಡ್ ಶಿರಸಿ (ಉ.ಕ.) ಇದರ ಪ್ರಧಾನ ವ್ಯವಸ್ಥಾಪಕರು, ಕರ್ನಾಟಕ ಸಹಕಾರ ಸಂಘಗಳ ನಿಯಮಗಳ ಅಡಿ ಈ ಕಛೇರಿಯಲ್ಲಿ ಅಮಲ ಬಜಾವಣೆಗೆ ದಾಖಲ್ ಮಾಡಿದ್ದು ಅಮಲ್ಜಾರಿ ಪ್ರಕರಣ ನಂಬರ್ ಸಿ ಇ ಪಿ 59/2010–11 ರನ್ವಯ ದಾಖಲಾದಂತೆ ಮುಂದಿನ ವಸೂಲಿ ಕ್ರಮದ ಬಗ್ಗೆ ಅಮಲ್ಜಾರಿ ಪ್ರಕರಣವನ್ನು ಸಂಘದ ಮಾರಾಟಾಧಿಕಾರಿಯವರಿಗೆ ವಹಿಸಲಾಗಿತ್ತು. ಸದರಿ ಮಾರಾಟಾಧಿಕಾರಿಯವರು ಅಂತಿಮವಾಗಿ ಅಮಲ್ಜಾರಿ ಕ್ರಮ ಕೈಗೊಂಡು ಮೂಲ ಸಾಲಗಾರನ ಈ ಕೆಳಗೆ ಕಾಣಿಸಿದ ಸ್ಥಿರಾಸ್ತಿಯನ್ನು ಜಪ್ತಿ ಪಡಿಸಿ ದಿನಾಂಕ: 09–05–2011 ರಂದು ಬಹಿರಂಗ ಹರಾಜಿಗೆ ತೆಗೆಯಲಾಗಿತ್ತು. ಸದರ್ ಬಹಿರಂಗ ಹರಾಜಿನಲ್ಲಿ 6 ಜನ ಬಿಡ್‌ದಾರರು ಭಾಗವಹಿಸಿದ್ದು . ಈ ಪೈಕಿ ಶ್ರೀ ಗೋಪಾಲ ನಾರಾಯಣ ಗದ್ದೇಮನೆ

ಸಾಕೀನ ಬಣಗಟ್ಟು ಅಂಚೆ: ಅಮ್ಮೀನಳ್ಳಿ ತಾ: ಶಿರಸಿ ಈತನು ರೂ.20,36,000/- (ರೂ. ಇಪ್ಪತ್ತು ಲಕ್ಷದ ಮೂವತ್ತಾರು ಸಾವಿರಗಳು ಮಾತ್ರ) ಗಳಿಗೆ ಬಿಡ್ಡ ಮಾಡಿದ್ದು ಅತ್ಯಧಿಕ ಬಿಡ್‌ದಾರನಾಗಿರುತ್ತಾನೆ.

ಡಿಕ್ರಿ ಆದೇಶ ಮತ್ತು ಅಮಲ್ಜಾರಿ ಅರ್ಜಿ ಅನ್ವಯ ಬಾಕಿದಾರನಿಂದ ಸದರ್ ಸ್ಥಿರಾಸ್ತಿ ಜಪ್ತಿ ಮಾಡಿದ ಸಾಲದ ಖಾತೆಗೆ ಹರಾಜು ದಿನಾಂಕದವರೆಗೆ ಅಸಲು, ಬಡ್ಡಿ ಹಾಗೂ ಇತರೇ ಖರ್ಚು ಸೇರಿ ಒಟ್ಟೂ ರಖಂ ರೂ.38,52,736/- ಸಂಘಕ್ಕೆ ಬರಬೇಕಾಗಿರುತ್ತದೆ. ರೂ.20,36,000/- ಗಳ ಅತ್ಯಧಿಕ ಬಿಡ್ಡುದಾರನಾದ ಶ್ರೀ ಗೋಪಾಲ ನಾರಾಯಣ ಗದ್ದೆಮನೆ ಸಾ: ಬಣಗಟ್ಟು ತಾ:ಶಿರಸಿ ಇತನು ಬಿಡ್ಡಿನ ಮೊತ್ತದ ಶೇಖಡಾ 46 ರ ಬಾಬ್ತು ರೂ.9,50,000/-(ರೂ. ಒಂಭತ್ತು ಲಕ್ಷದ ಐವತ್ತು ಸಾವಿರಗಳು ಮಾತ್ರ) ಗಳನ್ನು ಹರಾಜಿನ ಸ್ಥಳದಲ್ಲಿಯೆ ಡಿಕ್ರಿದಾರ ದಿ ತೋಟಗಾರ್ಸ್ ಕೋ-ಆಪರೇಟಿವ್ ಸೇಲ್ ಸೊಸೈಟಿ ಲಿಮಿಟೆಡ್ ಶಿರಸಿ.,(ಉ.ಕ.) ಇದರ ಪ್ರಧಾನ ಕಛೇರಿಯಲ್ಲಿ ವಸೂಲಾಧಿಕಾರಿಗಳ ಅಮಾನತ್ ಖಾತೆಗೆ ಪಾವತಿ ಮಾಡಿರುತ್ತಾನೆ. ಬಾಕಿ ಉಳಿದ ಬಿಡ್ಡ ಮೊತ್ತ ರೂ.10,86,000/- (ರೂ. ಹತ್ತು ಲಕ್ಷದ ಎಂಭತ್ತಾರು ಸಾವಿರಗಳು ಮಾತ್ರ) ಗಳನ್ನು ಮತ್ತು ಮುದ್ರಾಂಕ ಶುಲ್ಕ ರೂ.1,22,160/- ಹಾಗೂ ನೋಂದಣಿ ಫೀ ರೂ.20,360/- ಒಟ್ಟೂ ರೂ.12,28,520/- ಗಳನ್ನು ದಿನಾಂಕ 19-09-2011 ರಂದು ಸಂಘದಲ್ಲಿ ವಸೂಲಾಧಿಕಾರಿಗಳ ಅಮಾನತ್ ಖಾತೆಗೆ ಜಮಾ ಮಾಡಿರುತ್ತಾನೆ.

ದಿ ತೋಟಗಾಸ್ ಕೋ-ಆಪರೇಟಿವ್ ಸೇಲ್ ಸೊಸೈಟಿ ಲಿಮಿಟೆಡ್ ಶಿರಸಿ (ಉ.ಕ.) ಇದರ ಮಾರಾಟಾಧಿಕಾರಿಗಳು ದಿನಾಂಕ 09-05-2011 ರಂದು ನಡೆಸಿದ ಸಾರ್ವಜನಿಕ ಬಹಿರಂಗ ಹರಾಜನ್ನು ಕರ್ನಾಟಕ ಸಹಕಾರ ಸಂಘಗಳ ಕಾನೂನು ಮತ್ತು ನಿಯಮಗಳನ್ನು ಪಾಲಿಸಿ ಹರಾಜು ಕ್ರಮವನ್ನು ನಡೆಸಿರುವುದಾಗಿ ಹಾಗೂ ಸಂಘದ ಬಾಕಿದಾರನಾದ ಶ್ರೀ ಅನಂತ ನಾರಾಯಣ ಗದ್ದೇಮನೆ ಈತನ ಸ್ಥಿರಾಸ್ತಿಯನ್ನು ಶ್ರೀ ಗೋಪಾಲ ನಾರಾಯಣ ಗದ್ದೇಮನೆ, ಸಾ: ಬಣಗಟ್ಟು, ತಾ: ಶಿರಸಿ ರವರಿಗೆ ಮಾರಾಟ ಮಾಡಿರುವ ಹರಾಜನ್ನು ಖಾಯಂಗೊಳಿಸಬೇಕೆಂದು ಉಲ್ಲೇಖ(3) ರಂತೆ ಕಛೇರಿಗೆ ಸವಿಸ್ತಾರವಾದ ವರದಿಯನ್ನು ಸಲ್ಲಿಸಿರುತ್ತಾರೆ.

ದಿನಾಂಕ 09-05-2011 ರಂದು ನಡೆಸಿದ ಸ್ಥಿರಾಸ್ತಿ ಬಹಿರಂಗ ಹರಾಜಿನ ನಡವಳಿಕೆಗಳನ್ನು ಪರಿಶೀಲಿಸಿದಾಗ ಹರಾಜಿನಲ್ಲಿ ಒಟ್ಟೂ 6 ಜನ ಬಿಡ್‌ದಾರರು ಭಾಗವಹಿಸಿದ್ದು, ಈ ಪೈಕಿ ಅತ್ಯಧಿಕ ಬಿಡ್ಡುದಾರನಾದ ಶ್ರೀ ಗೋಪಾಲ ನಾರಾಯಣ ಗದ್ದೇಮನೆ ಸಾ:ಬಣಗಟ್ಟು ಇವರಿಗೆ ರೂ.20,36,000/- (ರೂ. ಇಪ್ಪತ್ತು ಲಕ್ಷದ ಮೂವತ್ತಾರು ಸಾವಿರಗಳು ಮಾತ್ರ) ಗಳಿಗೆ ಮಾರಾಟ ಮಾಡಿರುವುದು ದಾಖಲೆಗಳಿಂದ ತಿಳಿದು ಬಂದಿರುತ್ತದೆ. ಲಿಲಾವು ಆದ ದಿನಾಂಕದಿಂದ 30 ದಿನಗಳ ಅವಧಿಯ ದಿನಾಂಕ 09-06-2011ರ ಒಳಗಾಗಿ ತೀರ್ಪು ಬಾಕಿದಾರರಾದ ಶ್ರೀ ಅನಂತ ನಾರಾಯಣ ಗದ್ದೇಮನೆ ರವರು ತನ್ನ ಸ್ಥಿರಾಸ್ತಿಯನ್ನು ಬಹಿರಂಗ ಹರಾಜಿನಲ್ಲಿ ಮಾರಾಟ ಮಾಡಿದ್ದರ ಕುರಿತು ಕರ್ನಾಟಕ ಸಹಕಾರ ಸಂಘಗಳ ನಿಯಮದಡಿಯಲ್ಲಿ ಯಾವುದೇ ಅರ್ಜಿ ಸಲ್ಲಿಸದೇ ಇರುವ ಪ್ರಯುಕ್ತ,ಕಾರಣ ದಿನಾಂಕ 09-05-2011 ರಂದು ನಡೆಸಲಾದ ಬಹಿರಂಗ ಹರಾಜನ್ನು ಖಾಯಂಗೊಳಿಸಬಹುದೆಂದು ಮಾರಾಟಾಧಿಕಾರಿಯವರು ಸಲ್ಲಿಸಿದ ವರದಿಯನ್ನು ಪರಿಶೀಲಿಸಿ ಮಾರಾಟಾಧಿಕಾರಿಯವರು ಕೈಗೊಂಡ ಕ್ರಮಗಳು ಕಾನೂನುಬದ್ಧವಾಗಿದೆ ಎಂದು ಕಂಡುಬಂದಿರುವುದರಿಂದ ಈ ಕೆಳಗಿನ ಸ್ಥಿರೀಕರಣ ಆದೇಶ ಹೊರಡಿಸಲಾಗಿದೆ.

ಆದೇಶ

ಕ್ರಮ ಸಂಖ್ಯೆ. ಸ.ನಿ.21/ಎ.ಬಿ.ಎನ್./ಇ.ಎಕ್ಸ್.ಎನ್/ಸಿ.ಇ.ಪಿ.59/10-11, ದಿನಾಂಕ: 23-02-2012

ಶ್ರೀ ಎಸ್.ಬಿ.ಆಗೇರ ಸಹಕಾರ ಸಂಘಗಳ ಸಹಾಯಕ ನಿಬಂಧಕರು ಹಾಗೂ ವಸೂಲಾಧಿಕಾರಿಗಳು, ಶಿರಸಿ ಉಪವಿಭಾಗ ಶಿರಸಿ ಆದ ನಾನು ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960 ನಿಯಮ 38 (6) (ಎ) ರನ್ವಯ ದತ್ತವಾಗಿರುವ ಅಧಿಕಾರವನ್ನು ಉಪಯೋಗಿಸಿ ಅಮಲ್ಜಾರಿ ಅರ್ಜಿ ಸಂಖ್ಯೆ ಸಿ.ಇ.ಪಿ. 59/2010-11 ಯಲ್ಲಿ ಶ್ರೀ ಅನಂತ ನಾರಾಯಣ ಗದ್ದೇಮನೆ ಇವರಿಗೆ ಸೇರಿದ ಸ್ಥಿರಾಸ್ತಿಯನ್ನು ದಿನಾಂಕ: 09-05-2011ರಂದು ವಾದಿ ಸಂಘದ ಮಾರಾಟಾಧಿಕಾರಿವರು ನಡೆಸಿದ ಮುಂದುವರೆದ ಬಹಿರಂಗ ಹರಾಜಿನಲ್ಲಿ ಶ್ರೀ. ಗೋಪಾಲ ನಾರಾಯಣ ಗದ್ದೆಮನೆ ಸಾ:ಬಣಗಟ್ಟು ಪೋ: ತಾ;ಶಿರಸಿ ಈತನು ಹೆಚ್ಚಿನ ಬಿಡ್ಡುದಾರನಾಗಿದ್ದು, ಈತನಿಗೆ ರೂ.20,36,000/- (ರೂ. ಮೂವತ್ತಾರು ಲಕ್ಷದ ಇಪ್ಪತ್ತು ಸಾವಿರಗಳು ಮಾತ್ರ) ಗಳಿಗೆ ಈ ಕೆಳಗೆ ವಿವರಿಸಿದ ಸ್ಥಿರಾಸ್ತಿಯನ್ನು ಬಹಿರಂಗವಾಗಿ ಹರಾಜು ಮೂಲಕ ಮಾರಾಟ ಮಾಡಿರುವುದನ್ನು ಖಾಯಂಗೊಳಿಸಿ ಸ್ಥಿರೀಕರಿಸಿರುವುದಾಗಿ ಈ ಮೂಲಕ ಆದೇಶ ಮಾಡಿದೆ. ಅಲ್ಲದೇ ದಿ ತೋಟಗಾಸ್ ಕೋ-ಆಪರೇಟಿವ್ ಸೇಲ್ ಸೊಸೈಟಿ ಲಿಮಿಟೆಡ್ ಶಿರಸಿ (ಉ.ಕ.) ಇದರ ಪ್ರಧಾನ ಕಛೇರಿಯಲ್ಲಿ ಸಹಕಾರ ಸಂಘಗಳ ಸಹಾಯಕ ನಿಬಂಧಕರು ಹಾಗೂ ವಸೂಲಾಧಿಕಾರಿಗಳು, ಶಿರಸಿ ಉಪವಿಭಾಗ ಶಿರಸಿ (ಉ.ಕ.) ಇವರ ಅಮಾನತ ಖಾತೆಯಲ್ಲಿ ಜಮಾ ಇರುವ ಒಟ್ಟೂ ರಖಂ ರೂ.21,78,520/- ಗಳಲ್ಲಿ ಸದರ್ ಸ್ಥಿರಾಸ್ತಿ ಜಪ್ತಿ ಮಾಡಿದ ಬಾಕಿದಾರನ ಸಾಲದ ಖಾತೆಗೆ ರೂ. 20,36,000/- ಗಳನ್ನು ಜಮಾ ಪಡೆದುಕೊಳ್ಳಲು ಮತ್ತು ಉಳಿದ ರಖಂ ರೂ.1,42,520/- ಗಳಲ್ಲಿ ಮುದ್ರಾಂಕ ಶುಲ್ಕಕ್ಕೆ ರೂ. 1,22,160/- ಹಾಗೂ ನೋಂದಣಿ ಫೀ ರೂ.20,360/- ಭರಣ ಮಾಡಲು ಸಹ ಸದರ ಸಂಘದ ಪ್ರಧಾನ ಕಛೇರಿಯ ಪ್ರಧಾನ ವ್ಯವಸ್ಥಾಪಕರಿಗೆ ಈ ಮೂಲಕ ಆದೇಶ ನೀಡಲಾಗಿದೆ.

ಸ್ಥಿರಾಸ್ತಿಯ ವಿವರ

ಉತ್ತರ ಕನ್ನಡ ಜಿಲ್ಲಾ ಶಿರಸಿ ತಾಲೂಕ, ಲಂಡಕನಳ್ಳಿ ಗ್ರಾಮದಲ್ಲಿರುವ ಸ್ಥಿರಾಸ್ತಿ ರೆವೆನ್ಯೂ ಸರ್ವೇ ನಂಬರ್ 33 ಅ 1 ಅ, ಕ್ಷೇತ್ರ:1-0-0 ಇದರ ಚೆಕ್ ಬಂದಿ ಸರ್ವೇ ಗಡಿಯಂತೆ.

ಮಾರಾಟದ ಮೊಬಲಗು : ರೂ.20,36,000

ಮಾರಾಟ ಮಾಡಿದ ದಿನಾಂಕ : 23-02-2012

ಈ ಆದೇಶವನ್ನು ನನ್ನ ಸಹಿ ಹಾಗೂ ಕಛೇರಿಯ ಮುದ್ರೆಯೊಂದಿಗೆ ದಿನಾಂಕ: 23-02-2012 ರಂದು ನೀಡಲಾಗಿದೆ.

ಸಹಕಾರ ಸಂಘಗಳ ಸಹಾಯಕ ನಿಬಂಧಕರು
ಶಿರಸಿ ಉಪವಿಭಾಗ ಶಿರಸಿ (ಉ.ಕ.)

ನಮೂನೆ ಕ್ರಮಾಂಕ -10

ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ರನ್ವಯ ರಚಿತವಾದ ನಿಯಮ 38. ಉಪನಿಯಮ 7ರ ಪ್ರಕಾರ ಕೊಟ್ಟ

ವಿಕ್ರಿ ಪ್ರಮಾಣ ಪತ್ರ

ನೋಂದಣಿ ಶುಲ್ಕದ ವಿವರ :

ಚಲನ ರಶೀದಿ ನಂಬರ್ :

ದಿನಾಂಕ : 23-02-2012

ರಖಂ : 20,36,000/-

ಶಾಖೆ : ಶಿರಸಿ

ದಾವಾ ಸಂಖ್ಯೆ : ಡಿ.ಆರ್.ಎನ್/ಎಫ್/ಡಿ.ಡಿಎಸ್/1490/09-10

ಅಮಲ್ಜಾರಿ ಸಂಖ್ಯೆ : ಸಿ.ಇ.ಪಿ.59/10-11

ಹೆಸರು : ಶ್ರೀ ಎಸ್.ಬಿ.ಅಗೇರ,
ಸಹಕಾರ ಸಂಘಗಳ ಸಹಾಯಕ ನಿಬಂಧಕರು ಹಾಗೂ ವಸೂಲಾಧಿಕಾರಿಗಳು
ಶಿರಸಿ ಉಪವಿಭಾಗ ಶಿರಸಿ (ಉ.ಕ.)

ದಿ ತೋಟಗಾರ್ಸ್ ಕೋ-ಆಪರೇಟಿವ್ ಸೇಲ್ ಸೊಸೈಟಿ ಲಿಮಿಟೆಡ್., ಶಿರಸಿ (ಉ.ಕ) ....ಡಿಕ್ರಿದಾರ

ವಿರುದ್ಧ

ಶ್ರೀ ಅನಂತ ನಾರಾಯಣ ಗದ್ದೇಮನೆ, ಮೆ॥ ವೆಂಕಟೇಶ ಟ್ರೇಡರ್ಸ ಶಿರಸಿ .... ತೀರ್ಪುಬಾಕಿದಾರ

ಈ ಮೂಲಕ ಪ್ರಮಾಣೀಕರಿಸುವುದೇನೆಂದರೆ,

ಉತ್ತರಕನ್ನಡ ಜಿಲ್ಲಾ ಶಿರಸಿ ತಾಲೂಕ ಬಣಗಟ್ಟು ಗ್ರಾಮದ ರಹವಾಸಿ ಶ್ರೀ ಗೋಪಾಲ ನಾರಾಯಣ ಗದ್ದೇಮನೆ ಇವರು ಉತ್ತರಕನ್ನಡ ಜಿಲ್ಲಾ, ಶಿರಸಿ ತಾಲೂಕು, ಲಂಡಕನಹಳ್ಳಿ ಗ್ರಾಮದ ನಿವಾಸಿ ಶ್ರೀ ಅನಂತ ನಾರಾಯಣ ಗದ್ದೇಮನೆ ಇವರಿಂದ ದಿ ತೋಟಗಾರ್ಸ್ ಕೋ-ಆಪರೇಟಿವ್ ಸೇಲ್ ಸೊಸೈಟಿ ಲಿಮಿಟೆಡ್.,ಶಿರಸಿ ಇದರ ಶಿರಸಿ ಪ್ರಧಾನ ಕಛೇರಿಗೆ ಸಂದಾಯವಾಗತಕ್ಕ ಬಾಕಿ ವಸೂಲಿ ಬಗ್ಗೆ ಈ ಕಾರ್ಯಾಲಯದಲ್ಲಿ ದಾಖಲು ಪಡಿಸಿದ ಅಮಲ್ಜಾರಿ ಪ್ರಕರಣ ಸಂಖ್ಯೆ ಸಿ.ಇ.ಪಿ. 59/2010-11 ನೇದರ ಅಮಲ ಬಜಾವಣೆಯಲ್ಲಿ ಈ ಕೆಳಗೆ ಅನುಬಂಧದಲ್ಲಿ ಕಾಣಿಸಿದ ತೀರ್ಪು ಬಾಕಿದಾರನ ಜಪ್ತಿಪಡಿಸಿದ ಸ್ಥಿರಾಸ್ತಿಯನ್ನು ಅಧಿಕಾರ ಹೊಂದಿದ ಮಾರಾಟಾಧಿಕಾರಿ, ದಿ ತೋಟಗಾರ್ಸ್ ಕೋ-ಆಪರೇಟಿವ್ ಸೇಲ್ ಸೊಸೈಟಿ ಲಿಮಿಟೆಡ್ ಶಿರಸಿ., (ಉ.ಕ.) ಪ್ರಧಾನ ಕಛೇರಿ ಇವರು ನಡೆಸಿದ ಮುಂದುವರೆದ ಜಾಹೀರ ಲಿಲಾವಿನಲ್ಲಿ ಶ್ರೀ ಶ್ರೀ ಗೋಪಾಲ ನಾರಾಯಣ ಗದ್ದೇಮನೆ ಸಾ: ಬಣಗಟ್ಟು ತಾ: ಶಿರಸಿ ಇವರು ಖರೀದಿಸಿ, ಖರೀದಿ ರಖಂ ರೂ. 20,36,000/-(ರೂ. ಇಪ್ಪತ್ತು ಲಕ್ಷದ ಮೂವತ್ತಾರು ಸಾವಿರಗಳು ಮಾತ್ರ)ವನ್ನು ಪಾವತಿ ಮಾಡಿರುತ್ತಾರೆ. ಮತ್ತು ಸದರಿ ವಿಕ್ರಿಯು ನನ್ನಿಂದ ದಿನಾಂಕ 21-09-2011ರಂದು ಖಾಯಂ ಮಾಡಲ್ಪಟ್ಟಿರುತ್ತದೆ

ಸ್ಥಿರಾಸ್ಥಿಗಳ ಅನುಬಂಧ

ನೋಂದಣಿ ಜಿಲ್ಲಾ : ಉತ್ತರಕನ್ನಡ

ತಾಲೂಕು : ಶಿರಸಿ

ಗ್ರಾಮ : ಲಂಡಕನಹಳ್ಳಿ

<u>ಸ್ಥಿರಾಸ್ತಿಗಳ ವರ್ಣನೆ</u>

ಉತ್ತರ ಕನ್ನಡ ಜಿಲ್ಲಾ , ಶಿರಸಿ ತಾಲೂಕು , ಲಂಡಕನಹಳ್ಳಿ ಗ್ರಾಮದಲ್ಲಿರುವ ಸ್ಥಿರಾಸ್ತಿ ಸರ್ವೇ ನಂ 33 ಅ 1 ಅ ಕ್ಷೇತ್ರ 01-00-00 ಇದರ ಚಕ್‌ಬಂದಿ ಸರ್ವೇ ಗಡಿಯಂತೆ.

ವಿಕ್ರಿ ಕಿಮ್ಮತ್ತು ಅಂತೂ ರೂ.20,36,000/- (ರೂ. ಇಪ್ಪತ್ತು ಲಕ್ಷದ ಮೂವತ್ತಾರು ಸಾವಿರಗಳು ಮಾತ್ರ)

ಮಾರಾಟದ ದಿನಾಂಕ : 23-02-2012

ನನ್ನ ಸಹಿ ಹಾಗೂ ಕಛೇರಿ ಮೊಹರಿನೊಂದಿಗೆ ಇಂದು ದಿನಾಂಕ:23-02-2012ರಂದು ಕೊಡಲ್ಪಟ್ಟಿತು.

ಸಹಕಾರ ಸಂಘಗಳ ಸಹಾಯಕ ನಿಬಂಧಕರು
ಶಿರಸಿ ಉಪವಿಭಾಗ ಶಿರಸಿ (ಉ.ಕ)

ಸಹಕಾರ ಸಂಘಗಳ ಸಹಾಯಕ ನಿಬಂಧಕರು ಹಾಗೂ ವಸೂಲಾಧಿಕಾರಿಗಳು ಶಿರಸಿ ಉಪವಿಭಾಗ ಶಿರಸಿ ಇವರ ನ್ಯಾಯಾಲಯದಲ್ಲಿ

ಫಾರ್ಮ ನಂ.-11

38ನೇ ರೂಲಿನ (7) ಕಲಂ

ಸ್ಥಿರಸ್ವತ್ತುಗಳನ್ನು ಕೊಂಡದಕ್ಕೆ ಪ್ರಕಟಣೆ

ದಾವಾ ಸಂಖ್ಯೆ : ಡಿ.ಆರ್.ಎನ್/ಎಫ್/ಡಿ.ಡಿಎಸ್/1490/09-10

ಅಮಲ್ಜಾರಿ ಸಂಖ್ಯೆ : ಸಿ.ಇ.ಪಿ.59/10-11

ಉತ್ತರ ಕನ್ನಡ ಜಿಲ್ಲಾ ಶಿರಸಿ ತಾಲೂಕ, ಬಣಗಟ್ಟು ಗ್ರಾಮದ ನಿವಾಸಿ ಶ್ರೀ ಗೋಪಾಲ ನಾರಾಯಣ ಗದ್ದೇಮನೆ ಸಾ:ಅಮ್ಮೀನಳ್ಳಿ ತಾಲೂಕ: ಶಿರಸಿ ಇವರು ಈ ಕೆಳಗೆ ತೋರಿಸಿದ ಶ್ರೀ ಅನಂತ ನಾರಾಯಣ ಗದ್ದೇಮನೆ, ಸಾ:ಲಂಡಕನಹಳ್ಳಿ ತಾ:ಶಿರಸಿ ಇವರಿಗೆ ಸೇರಿದ ಈ ಕೆಳಗೆ ನಮೂದಿಸಿದ ಸ್ಥಿರಾಸ್ತಿಯನ್ನು ಮುಂದುವರಿದ ಬಹಿರಂಗ ಹರಾಜಿನಲ್ಲಿ 2011 ನೇ ಇಸವಿ ಮೇ ತಿಂಗಳ 09ನೇ ತಾರೀಖಿನಂದು ಕ್ರಯಕ್ಕೆ ಕೊಂಡಿರುತ್ತಾರಾಗಿಯೂ ಮತ್ತು ದರಖಾಸ್ತು ರಖಂ ರೂ.20,36,000/-(ರೂ. ಇಪ್ಪತ್ತು ಲಕ್ಷದ ಮೂವತ್ತಾರು ಸಾವಿರಗಳು ಮಾತ್ರ) ವನ್ನು ಸಂಪೂರ್ಣವಾಗಿ ಪಾವತಿ ಮಾಡಿದ್ದಾರಾಗಿಯೂ ಈ ಮೂಲಕ ಎಲ್ಲಾ ಜನರಿಗೆ ಬಹಿರಂಗವಾಗಿ ತಿಳಿಸೋಣವಾಗುತ್ತದೆ. ಆದ ಪ್ರಯುಕ್ತ ಸದರ್ ಸ್ಥಿರಾಸ್ತಿಯಲ್ಲಿರುವ ತೀರ್ಪು ಬಾಕಿದಾರ ಶ್ರೀ ಅನಂತ ನಾರಾಯಣ ಗದ್ದೇಮನೆ ಸಾ: ಲಂಡಕನಹಳ್ಳಿ ತಾ: ಶಿರಸಿ ಇವರ ಸದರಿ ಹಕ್ಕು ವ ಪ್ರಯೋಜನಗಳಿಗೆ ಶ್ರೀ ಗೋಪಾಲ ನಾರಾಯಣ ಗದ್ದೇಮನೆ, ಸಾ: ಬಣಗಟ್ಟು, ತಾ: ಶಿರಸಿ ಇವರು ಉತ್ತರಾಧಿಕಾರಿಗಳಾಗಿದ್ದಾರೆ, ಎಂಬುದಾಗಿ ಈ ಮೂಲಕ ದೃಢಪಡಿಸೋಣವಾಗುತ್ತದೆ.

ತಾಲೂಕ	ಗ್ರಾಮ	ರೆವೆನ್ಯೂ ಸರ್ವೇ ನಂಬರ್	ಕ್ಷೇತ್ರ	ಖಾತೆದಾರನ ಹೆಸರು
ಶಿರಸಿ	ಲಂಡಕನಳ್ಳಿ	33 ಅ 1 ಅ	1-0-00	ಶ್ರೀ ಗೋಪಾಲ ನಾರಾಯಣ ಗದ್ದೇಮನೆ

ಸಹಕಾರ ಸಂಘಗಳ ಸಹಾಯಕ ನಿಬಂಧಕರು
ಶಿರಸಿ ಉಪವಿಭಾಗ ಶಿರಸಿ (ಉ.ಕ)

ಪಿ.ಡಿ. 50

ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಗರ ವಿಭಾಗ, ಸಾಗರ ಇವರ ನ್ಯಾಯಾಲಯದಲ್ಲಿ

ಬಿ3:ಅಮೊ:ವಾಹನ:ವಿವ:21/09-10 ದಿನಾಂಕ:20-08-2011

ಉಪಸ್ಥಿತರು : ಶ್ರೀ ಮನೋಜ್ ಕುಮಾರ್ ತ್ರಿಪಾಠಿ, ಭಾ.ಅ.ಸೇ.,
ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಗರ ವಿಭಾಗ, ಸಾಗರ.

ಪಿರ್ಯಾಧಿದಾರರು : ಪೊಲೀಸ್ ಸಬ್‌ಇನ್ಸ್‌ಪೆಕ್ಟರ್,
ಸೊರಬ ಪೊಲೀಸ್ ಠಾಣೆ. (ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು, ಸಾಗರ)

ಬಾಧ್ಯತೆದಾರರು : ಶ್ರೀ ಇಫ್ತಿಕರ್ ಅಹಮದ್ ಬಿನ್ ಹಸನ್‌ಖಾನ್,
38 ವರ್ಷ, ಚಿಕ್ಕಜಂಬೂರು ಗ್ರಾಮ, ಶಿರಾಳಕೊಪ್ಪ, ಶಿಕಾರಿಪುರ ತಾಲ್ಲೂಕು
(ಶ್ರೀ ಇ.ಎನ್. ಯೋಗರಾಜಪ್ಪ ವಕೀಲರು, ಸಾಗರ)

ಪ್ರಸ್ತಾವನೆ :-

ದಿ:01-09-2006 ರಂದು ಒಂದು ಬೈಕ್‌ನಲ್ಲಿ ಶ್ರೀಗಂಧ ಅಕ್ರಮವಾಗಿ ಸಾಗಿಸುತ್ತಿರುವುದನ್ನು ಸಬ್‌ಇನ್ಸ್‌ಪೆಕ್ಟರ್ ಆಫ್ ಪೊಲೀಸ್ ಮತ್ತು ಸಿಬ್ಬಂದಿಯವರು ಪತ್ತೆಹಚ್ಚಿ ಬರೆದ ಮಹಜರ್ ವಿವರ ಈ ಕೆಳಗಿನಂತಿದೆ.

ದಿ:01-09-2006 ರಂದು ಪೊಲೀಸ್ ಸಬ್‌ಇನ್ಸ್‌ಪೆಕ್ಟರ್, ಸೊರಬ ಪೊಲೀಸ್ ಠಾಣೆ, ಇವರಿಗೆ ಮಧ್ಯಾಹ್ನ ಸುಮಾರು 12-30 ಗಂಟೆಗೆ ಬಂದ ಖಚಿತ ವರ್ತಮಾನದ ಮೇರೆಗೆ ಮಧ್ಯಾಹ್ನ 1-00 ಗಂಟೆಗೆ ಸೊರಬ ತಾಲ್ಲೂಕು ಅಂಡಿಗೆ ಗ್ರಾಮದ ಅಂಬೇಡ್ಕರ್ ಕಾಲೋನಿ ಹತ್ತಿರ ಕಾಯುತ್ತಿರುವಾಗ ಅಂಬೇಡ್ಕರ ನಗರದಿಂದ ಒಂದು ಹಿರೋಹೊಂಡಾ ಮೋಟಾರ್ ಸೈಕಲ್ ಕೆಎ-15-ಜೆ-7174 ಬರುತ್ತಿದ್ದು, ಅದರಲ್ಲಿ 2 ಜನ ಆಸಾಮಿಗಳಿದ್ದು, ಅದನ್ನು ತಡೆದು ನಿಲ್ಲಿಸಿದಾಗ ಹಿಂದುಗಡೆ ಕೂತ ಆಸಾಮಿಯ ಕಾಲಿನ ಮೇಲೆ ಒಂದು ಪ್ಲಾಸ್ಟಿಕ್ ಚೀಲ ಇಟ್ಟುಕೊಂಡಿದ್ದು, ಅದನ್ನು ಬಿಚ್ಚಿ ನೋಡಿದಾಗ ಅದರೊಳಗಡೆ ಶ್ರೀಗಂಧದ ತುಂಡುಗಳಿದ್ದು, ಬೈಕ್ ಚಾಲನೆ ಮಾಡುತ್ತಿದ್ದವನು ಇಫ್ತಿಕರ್ ಅಹಮದ್ ಬಿನ್ ಹಸನ್‌ಖಾನ್, 21 ವರ್ಷ, ಡ್ರೈವರ್ ಕೆಲಸ, ಬ್ಯಾಣದಕೇರಿ ವಾಸಿ, ಶಿರಾಳಕೊಪ್ಪ ಟೌನ್, ಸ್ವಂತ ಊರು ಚಿಕ್ಕಜಂಬೂರು, ಶಿಕಾರಿಪುರ ತಾ॥ ಎಂದು ಬೈಕ್‌ನ ಹಿಂಭಾಗದಲ್ಲಿ ಚೀಲ ಹಿಡಿದು ಕುಳಿತ ಆಸಾಮಿ ಹೆಸರು ಆನಂದ ಬಿನ್ ಬಸವರಾಜಪ್ಪ, 24 ವರ್ಷ, ತಮಿಳು ಎಸ್.ಸಿ. ಜನಾಂಗ, ಅಂಬೇಡ್ಕರ್ ಕಾಲೋನಿ, ಅಂಡಿಗೆ ಹತ್ತಿರ, ಸೊರಬ ತಾ॥ ಅಂತ ತಿಳಿಸಿದನು. ಹಾಗೂ ರಹದಾರಿ ಕೇಳಲಾಗಿ ಶ್ರೀಗಂಧ ಸಾಗಾಣಿಕೆಗೆ ಪರವಾನಿಗೆ ಇಲ್ಲವೆಂದು ತಿಳಿಸಿರುತ್ತಾನೆ. ಸ್ಥಳದಲ್ಲಿದ್ದ ಪಂಚರ ಸಮಕ್ಷಮ ಆಸಾಮಿ, ಶ್ರೀಗಂಧ ಮತ್ತು ಮೋಟಾರ್ ಬೈಕ್‌ನ್ನು ಇಲಾಖಾ ಪರ ವಶಪಡಿಸಿಕೊಂಡು ಶ್ರೀಗಂಧ ತೂಕ ಮಾಡಿದಾಗ 15 ಕೆ.ಜಿ. ಇದ್ದು, ಅದರ ಅಂದಾಜು ಬೆಲೆ ₹ 15,000/- ಆಗಿದ್ದು, ಐ.ಪಿ.ಸಿ. ಕಲಂ 379, R/W ಕರ್ನಾಟಕ ಅರಣ್ಯ ಕಾಯಿದೆ 1963 ಸೆಕ್ಷನ್ 86, 87ರ ಪ್ರಕಾರ ಠಾಣೆ ಗುನ್ನೆ ನಂ:123/2006ನ್ನು ದಾಖಲಿಸಿರುತ್ತಾರೆ.

ನಂತರ ಈ ಪ್ರಕರಣದಲ್ಲಿ ಜಪ್ತಾದ ವಾಹನ ಮತ್ತು ಶ್ರೀಗಂಧದ ತುಂಡುಗಳನ್ನು ಈ ನ್ಯಾಯಾಲಯದ ಸುಪರ್ಧಿಗೆ ಪಡೆಯಲು ಮಾನ್ಯ 2ನೇ ಶೀಘ್ರ ವಿಲೇವಾರಿ, ಶಿವಮೊಗ್ಗ ನ್ಯಾಯಾಲಯದ ಎಸ್.ಸಿ.ನಂ: 3/2009 ದಿ:02-09-2009ರಲ್ಲಿ ಆದೇಶವಾಗಿರುತ್ತದೆ. ಅದರಂತೆ ಈ ನ್ಯಾಯಾಲಯದಿಂದ ಸಂ:ಬಿ3.ಅಮೊ.ಕೋರ್ಟ್.ಜಿ.ಎಲ್.301/09-10 ದಿ:07-09-2009ರ ಪತ್ರದಲ್ಲಿ ಶ್ರೀ ಕೆ.ನಾಗಪ್ಪ, ವನಪಾಲಕರು ಸೊರಬ ವಲಯ, ಇವರನ್ನು ದಿ:10-09-2009 ರಂದು ಮಾನ್ಯ 2ನೇ ಶೀಘ್ರ ವಿಲೇವಾರಿ ನ್ಯಾಯಾಲಯ, ಶಿವಮೊಗ್ಗದಿಂದ ಹಿರೋಹೊಂಡಾ ಬೈಕ್ ಕೆಎ-15-ಜೆ-7174ನ್ನು ಪಡೆದು ಈ ನ್ಯಾಯಾಲಯಕ್ಕೆ ಒಪ್ಪಿಸಲು ತಿಳಿಸಲಾಗಿತ್ತು. ಅದರಂತೆ ಶ್ರೀ ನಾಗಪ್ಪ, ವನಪಾಲಕರು ಸದರಿ 2ನೇ ಶೀಘ್ರ ವಿಲೇವಾರಿ ನ್ಯಾಯಾಲಯ, ಶಿವಮೊಗ್ಗದಿಂದ ಹಿರೋಹೊಂಡಾ ಬೈಕ್ ಪಡೆದು ಈ ನ್ಯಾಯಾಲಯಕ್ಕೆ ದಿ: 11-09-2009 ರಂದು ಒಪ್ಪಿಸಿರುತ್ತಾರೆ. ಸದರಿ ವಾಹನವು ಸಾಗರದ ಸರ್ಕಾರಿ ನಾಟಾ ಸಂಗ್ರಹಾಲಯದಲ್ಲಿ ಸುರಕ್ಷತೆಗಾಗಿಡಲು ವಲಯ ಅರಣ್ಯಾಧಿಕಾರಿ, ಸರ್ಕಾರಿ ನಾಟಾ ಸಂಗ್ರಹಾಲಯ, ಸಾಗರ ಇವರ ಸುಪರ್ಧಿಗೆ ಕೊಡಲು ಈ ನ್ಯಾಯಾಲಯದಿಂದ ಆದೇಶವಾಗಿದೆ.

ಈ ವಾಹನದ ಆರ್.ಸಿ. ಮಾಲೀಕರೆಂದು ಶ್ರೀ ಇಫ್ತಿಕರ್ ಅಹಮದ್ ಬಿನ್ ಹಸನ್‌ಖಾನ್, 38 ವರ್ಷ, ಚಿಕ್ಕಜಂಬೂರು ಗ್ರಾಮ, ಶಿರಾಳಕೊಪ್ಪ, ಶಿಕಾರಿಪುರ ತಾ॥ ಇವರು ವಕೀಲರ ಮುಖಾಂತರ ಅರ್ಜಿಯನ್ನು ದಿ:13-10-2009 ರಂದು ಈ ನ್ಯಾಯಾಲಯಕ್ಕೆ ಸಲ್ಲಿಸಿ, ಈ ವಾಹನ ಮಧ್ಯಂತರ ಅವಧಿಗೆ ಬಿಟ್ಟುಕೊಡಲು ಕೋರಿರುತ್ತಾರೆ. ಇವರ ಅರ್ಜಿಯನ್ನು ದಿ:02-04-2011 ರಂದು ಈ ನ್ಯಾಯಾಲಯದಿಂದ ತಿರಸ್ಕರಿಸಿ ಆದೇಶ ಹೊರಡಿಸಿದೆ.

ನಂತರ ಶ್ರೀ ಹೆಚ್.ಎಂ.ಜಗನ್ನಾಥ, ಆರಕ್ಷಕ ಮತ್ತು ನಿರೀಕ್ಷಕರು ಸಂಚಾರಿ ನಿಯಂತ್ರಣ, ಪೊಲೀಸ್ ಠಾಣೆ, ಶಿವಮೊಗ್ಗ (ಸೊರಬ ಪೊಲೀಸ್ ಠಾಣೆಯ ಆಗಿನ ಪೊಲೀಸ್ ಸಬ್‌ಇನ್ಸ್‌ಪೆಕ್ಟರ್) ಇವರನ್ನು ದಿ:02-07-2011 ರಂದು ಈ ನ್ಯಾಯಾಲಯಕ್ಕೆ ಕರೆಸಿ ಸತ್ಯಪ್ರತಿಜ್ಞೆ ಬೋಧಿಸಿ ಮುಖ್ಯ ವಿಚಾರಣೆ ಸಹಾಯಕ ಸರ್ಕಾರಿ ಅಭಿಯೋಜಕರಿಂದ " 23-10-2005 ರಿಂದ 07-09-2007 ರವರೆಗೆ ಸೊರಬ ಪೋಲೀಸ್ ಠಾಣೆಯಲ್ಲಿ ಪೋಲೀಸ್ ಸಬ್‌ಇನ್ಸ್‌ಪೆಕ್ಟರ್ ಆಗಿ ಕಾರ್ಯ ನಿರ್ವಹಿಸಿರುತ್ತೇನೆ. ದಿ:01-09-2006 ರಂದು ನಾನು ಠಾಣೆಯಲ್ಲಿದ್ದಾಗ ಬಂದ ಖಚಿತ ವರ್ತಮಾನದ ಮೇರೆಗೆ ಸಿಬ್ಬಂದಿಗಳೊಂದಿಗೆ ಇಲಾಖಾ ವಾಹನದಲ್ಲಿ ಅಂಡಿಗೆ ಗ್ರಾಮಕ್ಕೆ ಹೋಗಿ ಅಲ್ಲಿ ಸಮೀಪದಲ್ಲಿದ್ದ ಪಂಚರನ್ನು ಬರಮಾಡಿಕೊಂಡು ಅವರಿಗೆ ವಿಷಯ ತಿಳಿಸಿ, ಅಂಡಿಗೆ ಗ್ರಾಮದ ಅಂಬೇಡ್ಕರ್ ಕಾಲೋನಿಯ ಕ್ರಾಸ್ ಬಳಿ ಪಂಚರ ಜೊತೆ ಕಾಯುತ್ತಿದ್ದಾಗ ಕಾಲೋನಿ ಕಡೆಯಿಂದ ಒಂದು ಹೀರೋ ಹೊಂಡ ಬೈಕ್‌ನಲ್ಲಿ 2 ಜನ ವ್ಯಕ್ತಿಗಳು ಬರುತ್ತಿದ್ದು, ಅವರನ್ನು ತಡೆದು ನಿಲ್ಲಿಸಿದಾಗ ಆಸಾಮಿಗಳು ಓಡಲು ಯತ್ನಿಸಿದ್ದು ಅವರನ್ನು ಹಿಡಿದು ವಿಚಾರಿಸಿದಾಗ ಬೈಕ್ ಚಲಾಯಿಸುತ್ತಿದ್ದವನ ಹೆಸರು ಇಫ್ತಿಕಾರ್ ಅಹಮದ್ ಮತ್ತು ಹಿಂಬದಿ ಕುಳಿತವನ ಹೆಸರು ಆನಂದ ಎಂದು ಇದ್ದು ಹಿಂಬದಿ ಸವಾರನ ತೊಡೆಯ ಮೇಲೆ ಬಿಳಿ ಚೀಲವಿದ್ದು, ಚೀಲವನ್ನು ಬಿಚ್ಚಿ ನೋಡಿದಾಗ ಅದರಲ್ಲಿ ಗಂಧದ ಒಟ್ಟು 6 ತುಂಡುಗಳು ಮತ್ತು ಬೇರು ಇತ್ತು ಅವನ್ನು ಸಾಗಿಸಲು ಅವರುಗಳ ಬಳಿ ಯಾವುದೇ ರಹದಾರಿ ಇರಲಿಲ್ಲ. ವಾಹನವನ್ನು ಪರಿಶೀಲಿಸಿದಾಗ ಕೆಎ 15 ಜೆ 7174 ಹೀರೋಹೊಂಡಾ ಸ್ಪ್ಲೆಂಡರ್ ಪ್ಲಸ್ ಆಗಿತ್ತು. ಸದರಿ ಶ್ರೀಗಂಧದ ತುಂಡುಗಳು ಒಟ್ಟು 15 ಕೆ.ಜಿ. ತೂಕವಿದ್ದು, ಅವುಗಳನ್ನು ಮತ್ತು ವಾಹನವನ್ನು ಅಮಾನತ್ತುಪಡಿಸಿಕೊಂಡು ಸ್ಥಳದಲ್ಲಿ ಮಹಜರ್ ಬರೆಯಲಾಯಿತು. ಮಹಜರ್‌ನ್ನು ಈಗ ನೋಡುತ್ತಿದ್ದು ಅದನ್ನು ನಿ.ಪಿ.1 ಎಂದು ಗುರುತಿಸಿದೆ. ಅದರಲ್ಲಿನ ನನ್ನ ಸಹಿ ನಿಪಿ.1ಎ ಎಂದು ಗುರುತಿಸಿದೆ. ಆರೋಪಿ ಮತ್ತು ಮಾಹಜರೊಂದಿಗೆ ಠಾಣೆಗೆ ಬಂದು ಸ್ವದೂರಿನೊಂದಿಗೆ ಗುನ್ನೆ ಸಂಖ್ಯೆ 123/06 ಅಡಿಯಲ್ಲಿ ಪ್ರಕರಣ ದಾಖಲಿಸಿದೆ. ಸ್ವದೂರನ್ನು ಈಗ ನೋಡುತ್ತಿದ್ದು ಅದನ್ನು ನಿಪಿ 2ಎ ಎಂದು ಗುರುತಿಸಿದೆ. ಪ್ರಥಮ ವರ್ತಮಾನ ವರದಿಯನ್ನು ಈಗ ನೋಡುತ್ತಿದ್ದು ಅದನ್ನು ನಿಪಿ 3 ಎಂದು ಗುರುತಿಸಿದೆ. ಅದರಲ್ಲಿಯ ನನ್ನ ಸಹಿಯನ್ನು ನಿಪಿ 3ಎ ಎಂದು ಗುರುತಿಸಿದೆ. ತನಿಖೆಯನ್ನು ಮುಕ್ತಾಯಗೊಳಿಸಿ ದೋಷಾರೋಪಣಾ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದೇನೆ ವಾಹನವನ್ನು ಶ್ರೀಗಂಧ ಅಕ್ರಮ ಸಾಗಾಣಿಕೆಗೆ ಬಳಸಿದ್ದರಿಂದ ಅದನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಕೋರಿದೆ.

ಪಾಟಿ ಸವಾಲು ಎಂ.ಎ.ಬಿ. ವಕೀಲರಿಂದ "ವರ್ತಮಾನ ಬಂದಾಗ ಮಧ್ಯಾಹ್ನ 12-30 ಗಂಟೆಯಾಗಿತ್ತು. ಆಗ ನಾನು ಠಾಣೆಯಲ್ಲೆ ಇದ್ದೆನು. ತಕ್ಷಣ ಸಿಬ್ಬಂದಿಯೊಂದಿಗೆ ಪಂಚರನ್ನು ಕರೆದುಕೊಂಡು ಹೋಗಿರುತ್ತೇನೆ. ಠಾಣೆಯಿಂದ ಘಟನಾ ಸ್ಥಳಕ್ಕೆ 8 ಕಿ.ಮೀ ಆಗುತ್ತದೆ. ಅಂಡಿಗೆ ಗ್ರಾಮದಿಂದ ಪಂಚರನ್ನು ಕರೆದುಕೊಂಡು ಹೋಗಿರುತ್ತೇನೆ. ಘಟನಾ ಸ್ಥಳಕ್ಕೆ ನಾನು ಚಾಲಕ ಮತ್ತು 4 ಸಿಬ್ಬಂದಿ ಮತ್ತು ಪಂಚರೊಂದಿಗೆ ಹೋಗಿರುತ್ತೇವೆ. ಘಟನಾ ಸ್ಥಳ ತಲುಪಿದಾಗ 1-00 ಗಂಟೆಯಾಗಿತ್ತು. ಘಟನಾ ಸ್ಥಳದ ಸುತ್ತಮುತ್ತ ಯಾವುದೇ ವಾಸದ ಮನೆಗಳಿಲ್ಲ. ಸುಮಾರು 300 ಅಡಿ ದೂರದಲ್ಲಿ ಒಂದು ರೈಸ್ ಮಿಲ್ ಇದೆ. ನಾವು ಕಾಯುತ್ತಿದ್ದ ಸ್ಥಳದಿಂದ 250 ಮೀಟರ್ ಅಂತರದಿಂದ ಬೈಕ್ ಬರುವುದನ್ನು ಗಮನಿಸಿದೆವು. ಆಗ ನಾವು ಮರೆಯಲ್ಲಿದ್ದೆವು. ನಾವು ಸ್ವಲ್ಪ ದೂರ ದೂರ ನಿಂತಿದ್ದೆವು. ಅವರು ಸ್ಥಳಕ್ಕೆ ಬಂದ ಕೂಡಲೇ ನಾವು ಸುತ್ತುವರೆದೆವು. ಆ ಸಮಯದಲ್ಲಿ ಯಾವುದೇ ವಾಹನ ಸಂಚಾರ ಇರಲಿಲ್ಲ. ನಾವು ಸುತ್ತುವರೆದಾಗ ಚಾಲಕ ಮುಂಬದಿ ಕುಳಿತಿದ್ದು, ಹಿಂಬದಿ ಕುಳಿತವನು ಓಡಲು ಪ್ರಯತ್ನಿಸಿದರೂ ನಾವು ಹಿಡಿದಿರುತ್ತೇವೆ. 1ನೇ ಆರೋಪಿಗೆ 2ನೇ ಆರೋಪಿಗೆ ಪರಿಚಯ ಇಲ್ಲ ಎಂದರೆ ಸರಿಯಲ್ಲ. ಅಂಡಿಗೆ ಗ್ರಾಮ ಎಂದರೆ ಅಂಬೇಡ್ಕರ್ ಕಾಲೋನಿಯವನು. ಅಂಡಿಗೆ ಗ್ರಾಮದ ಮೂಲಕ ಶಿರಾಳಕೊಪ್ಪಕ್ಕೆ ಹೋಗಬೇಕು ಎಂದರೆ ಸರಿ. ಚೀಲವನ್ನು ಸ್ಥಳದಲ್ಲಿಯೇ ಬಿಚ್ಚಿ ನೋಡಲಾಯಿತು. ಸ್ಥಳಕ್ಕೆ ರೈಸ್ ಮಿಲ್‌ನಿಂದ ಸಿಬ್ಬಂದಿ ಮೂಲಕ ಸ್ಕೇಲ್ ತಕ್ಕಡಿ ತರಿಸಿ ತೂಕ ಮಾಡಿರುತ್ತೇವೆ. ಟಾಟಾ ಏಸ್ ವಾಹನದ ಮೂಲಕ ತಕ್ಕಡಿ ತರಿಸಲಾಯ್ತು. ಈ ಎಲ್ಲಾ ವಿಷಯವನ್ನು ಮಹಜರ್‌ನಲ್ಲಿ ಬರೆದಿರುವುದಿಲ್ಲ. ರಹದಾರಿಯನ್ನು ಎರಡೂ ಜನರಿಂದ ಕೇಳಿರುತ್ತೇವೆ. ಸ್ಥಳದಲ್ಲಿ ವಾಹನ ಮಾಲೀಕರ ಬಗ್ಗೆ ವಿಚಾರಿಸಿರುವುದಿಲ್ಲ. ಠಾಣೆಗೆ ಮ.2-30 ಗಂಟೆಗೆ ಬರಲಾಯಿತು. ಶ್ರೀಗಂದ ಹಿಡಿದ ಬಗ್ಗೆ ನಂತರದಲ್ಲಿ ಅರಣ್ಯ ಇಲಾಖೆಯವರಿಗೆ ತಿಳಿಸಿರುತ್ತೇವೆ. ಪಂಚರು ಠಾಣೆಗೆ ಬಂದಿರುವುದಿಲ್ಲ. 1ನೇ ಆರೋಪಿ ಶಿರಾಳಕೊಪ್ಪಕ್ಕೆ ಬರುವಾಗ 2ನೇ ಆರೋಪಿ ಶಿರಾಳಕೊಪ್ಪಕ್ಕೆ ಬರುವುದಾಗಿ ತಿಳಿಸಿ ಗಾಡಿಯಲ್ಲಿ ಲಿಫ್ಟ್ ಕೇಳಿ ಬಂದಿರುತ್ತಾನೆ ಎಂದರೆ ಸರಿಯಲ್ಲ. 1ನೇ ಆರೋಪಿಗೆ ಮತ್ತು ಮುದ್ದೇ ಮಾಲಿಗೆ ಸಂಬಂಧ ಇಲ್ಲ ಎಂದರೆ ಸರಿಯಲ್ಲ. 1 ಮತ್ತು 2ನೇ ಆರೋಪಿಯನ್ನು ಶೀಘ್ರ ನ್ಯಾಯಾಲಯ ನಿರಪರಾದಿಗಳೆಂದು ಬಿಡುಗಡೆ ಮಾಡಿದ ಆದೇಶ ನನಗೆ ತಿಳಿದಿಲ್ಲ. ಈ ಆರೋಪಿಗಳ ವಿರುದ್ಧ ನಮ್ಮ ಠಾಣೆಯಲ್ಲಿ ಬೇರೆ ಯಾವುದೇ ಕೇಸು ದಾಖಲಾಗಿರುವುದಿಲ್ಲ. ಆ ದಿನ ಬೈಕ್‌ನ್ನು ಅಕ್ರಮ ಸಾಗಾಣಿಕೆಗೆ ಬಳಸಿಲ್ಲ ಎಂದರೆ ಸರಿಯಲ್ಲ".

ಡಿಫೆನ್ಸ್ ಸಾಕ್ಷಿ ಶ್ರೀ ಇಫ್ತಿಕರ್ ಅಹಮದ್, ಇವರನ್ನು ದಿ:23-07-2011 ರಂದು ಕರೆಸಿ ಸತ್ಯಪ್ರತಿಜ್ಞೆ ಬೋಧಿಸಿ ಮುಖ್ಯ ವಿಚಾರಣೆ ಎಂ.ಎ.ಬಿ. ವಕೀಲರಿಂದ "ದಿ:1-9-2006ರಂದು ನಾನು ಸೊರಬದಿಂದ ಶಿರಾಳಕೊಪ್ಪಕ್ಕೆ ಹೋಗುತ್ತಿದ್ದೆ. ಒಬ್ಬ ವ್ಯಕ್ತಿ ಕೈ ಮಾಡಿ ನಿಲ್ಲಿಸಿ ತನ್ನ ಬಳಿ ಬಸ್‌ಛಾರ್ಜ್‌ಗೆ ಹಣವಿಲ್ಲ ಕರೆದುಕೊಂಡು ಹೋಗಿ ಎಂದು ಕೇಳಿದನು. 2-3 ಕಿ.ಮೀ. ಹೋದ ನಂತರ ರಸ್ತೆ ಪಕ್ಕದಲ್ಲಿ ಪೋಲೀಸ್ ಜೀಪ್ ನಿಂತಿದ್ದು ಅವರು ವಾಹನ ನಿಲ್ಲಿಸಿ ಚಾಲನಾ ಪರವಾನಿಗೆ ಕೇಳಿದರು. ನನ್ನ ಬಳಿ ಇರಲಿಲ್ಲ. ಆಗ ಹಿಂದುಗಡೆ ಇದ್ದವನು ಓಡಿ ಹೋದನು. ನಂತರ ಓಡಿ ಹೋದವನನ್ನು ಕರೆದುಕೊಂಡು ಬಂದರು. ನಂತರ ಕೇಸ್ ಬುಕ್ ಮಾಡಿ ನ್ಯಾಯಾಲಯಕ್ಕೆ ಹಾಜರುಪಡಿಸಿದರು. ನಂತರ ಕೇಸ್ ಖುಲಾಸೆ ಆಯಿತು. ನನ್ನ ವಾಹನವನ್ನು ಅರಣ್ಯ ಇಲಾಖೆಗೆ ಹಸ್ತಾಂತರಿಸಿದರು. ನಾನು ಯಾವುದೇ ಅಕ್ರಮ ಚಟುವಟಿಕೆಯಲ್ಲಿ ಭಾಗಿಯಾಗದ ನನ್ನ ವಾಹನವನ್ನು ಬಿಡುಗಡೆ ಮಾಡಲು ಕೋರುತ್ತೇನೆ.

ಪಾಟಿ ಸವಾಲು ಸ.ಸ.ಅ. ರವರಿಂದ "ನನ್ನ ವಾಹನದಲ್ಲಿ ಕುಳಿತು ಬಂದವನ ಹೆಸರು ಅರಣ್ಯ ಮೊಕದ್ದಮೆ ದಾಖಲಾದ ನಂತರ ತಿಳಿಯಿತು. ಅವರ ಹೆಸರು ಆನಂದ ಎಂದು. ನನ್ನ ಬೈಕ್‌ನಲ್ಲಿ ಹಿಂದೆ ಕುಳಿತವನ ಜೊತೆ ಒಂದು ಚೀಲ ಇತ್ತು ಎಂದರೆ ಗೊತ್ತಿಲ್ಲ. ನಾನು ಮತ್ತು ಅವನು ಸ್ನೇಹಿತರು ಎಂದರೆ ಸರಿಯಲ್ಲ. ಕ್ರಿಮಿನಲ್ ಪ್ರಕರಣದಲ್ಲಿ ಇಬ್ಬರೂ ಒಬ್ಬರೆ ವಕೀಲರನ್ನು ನೇಮಿಸಿದ್ದೆವೆ ಎಂದರೆ ಮೊಕದ್ದಮೆಯ ಪೂರ್ಣ ಖರ್ಚನ್ನು ಆನಂದ ನೋಡಿಕೊಂಡಿರುತ್ತಾನೆ. ಆದಿನ ನಾನು ಮತ್ತು ಆನಂದ ಬ್ಯಾಗಿನಲ್ಲಿ ಶ್ರೀಗಂಧ ಸಾಗಿಸುತ್ತಿದ್ದೆವು ಎಂದರೆ ಸರಿಯಲ್ಲ. ಸ್ಥಳದಲ್ಲಿ ಇಬ್ಬರನ್ನು ಪೋಲೀಸರು ಹಿಡಿದರು ಎಂದರೆ ಸರಿಯಲ್ಲ. ಸ್ಥಳದಲ್ಲಿ ಆದಿನ ಚೆಕ್ ಮಾಡಿದಾಗ ಶ್ರೀಗಂಧದ ಬ್ಯಾಗ್ ಇತ್ತು ಎಂದರೆ ಸರಿಯಲ್ಲ. ನಾನು ನನ್ನ ವಾಹನವನ್ನು ಬಿಡಿಸಿಕೊಳ್ಳುವ ಸಲುವಾಗಿ ಆನಂದ ನನ್ನ ಸ್ನೇಹಿತನಲ್ಲವೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಆ ದಿನ ಇಬ್ಬರೂ ಸೇರಿ ಅಕ್ರಮ ಶ್ರೀಗಂಧ ಸಾಗಿಸುತ್ತಿದ್ದರೂ ಸಹ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ".

ದಿ:30-07-2011 ಮತ್ತು 06-08-2011 ರಂದು ವಾದ ಮಂಡಿಸಲು ಡಿಫೆನ್ಸ್ ಕಡೆಯವರಿಗೆ ದಿನಾಂಕ ನೀಡಿದ್ದರು. ಯಾರು ವಿಚಾರಣೆಗೆ ಹಾಜರಾಗಿರುವುದಿಲ್ಲ. ಮುಂದಿನ ಹಂತಕ್ಕೆ ಕ್ರಮತೆಗೆದುಕೊಳ್ಳಲಾಯಿತು.

ಸಹಾಯಕ ಸರ್ಕಾರಿ ಅಭಿಯೋಜಕರು ದಿ: 06-08-2011ರಂದು ವಾದ ಮಂಡಿಸಿ, ಈ ವಾಹನದಲ್ಲಿ ಅರಣ್ಯ ಉತ್ಪನ್ನ ಕಳ್ಳ ಸಾಗಾಣಿಕೆ ಮಾಡುತ್ತಿರುವ ಸಮಯದಲ್ಲಿ ವಾಹನವನ್ನು ಅರಣ್ಯ ಉತ್ಪನ್ನದ ಸಮೇತ ಸಬ್‌ಇನ್ಸ್‌ಪೆಕ್ಟರ್ ಆಫ್ ಪೊಲೀಸ್, ಠಾಣೆ ಸೊರಬ ಇವರು ಜಪ್ತು ಮಾಡಿ ಪ್ರಥಮ ವರ್ತಮಾನ ವರದಿ, ಮಹಜರ್ ವರದಿಯನ್ನು ಈ ನ್ಯಾಯಾಲಯಕ್ಕೆ ಹಾಜರ್ಪಡಿಸಿರುತ್ತಾರೆ. ಆದ್ದರಿಂದ ಈ ವಾಹನದಲ್ಲಿ ಅರಣ್ಯ ಉತ್ಪನ್ನ ಕಳ್ಳ ಸಾಗಾಣಿಕೆ ಮಾಡಿದ ಬಗ್ಗೆ ಸಾಬೀತಾಗಿದೆ. ಆದ್ದರಿಂದ ವಾಹನ ಮತ್ತು ಅರಣ್ಯ ಉತ್ಪನ್ನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಕೋರಿರುತ್ತಾರೆ.

ಈ ಪ್ರಕರಣದಲ್ಲಿ ವಾಸ್ತಾವಾಂಶ ಮತ್ತು ಕಾನೂನಿನ ವಸ್ತುಸ್ಥಿತಿ ಈ ಕೆಳಗಿನಂತಿದೆ.

1. ಆರ್.ಸಿ. ಮಾಲೀಕರು ಹಾಗೂ ಅರ್ಜಿದಾರರು ಹಿರೋಹೊಂಡಾ ಬೈಕ್ ಕೆಎ-15-ಜೆ-7174 ರಲ್ಲಿ ಅರಣ್ಯ ಉತ್ಪನ್ನವಾದ ಶ್ರೀಗಂಧ 7 ತುಂಡು 15 ಕೆ.ಜಿ.ಯನ್ನು ದಿ:01-09-2006ರಂದು ಅಕ್ರಮವಾಗಿ ಸಾಗಿಸಲು ಉಪಯೋಗಿಸಲಾಗಿತ್ತೇ? ಹಾಗೂ ಈ ರೀತಿ ಸಾಗಿಸುವ ಮುಖಾಂತರ ಅರಣ್ಯ ಅಪರಾಧವೆಸಗಿ ಕರ್ನಾಟಕ ಅರಣ್ಯ ಕಾಯಿದೆ ಮತ್ತು ನಿಯಮವನ್ನು ಉಲ್ಲಂಘಿಸಲಾಗಿದೆಯೇ?

2. ಕರ್ನಾಟಕ ಅರಣ್ಯ ವಿಧಿ 71(ಬಿ)(1)ರ ಪ್ರಕಾರ ವಾಹನದ ಮಾಲೀಕರಿಗೆ ಕಾರಣ ಕೇಳಿ ನೋಟಿಸ್ ನೀಡಲಾಗಿದೆಯೇ? ಹಾಗೂ ಮಾಲೀಕರವರಿಗೆ ಅವರ ಅಹವಾಲನ್ನು ಮಂಡಿಸಿ ಸಮರ್ಥಿಸಿಕೊಳ್ಳಲು ಸಾಕಷ್ಟು ಅವಕಾಶವನ್ನು ನೀಡಲಾಗಿದೆಯೇ?

3. ವಾಹನದ ಮಾಲೀಕರು ಅಥವಾ ಅವರ ವಾಹನ ಚಾಲಕನಾಗಲೀ ಅಥವಾ ಅವರ ಪ್ರತಿನಿಧಿಯಾಗಲೀ ಹಿರೋಹೊಂಡಾ ಬೈಕ್‌ನಲ್ಲಿ ಅಕ್ರಮವಾಗಿ ಸರ್ಕಾರದ ಸ್ವತ್ತಾದ ಶ್ರೀಗಂಧವನ್ನು ಸಾಗಿಸಲು ಶಾಮಿಲಾಗಿದ್ದಾರೆಯೇ? ಹಾಗೂ ಈ ವಾಹನವನ್ನು ಇಂತಹ ಅಕ್ರಮ ಕಾನೂನು ಬಾಹಿರ ಅರಣ್ಯ ಉತ್ಪನ್ನ ಸಾಗಾಣಿಕೆಗೆ ಉಪಯೋಗಿಸದಂತೆ ವಾಹನದ ಮಾಲೀಕರು, ವಾಹನದ ಚಾಲಕರು ಅಥವಾ ಅವರ ಪ್ರತಿನಿಧಿಗಳು ಸಾಕಷ್ಟು ಸೂಕ್ತ ಮುನ್ನೆಚ್ಚರಿಗೆ ತೆಗೆದುಕೊಂಡಿರುತ್ತಾರೆಯೇ?

4. ತೀರ್ಮಾನಕ್ಕೆ ಬರಬಹುದಾಗಿದೆ.

ಈ ಮೇಲಿನ ಅಂಶಗಳಿಗೆ ಈ ಕೆಳಗಿನಂತೆ ಉತ್ತರಿಸಿ ಈ ಕೆಳಗಿನಂತೆ ತೀರ್ಮಾನಕ್ಕೆ ಬರಲಾಗಿದೆ, ಅದಕ್ಕೆ ಕಾರಣಗಳು ಈ ಕೆಳಗಿನಂತೆ ನೀಡಲಾಗಿದೆ.

1. ಒಂದನೇ ಅಂಶಕ್ಕೆ ಹೌದು ಎಂತಲೂ

2. ಎರಡನೇ ಅಂಶಕ್ಕೆ ಹೌದು ಎಂತಲೂ

3. ಮೂರನೇ ಅಂಶದ ಮೊದಲ ಭಾಗದ ಪ್ರಶ್ನೆಗೆ ಹೌದು ಎಂತಲು ಎರಡನೇ ಭಾಗದ ಪ್ರಶ್ನೆಗೆ ಇಲ್ಲವೆಂಬುದಾಗಿರುತ್ತದೆ.

ಅಂಶ-1:

ದಿ:01-09-2006 ರಂದು ಪೊಲೀಸ್ ಸಬ್‌ಇನ್ಸ್‌ಪೆಕ್ಟರ್, ಸೊರಬ ಪೊಲೀಸ್ ಠಾಣೆ ಇವರು ಮತ್ತು ಸಿಬ್ಬಂದಿಯವರು ಮಧ್ಯಾಹ್ನ 1-00 ಗಂಟೆಗೆ ಸೊರಬ ತಾ॥ ಅಂಡಿಗೆ ಗ್ರಾಮದ ಅಂಬೇಡ್ಕರ್ ಕಾಲೋನಿ ಹತ್ತಿರ ಗಸ್ತು ತಿರುಗುತ್ತಿರುವಾಗ ಒಂದು ಹಿರೋಹೊಂಡಾ ಬೈಕ್ ಕೆಎ-15-ಜೆ-7174ರಲ್ಲಿ 2 ಜನ ಆಸಾಮಿಗಳು ಒಂದು ಪ್ಲಾಸ್ಟಿಕ್ ಚೀಲದಲ್ಲಿ ಶ್ರೀಗಂಧದ ತುಂಡುಗಳನ್ನು ಅಕ್ರಮವಾಗಿ ಸಾಗಿಸುತ್ತಿರುವ ಬಗ್ಗೆ ಪತ್ತೆಹಚ್ಚಿ ಆಸಾಮಿಗಳನ್ನು, ವಾಹನ ಹಾಗೂ ಅರಣ್ಯ ಉತ್ಪನ್ನವನ್ನು ಇಲಾಖಾ ಪರ ವಶಪಡಿಸಿಕೊಂಡು ಪ್ರಥಮ ವರ್ತಮಾನ ವರದಿ, ಮಹಜರ್ ವರದಿ ಸಾಕ್ಷಿಗಳ ಸಹಿಯೊಂದಿಗೆ ಈ ನ್ಯಾಯಾಲಯಕ್ಕೆ ವಾಹನ ಮತ್ತು ಅರಣ್ಯ ಉತ್ಪನ್ನವನ್ನು ಹಾಜರ್ಪಡಿಸಿರುತ್ತಾರೆ. ಇದರಿಂದ ಈ ವಾಹನದಲ್ಲಿ ಶ್ರೀಗಂಧವನ್ನು ಅಕ್ರಮವಾಗಿ ಸಾಗಿಸಲು ಉಪಯೋಗಿಸಿದ್ದರಿಂದ ಕರ್ನಾಟಕ ಅರಣ್ಯ ಕಾಯಿದೆ ಮತ್ತು ಕಾನೂನನ್ನು ಉಲ್ಲಂಘಿಸಿರುತ್ತಾರೆಂದು ನನ್ನ ಉತ್ತರವಾಗಿದೆ.

ಅಂಶ-2:

ಆರ್.ಸಿ. ಮಾಲೀಕರಾದ ಶ್ರೀ ಇಫ್ತಿಕರ್ ಅಹಮದ್ ಬಿನ್ ಹಸನಖಾನ್, 38 ವರ್ಷ, ಚಿಕ್ಕಜಂಬೂರು ಗ್ರಾಮ, ಶಿರಾಳಕೊಪ್ಪ, ಶಿಕಾರಿಪುರ ತಾ॥ ಇವರು ದಿ:13-10-2009 ರಂದು ಈ ನ್ಯಾಯಾಲಯಕ್ಕೆ ವಕೀಲರ ಮುಖಾಂತರ ಕ್ಲೇಮು ಅರ್ಜಿ ಸಲ್ಲಿಸಿರುತ್ತಾರೆ. 'ಬಿ' ಎಕ್ಸ್‌ಟ್ರ್ಯಾಕ್ಟ್‌ನಲ್ಲಿ ನಮೂದಿಸಿದಂತೆ ಕರ್ನಾಟಕ ಅರಣ್ಯ ಕಾಯಿದೆ 1963 ಸೆಕ್ಷನ್ 71ಬಿ (1)ರ ಪ್ರಕಾರ ಕಾರಣ ಕೇಳಿ ಪತ್ರವನ್ನು ದಿ:11-08-2010 ರಂದು ಅಂಚೆ ಮೂಲಕ ಜಾರಿ ಮಾಡಿದೆ. ನಂತರ ಡಿಫೆನ್ಸ್ ಕಡೆ ಸಾಕ್ಷಿ ಹೇಳಿಕೆ ನೀಡಿರುತ್ತಾರೆ. ಆದರೆ ವಾದವನ್ನು ಮಂಡಿಸಲು ದಿ:30-07-2011 ಮತ್ತು 06-08-2011 ರಂದು ದಿನಾಂಕ ನಿಗಧಿಪಡಿಸಿದ್ದರು, ಅರ್ಜಿದಾರರಾಗಲೀ ಅವರ ಪರ ವಕೀಲರಾಗಲೀ ನ್ಯಾಯಾಲಯಕ್ಕೆ ಹಾಜರಾಗಿರುವುದಿಲ್ಲ. ಇದರಿಂದ ಆರ್.ಸಿ. ಮಾಲೀಕರಿಗೆ ತಮ್ಮ ಅಹವಾಲನ್ನು ಮಂಡಿಸಲು ಈ ನ್ಯಾಯಾಲಯ ಬಹಳಷ್ಟು ಕಾಲಾವಕಾಶ ನೀಡಿದೆ ಎಂಬುದು ನನ್ನ ಉತ್ತರವಾಗಿದೆ.

ಅಂಶ-3:

ದಿ:01-09-2006 ರಂದು ಹಿರೋಹೊಂಡಾ ಬೈಕ್ ಕೆಎ-15-ಜೆ-7174ರಲ್ಲಿ ಶ್ರೀಗಂಧದ ತುಂಡು 15 ಕೆ.ಜಿ.ಯನ್ನು ಅಕ್ರಮವಾಗಿ ಸಾಗಿಸುತ್ತಿರುವಾಗ ಪೊಲೀಸ್ ಸಬ್‌ಇನ್ಸ್‌ಪೆಕ್ಟರ್, ಸೊರಬ ಪೊಲೀಸ್ ಠಾಣೆ ಇವರು ಪತ್ತೆಹಚ್ಚಿ ಪ್ರಥಮ ವರ್ತಮಾನ ವರದಿ, ಮಹಜರ್ ವರದಿಯನ್ನು ಸಾಕ್ಷಿಗಳ ಸಹಿಯೊಂದಿಗೆ ಈ ನ್ಯಾಯಾಲಯಕ್ಕೆ ಹಾಜರ್ಪಡಿಸಿರುತ್ತಾರೆ. ಪ್ರಾಸಿಕ್ಯೂಷನ್ ಸಾಕ್ಷಿ ಹೇಳಿಕೆಗೂ ಮತ್ತು ಈ ನ್ಯಾಯಾಲಯಕ್ಕೆ ಹಾಜರ್ಪಡಿಸಿದ ದಾಖಲೆಗಳಿಗೂ ಒಂದಕ್ಕೊಂದು ತಾಳೆಯಾಗಿರುತ್ತದೆ. ಆರ್.ಸಿ. ಮಾಲೀಕರು ದಿ:13-10-2009 ರಂದು ಸಲ್ಲಿಸಿದ ಅರ್ಜಿಯಲ್ಲಿ ತಿಳಿಸಿದಂತೆ, ಅರ್ಜಿದಾರರು ಮುಗ್ದರೆನ್ನುವುದಕ್ಕಾಗಲೀ, ವಾಹನ ಮಾಲೀಕರ ಗಮನಕ್ಕೆ ಬಾರದೇ ಈ ಕೃತ್ಯ ನಡೆದಿದೆನ್ನುವುದಕ್ಕಾಗಲೀ, ಅಲ್ಲದೇ ಈ ಪ್ರಕರಣದಲ್ಲಿ ಅರ್ಜಿದಾರರು ಭಾಗಿಯಾಗಿಲ್ಲವೆನ್ನುವುದಕ್ಕಾಗಲೀ, ಈ ಬಗ್ಗೆ ಯಾವುದೇ ಸಾಕ್ಷ್ಯಾಧಾರಗಳನ್ನು ವಿಚಾರಣಾ ಸಮಯದಲ್ಲಿ ಈ ನ್ಯಾಯಾಲಯಕ್ಕೆ ಸಲ್ಲಿಸಿರುವುದಿಲ್ಲ.

ಅಲ್ಲದೇ, ವಾಹನ ಮಾಲೀಕರಾಗಲೀ, ಅವರ ಪರ ಚಾಲಕರಾಗಲೀ ಅಥವಾ ಅವರ ಪ್ರತಿನಿಧಿಗಳಾಗಲೀ ವಾಹನದಲ್ಲಿ ಕಳ್ಳ ಸಾಗಾಣಿಕೆಯಾಗದಂತೆ ಮುನ್ನಚ್ಚರಿಕೆ ಕ್ರಮವಹಿಸಬೇಕಾಗಿರುತ್ತದೆ. ಈ ಬಗ್ಗೆ ಗೌರವಾನ್ವಿತ ಮಾನ್ಯ ಉಚ್ಚ ನ್ಯಾಯಾಲಯ ಕರ್ನಾಟಕವು ಈ ಕೆಳಗಿನಂತೆ ಆದೇಶ ನೀಡಿರುವುದನ್ನು ಉಲ್ಲೇಖಿಸುತ್ತೇ.

The Hon'ble high Court of Karnataka Bangalore in the case of-Ramesh N. Dixit V/S State of Karnataka, 1987 (2) Kar.L.j.Sh.N.278:ILR 1985 Kar.2571 held that *"the owners required to show under sub-section (2) of section 71-B is that he, his agent, if any and the person in charge of the vehicle (In this case the driver) each, had taken all reasonable and necessary precautions against the misusing of the vehicle and that this offence had been committed without the knowledge or connivance any of them. ....It is not merely enough if the*

truck owner says that his truck had been misused without his knowledge or connivance, but in addition he is bound to show that he had taken all reasonable and necessary precautions against such misuse".

ಅಲ್ಲದೇ ಈ ವಾಹನದಲ್ಲಿ ಅರಣ್ಯ ಉತ್ಪನ್ನವನ್ನು ಕಳ್ಳಸಾಗಾಣಿಕೆ ಮಾಡದಂತೆ ಆರ್.ಸಿ. ಮಾಲೀಕರಾಗಲೀ, ಅವರ ಪರ ವಾಹನ ಚಾಲಕರಾಗಲೀ ಮುನ್ನೆಚ್ಚರಿಕೆ ಕ್ರಮ ತೆಗೆದುಕೊಂಡ ಬಗ್ಗೆ ಯಾವುದೇ ಸಾಕ್ಷಧಾರಗಳನ್ನು ವಿಚಾರಣಾ ಸಮಯದಲ್ಲಿ ಈ ನ್ಯಾಯಾಲಯಕ್ಕೆ ಹಾಜರ್ಪಡಿಸಿರುವುದಿಲ್ಲ.

ಅಂಶ-4:

ಈ ಮೇಲಿನ ಅಂಶಗಳನ್ನು ಸೂಕ್ಷ್ಮವಾಗಿ ಗಮನಿಸಿ ಮತ್ತು ಈ ಪ್ರಕರಣದ ವಿದ್ಯಾಮಾನಗಳನ್ನು ಅರಿತು, ವಾದವನ್ನು ಕೇಳಿ ಈ ಕೆಳಕಂಡಂತೆ ಆದೇಶಿಸಲಾಗಿದೆ.

ಆದೇಶ

ಮೇಲ್ಕಂಡ ಪ್ರಸ್ತಾವನೆಯಲ್ಲಿ ವಿವರಿಸಿದ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಮನೋಜ್ ಕುಮಾರ್ ತ್ರಿಪಾಠಿ, ಭಾ.ಅ.ಸೇ., ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಗರ ವಿಭಾಗ, ಸಾಗರ ಆದ ನಾನು ಕರ್ನಾಟಕ ಅರಣ್ಯ ಕಾಯಿದೆ 1963 ಸೆಕ್ಷನ್ 71(ಎ) ರಿಂದ (ಜಿ) ಕಾಯಿದೆ ಪ್ರಕಾರ ಅರಣ್ಯ ಮೊಕದ್ದಮೆಯಲ್ಲಿ ಜಪ್ತು ಮಾಡಿದ ಹಿರೋಹೊಂಡಾ ಬೈಕ್ ಕೆಎ-15-ಜೆ-7174 ಮತ್ತು ಈ ವಾಹನದಲ್ಲಿ ಕರ್ನಾಟಕ ಸರ್ಕಾರದ ಸಂಪತ್ತು ಆದ ಶ್ರೀಗಂಧದ ತುಂಡು 15 ಕೆ.ಜಿ.ಯನ್ನು ಸರ್ಕಾರಕ್ಕೆ ಅಂತಿಮವಾಗಿ ಮುಟ್ಟುಗೋಲು ಹಾಕಿಕೊಂಡಿರುತ್ತೇನೆ. ಮುಟ್ಟುಗೋಲು ಹಾಕಿಕೊಂಡ ವಾಹನ ಮತ್ತು ಅರಣ್ಯ ಉತ್ಪನ್ನವನ್ನು ಸರ್ಕಾರಕ್ಕೆ ಅನುಕೂಲಕರವಾಗಿ ವಿಲೇ ಮಾಡಲು ಆದೇಶಿಸಿದೆ. ಈ ಆದೇಶವನ್ನು ಹೇಳಿ ಬರೆಯಿಸಿ, ಗಣಕಯಂತ್ರದಲ್ಲಿ ಮುದ್ರಿಸಿ, ನಂತರ ಸರಿಪಡಿಸಿ ದಿ:20-08-2011 ರಂದು ನನ್ನ ಸಹಿ ಹಾಗೂ ಮೊಹರಿನೊಂದಿಗೆ ತೆರೆದ ನ್ಯಾಯಾಲಯದಲ್ಲಿ ಆದೇಶಿಸಿದ್ದೇನೆ. ಈ ಆದೇಶ ಹೊರಡಿಸಿದ 30(ಮೂವತ್ತು) ದಿನಗಳ ಒಳಗಾಗಿ ಯಾರು ಮೇಲ್ಮನವಿ ಸಲ್ಲಿಸದೇ ಹೋದಲ್ಲಿ ಇದೇ ಅಂತಿಮ ಆದೇಶವಾಗಿರುತ್ತದೆ.

ಅಧಿಕೃತ ಅಧಿಕಾರಿ ಹಾಗೂ
ಪಿ.ಆರ್. 981 ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಗರ ವಿಭಾಗ, ಸಾಗರ.

ಜಿಲ್ಲಾಧಿಕಾರಿಗಳ ಕಾರ್ಯಾಲಯ ಶಿವಮೊಗ್ಗ ಜಿಲ್ಲೆ ಶಿವಮೊಗ್ಗ

ಅಧಿಸೂಚನೆ

ನಂ. ಚು(4)ಸಿಆರ್ 78/11-12 ದಿನಾಂಕ 28-01-12

PLO-No. 9060

ಕರ್ನಾಟಕ ಪೌರಸಭೆಗಳ ಅಧಿನಿಯಮ 1964ರ ಕಲಂ 20 ಮತ್ತು ಕರ್ನಾಟಕ ಪೌರಸಭೆ (ಸದಸ್ಯರುಗಳ ಚುನಾವಣೆ) ನಿಯಮಗಳು 1977ರ ನಿಯಮ 66ರ ಮೇರೆಗೆ ವಿ. **ಪೊನ್ನುರಾಜ್**, ಜಿಲ್ಲಾಧಿಕಾರಿ, ಶಿವಮೊಗ್ಗ ಜಿಲ್ಲೆ. ಶಿವಮೊಗ್ಗ ಆದ ನಾನು ಸಾಗರ ನಗರಸಭೆಯ ವಾರ್ಡ್ ನಂ. 24ರ ಸದಸ್ಯರ ಮರಣದ ಕಾರಣದಿಂದ ತೆರವಾಗಿರುವ ಸ್ಥಾನಕ್ಕೆ ದಿನಾಂಕ 10-01-2012 ರಂದು ನಡೆದ ಉಪಚುನಾವಣೆ ಸಂಬಂಧದಲ್ಲಿ ಚುನಾಯಿಸಲ್ಪಟ್ಟ ಸದಸ್ಯರ ಹೆಸರನ್ನು ಮತ್ತು ಅವರು ಆಯ್ಕೆಗೊಂಡ ಸ್ಥಾನಗಳನ್ನು ಈ ಕೆಳಗಿನಂತೆ ಪ್ರಕಟಿಸಿರುತ್ತೇನೆ.

ಕ್ರಮ ಸಂಖ್ಯೆ	ವಾರ್ಡಿನ ಸಂಖ್ಯೆ	ಸದಸ್ಯರ ಹೆಸರು ಮತ್ತು ವಿಳಾಸ	ಸ್ಥಾನ
1	2	3	4
ಶ್ರೀಯುತರಾದ			
1	ಸಾಗರ -24	ತಸ್ರೀಫ್ ಬಿನ್ ಇಬ್ರಾಹಿಂ ಜನ್ನತ್‌ನಗರ ಸಾಗರ.	ಸಾಮಾನ್ಯ

ವಿ.ಪೊನ್ನುರಾಜ್,
ಜಿಲ್ಲಾಧಿಕಾರಿ, ಶಿವಮೊಗ್ಗ ಜಿಲ್ಲೆ ಶಿವಮೊಗ್ಗ.

ಜಿಲ್ಲಾಧಿಕಾರಿಗಳ ಕಾರ್ಯಾಲಯ ಶಿವಮೊಗ್ಗ ಜಿಲ್ಲೆ ಶಿವಮೊಗ್ಗ

ಅಧಿಸೂಚನೆ

ನಂ. ಚು(4)ಸಿಆರ್ 86/11-12 (11029) ದಿನಾಂಕ 03-03-12

ಕರ್ನಾಟಕ ಪೌರಸಭೆಗಳ ಅಧಿನಿಯಮ 1964ರ ಕಲಂ 20 ಮತ್ತು ಕರ್ನಾಟಕ ಪೌರಸಭೆ (ಸದಸ್ಯರುಗಳ ಚುನಾವಣೆ) ನಿಯಮಗಳು 1977ರ ನಿಯಮ 66ರ ಮೇರೆಗೆ **ಎಂ.ವಿ. ವೇದಮೂರ್ತಿ**, ಜಿಲ್ಲಾಧಿಕಾರಿ, ಶಿವಮೊಗ್ಗ ಜಿಲ್ಲೆ. ಶಿವಮೊಗ್ಗ ಆದ ನಾನು ಶಿವಮೊಗ್ಗ ನಗರಸಭೆಯ ವಾರ್ಡ್ ನಂ.

19ರ ಸದಸ್ಯರ ಮರಣದ ಕಾರಣದಿಂದಾಗಿ ತೆರವಾಗಿರುವ ಸ್ಥಾನಕ್ಕೆ ದಿನಾಂಕ 26-02-2012 ರಂದು ನಡೆದ ಉಪಚುನಾವಣೆ ಸಂಬಂಧದಲ್ಲಿ ಚುನಾಯಿಸಲ್ಪಟ್ಟ ಸದಸ್ಯರ ಹೆಸರನ್ನು ಮತ್ತು ಅವರು ಆಯ್ಕೆಗೊಂಡ ಸ್ಥಾನವನ್ನು ಈ ಕೆಳಗಿನಂತೆ ಪ್ರಕಟಿಸಿರುತ್ತೇನೆ.

ಕ್ರಮ ಸಂಖ್ಯೆ	ವಾರ್ಡಿನ ಸಂಖ್ಯೆ ಮತ್ತು ಹೆಸರು	ಸದಸ್ಯರ ಹೆಸರು ಮತ್ತು ವಿಳಾಸ	ಸ್ಥಾನ
1	2	3	4
ಶ್ರೀಯುತರಾದ			
1	19- ವೆಂಕಟೇಶ ನಗರ	ನಾಗರಾಜ ವೈ. ಕಂಕಾರಿ ಬಿನ್ ಯಲ್ಲಪ್ಪ 5ನೇ ತಿರುವು, ವೆಂಕಟೇಶನಗರ ಜೈಲ್ ರಸ್ತೆ ಚಾನಲ್ ಬಲಭಾಗ ಶಿವಮೊಗ್ಗ.	ಹಿಂದುಳಿದ ವರ್ಗ ಎ

ಎಂ.ವಿ. ವೇದಮೂರ್ತಿ,
ಜಿಲ್ಲಾಧಿಕಾರಿ, ಶಿವಮೊಗ್ಗ ಜಿಲ್ಲೆ ಶಿವಮೊಗ್ಗ.

ಜಿಲ್ಲಾಧಿಕಾರಿಗಳ ಕಾರ್ಯಾಲಯ ಶಿವಮೊಗ್ಗ ಜಿಲ್ಲೆ ಶಿವಮೊಗ್ಗ

ನಂ.ಚು.(4) ಸಿಆರ್ 85/11-12 ಶಿವಮೊಗ್ಗ ದಿನಾಂಕ :01-03-12.

ಅಧಿಸೂಚನೆ

PLO No-10942

ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ) ಅಧಿನಿಯಮ 1966ರ ಉಪಬಂಧಗಳ ಮತ್ತು ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ) ನಿಯಮಗಳು 1968ರ ನಿಯಮ 7ರ ಮೇರೆಗೆ ಜಿಲ್ಲಾಧಿಕಾರಿಗಳು ಶಿವಮೊಗ್ಗ ರವರ ಚುನಾವಣೆ ನೋಟೀಸು ಕ್ರಮಾಂಕ ಚು. (4)ಸಿಆರ್ 01/10-11 ದಿನಾಂಕ 05-04-2011ರಂತೆ ನಿಗದಿಪಡಿಸಿದ ಚುನಾವಣಾ ವೇಳಾಪಟ್ಟಿ ಪ್ರಕಾರ ಹಾಗೂ ಕೃಷಿ ಮಾರಾಟ ನಿರ್ದೇಶಕರು ಕೃಷಿ ಇಲಾಖೆ ಬೆಂಗಳೂರು ರವರ ಪತ್ರ ನಂ. ಕೃಮಾಇ/103 ಚುನಾವಣೆ/2011 ದಿನಾಂಕ 05-02-2011 ರ ಪ್ರಕಾರ ಶಿವಮೊಗ್ಗ ಜಿಲ್ಲೆಯ **ಶಿಕಾರಿಪುರ** ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ವಿವಿಧ ಕ್ಷೇತ್ರಗಳಿಂದ ಸದರಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಸ್ಥಾನಗಳಿಗೆ ಚುನಾವಣೆಯನ್ನು ನಡೆಸಲಾಗಿದೆ. ದಿನಾಂಕ 27-04-2011ರಂದು ಮತ ಎಣಿಕೆಯ ಸಂದರ್ಭದಲ್ಲಿ ಬೇರೆ ಕೃಷಿಕರ ಕ್ಷೇತ್ರದ ಮತಪತ್ರಗಳು 3-ಸುಣ್ಣದಕೊಪ್ಪ ಕ್ಷೇತ್ರಕ್ಕೆ ಸೇರ್ಪಡೆಯಾಗಿರುವುದರಿಂದ ಶ್ರೀ ಮಂಜುನಾಥ್ ಎಂ.ಬಿ. ಎಂಬುವವರು ಕರ್ನಾಟಕ ಉಚ್ಛ ನ್ಯಾಯಾಲಯಕ್ಕೆ ದಾವೆಯನ್ನು ದಾಖಲಿಸಿರುತ್ತಾರೆ. ಮಾನ್ಯ ಕರ್ನಾಟಕ ಉಚ್ಛ ನ್ಯಾಯಾಲಯವು ತನ್ನ ಆದೇಶ ನಂ. WP No. 17098/2011 ದಿನಾಂಕ 15/10/11ರಂತೆ ಮತಗಳ ಎಣಿಕೆಯು ಯಾವ ಹಂತದಲ್ಲಿ ಸ್ಥಗಿತಗೊಂಡಿರುತ್ತದೆಯೋ ಅಲ್ಲಿಂದ ಮುಂದೆ ಮತಗಳ ಎಣಿಕೆಗೆ ಆದೇಶವನ್ನು ನೀಡಿದೆ. ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ) ನಿಯಮಗಳು 1968ರ ನಿಯಮ 37ರ ಪ್ರಕಾರ ಸದರಿ ಚುನಾವಣೆಯ ಫಲಿತಾಂಶವನ್ನು ಸಂಬಂಧಿಸಿದ ರಿಟರ್ನಿಂಗ್ ಅಧಿಕಾರಿಗಳು ಘೋಷಿಸಿರುತ್ತಾರೆ.

ಆದ್ದರಿಂದ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ) ಅಧಿನಿಯಮ 1966 ಕಲಂ 27ರ ಮೇರೆಗೆ **ಎಂ.ವಿ. ವೇದಮೂರ್ತಿ**, ಜಿಲ್ಲಾಧಿಕಾರಿ, ಶಿವಮೊಗ್ಗ ಜಿಲ್ಲೆ ಶಿವಮೊಗ್ಗ ಆದ ನಾನು **ಶಿಕಾರಿಪುರ** ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ 3- ಸುಣ್ಣದಕೊಪ್ಪ ಕೃಷಿಕರ ಕ್ಷೇತ್ರದ ಸ್ಥಾನಕ್ಕೆ ಆಯ್ಕೆಯಾದ ಸದಸ್ಯರ ಹೆಸರನ್ನು ಮತ್ತು ಅವರು ಆಯ್ಕೆಗೊಂಡ ಸ್ಥಾನವನ್ನು ಈ ಕೆಳಗಿನಂತೆ ಪ್ರಕಟಿಸಿರುತ್ತೇನೆ.

ಕ್ರಮ ಸಂಖ್ಯೆ	ಚುನಾವಣಾ ಕ್ಷೇತ್ರದ ಸಂಖ್ಯೆ ಮತ್ತು ಹೆಸರು	ಸದಸ್ಯರ ಹೆಸರು ಮತ್ತು ವಿಳಾಸ	ಸ್ಥಾನ
1	3-ಸುಣ್ಣದಕೊಪ್ಪ	ಎಂ.ಬಿ.ಮಂಜುನಾಥ್ ಬಿನ್ ಬೂದ್ಯಪ್ಪಗೌಡ ಕೋಡಿಕೊಪ್ಪ ಗ್ರಾಮ ಶಿಕಾರಿಪುರ ತಾಲ್ಲೂಕು, ಶಿವಮೊಗ್ಗ ಜಿಲ್ಲೆ.	ಸಾಮಾನ್ಯ

ಎಂ.ವಿ.ವೇದಮೂರ್ತಿ,
ಜಿಲ್ಲಾಧಿಕಾರಿ, ಶಿವಮೊಗ್ಗ ಜಿಲ್ಲೆ ಶಿವಮೊಗ್ಗ

ಪಿ.ಆರ್. 317

ಸಹಕಾರ ಸಂಘಗಳ ಜಂಟಿ ನಿಬಂಧಕರ ನ್ಯಾಯಾಲಯ, ಬೆಂಗಳೂರು ಪ್ರಾಂತ, ಚಾಮರಾಜಪೇಟೆ, ಬೆಂಗಳೂರು-18.

ದಾವಾ ಸಂಖ್ಯೆ: ಜೆಆರ್‌ಬಿ/ಡಿಐಎಸ್/498/1996-97

ಆದೇಶ ದಿನಾಂಕ: 30 ನೇ ಜನವರಿ 2012

ವಾದಿ: ವಿರುದ್ಧ ಪ್ರತಿವಾದಿ:

ವ್ಯವಸ್ಥಾಪಕ ನಿರ್ದೇಶಕರು,
ಬಿಡಿ ಅಂಡ್ ಬಿಆರ್‌ಆರ್‌ಡಿಸಿಸಿ ಬ್ಯಾಂಕ್ ನಿ.,
ಚಾಮರಾಜಪೇಟೆ, ಬೆಂಗಳೂರು- 560 018.

1. ಕಾರ್ಯದರ್ಶಿ,
ನವಕರ್ನಾಟಕ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ., ನಂ.31/2, 1ನೇ ಮುಖ್ಯ ರಸ್ತೆ, 5ನೇ ಕ್ರಾಸ್, ಮಾರುತಿ ಬಡಾವಣೆ, ಶ್ರೀರಾಮಪುರಂ, ಬೆಂಗಳೂರು- 21.

2. ಶ್ರೀ ಶ್ರೀನಿವಾಸ, ಮೇಜರ್, ಅಧ್ಯಕ್ಷರು,
ನವಕರ್ನಾಟಕ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ., ನಂ.31/2, 1ನೇ ಮುಖ್ಯ ರಸ್ತೆ, 5ನೇ ಕ್ರಾಸ್, ಮಾರುತಿ ಬಡಾವಣೆ, ಶ್ರೀರಾಮಪುರಂ, ಬೆಂಗಳೂರು- 21.

3. ಶ್ರೀ ಜಿ.ಪ್ರಶಾಂತ, ಮೇಜರ್, ಕಾರ್ಯದರ್ಶಿ,
ನವಕರ್ನಾಟಕ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ., ನಂ.31/2, 1ನೇ ಮುಖ್ಯ ರಸ್ತೆ, 5ನೇ ಕ್ರಾಸ್, ಮಾರುತಿ ಬಡಾವಣೆ, ಶ್ರೀರಾಮಪುರಂ, ಬೆಂಗಳೂರು- 21.

4. ಶ್ರೀ ಕೆ.ಮುತ್ತುರಾಜ್, ಮೇಜರ್, ಉಪಾಧ್ಯಕ್ಷರು,
ನವಕರ್ನಾಟಕ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ., ನಂ.31/2, 1ನೇ ಮುಖ್ಯ ರಸ್ತೆ, 5ನೇ ಕ್ರಾಸ್, ಮಾರುತಿ ಬಡಾವಣೆ, ಶ್ರೀರಾಮಪುರಂ, ಬೆಂಗಳೂರು- 21.

5. ಶ್ರೀ ಆರ್.ಕುಮಾರ್, ಮೇಜರ್, ನಿರ್ದೇಶಕರು,
ನವಕರ್ನಾಟಕ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ., ನಂ.31/2, 1ನೇ ಮುಖ್ಯ ರಸ್ತೆ, 5ನೇ ಕ್ರಾಸ್, ಮಾರುತಿ ಬಡಾವಣೆ, ಶ್ರೀರಾಮಪುರಂ, ಬೆಂಗಳೂರು- 21.

6. ಶ್ರೀ ಬಿ.ವಿ.ಪ್ರವೀಣ್ ಕುಮಾರ್, ಮೇಜರ್, ನಿರ್ದೇಶಕರು,
ನವಕರ್ನಾಟಕ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ., ನಂ.31/2, 1ನೇ ಮುಖ್ಯ ರಸ್ತೆ, 5ನೇ ಕ್ರಾಸ್, ಮಾರುತಿ ಬಡಾವಣೆ, ಶ್ರೀರಾಮಪುರಂ, ಬೆಂಗಳೂರು- 21.

7. ಶ್ರೀ ಟಿ.ಎಂ.ನಾಗರಾಜ್, ಮೇಜರ್, ನಿರ್ದೇಶಕರು,
ನವಕರ್ನಾಟಕ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ., ನಂ.31/2, 1ನೇ ಮುಖ್ಯ ರಸ್ತೆ, 5ನೇ ಕ್ರಾಸ್, ಮಾರುತಿ ಬಡಾವಣೆ, ಶ್ರೀರಾಮಪುರಂ, ಬೆಂಗಳೂರು- 21..

8. ಶ್ರೀ ಹೆಚ್.ಆರ್.ಸುರೇಶ್, ಮೇಜರ್, ನಿರ್ದೇಶಕರು,
ನವಕರ್ನಾಟಕ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ., ನಂ.31/2, 1ನೇ ಮುಖ್ಯ ರಸ್ತೆ, 5ನೇ ಕ್ರಾಸ್, ಮಾರುತಿ ಬಡಾವಣೆ, ಶ್ರೀರಾಮಪುರಂ, ಬೆಂಗಳೂರು- 21.

9. ಶ್ರೀ ಪಿ.ಎಸ್.ಹರಿಯಣ್ಣ ಗೌಡ, ಮೇಜರ್, ನಿರ್ದೇಶಕರು,
ನವಕರ್ನಾಟಕ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ., ನಂ.31/2, 1ನೇ ಮುಖ್ಯ ರಸ್ತೆ, 5ನೇ ಕ್ರಾಸ್, ಮಾರುತಿ ಬಡಾವಣೆ, ಶ್ರೀರಾಮಪುರಂ, ಬೆಂಗಳೂರು- 21.

10. ಶ್ರೀ ಪಿ.ಎಸ್.ಪಾಪಣ್ಣ, ಮೇಜರ್, ನಿರ್ದೇಶಕರು,
ನವಕರ್ನಾಟಕ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ., ನಂ.31/2, 1ನೇ ಮುಖ್ಯ ರಸ್ತೆ, 5ನೇ ಕ್ರಾಸ್, ಮಾರುತಿ ಬಡಾವಣೆ, ಶ್ರೀರಾಮಪುರಂ, ಬೆಂಗಳೂರು- 21

11. ಶ್ರೀಮತಿ ಟಿ.ಎಸ್.ಯಶೋಧ, ಮೇಜರ್, ನಿರ್ದೇಶಕರು,
ನವಕರ್ನಾಟಕ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ., ನಂ.31/2, 1ನೇ ಮುಖ್ಯ ರಸ್ತೆ, 5ನೇ ಕ್ರಾಸ್, ಮಾರುತಿ ಬಡಾವಣೆ, ಶ್ರೀರಾಮಪುರಂ, ಬೆಂಗಳೂರು- 21.

12. ಶ್ರೀ ವಿ.ಆನಂದ, ಮೇಜರ್, ನಿರ್ದೇಶಕರು,
ನವಕರ್ನಾಟಕ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ., ನಂ.31/2,
1ನೇ ಮುಖ್ಯ ರಸ್ತೆ, 5ನೇ ಕ್ರಾಸ್, ಮಾರುತಿ ಬಡಾವಣೆ, ಶ್ರೀರಾಮಪುರಂ,
ಬೆಂಗಳೂರು- 21.

13. ಶ್ರೀ ಸೋಮಸುಂದರ, ಮೇಜರ್, ನಿರ್ದೇಶಕರು,
ನವಕರ್ನಾಟಕ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ., ನಂ.31/2,
1ನೇ ಮುಖ್ಯ ರಸ್ತೆ, 5ನೇ ಕ್ರಾಸ್, ಮಾರುತಿ ಬಡಾವಣೆ, ಶ್ರೀರಾಮಪುರಂ,
ಬೆಂಗಳೂರು- 21.

14. ಶ್ರೀ ಹೆಚ್.ಬಿ.ಉಮೇಶ್, (ಮೃತಿ) ಅವರ ವಾರಸುದಾರರು.

14. 1ಎ. ಶ್ರೀಮತಿ ಹೆಚ್.ಎಸ್.ಹರಿಣಿ, ಕೋಂ: ಲೇಟ್: ಹೆಚ್.ಬಿ.ಉಮೇಶ್,

1ಬಿ. ಶ್ರೀ ಕೀರ್ತಿ ಕಂದಾ, ಬಿನ್: ಲೇಟ್: ಹೆಚ್.ಬಿ.ಉಮೇಶ್,

1ಸಿ. ಶ್ರೀ ಚರಣ್, ಬಿನ್: ಲೇಟ್: ಹೆಚ್.ಬಿ.ಉಮೇಶ್,

ವಿಳಾಸ :
ನಂ.112, ಐ.ಸಿ.ಎಸ್.ಸಿ. ಮೇನ್ ರೋಡ್, ನಾಗರಭಾವಿ, ಬೆಂಗಳೂರು-72.

15. ಶ್ರೀ ನಾರಾಯಣ ಗೌಡ, ಮೇಜರ್,
ಬಿನ್ ಪುಟ್ಟೇಗೌಡ, ಮಾಜಿ ಅಧ್ಯಕ್ಷರು ಹಾಗೂ ಈಗಿನ ನಿರ್ದೇಶಕರು,
ಬಿಡಿ ಅಂಡ್ ಬಿಆರ್‌ಆರ್‌ಡಿಸಿಸಿ ಬ್ಯಾಂಕ್ ನಿ., ಕೆರೆಲಾಲುಸಂದ್ರ,
ಮಳಗಳು ಪೋಸ್ಟ್, ಕಸಬಾ ಹೋಬಳಿ, ಕನಕಪುರ ತಾಲ್ಲೂಕು,
ಬೆಂಗಳೂರು (ಗ್ರಾ) ಜಿಲ್ಲೆ.

16. ಶ್ರೀ ಎಸ್.ಜಿ.ಚೆಲುವಯ್ಯ, ಮೇಜರ್, ಮಾಜಿ ಉಪಾಧ್ಯಕ್ಷರು,
ಬಿಡಿ ಅಂಡ್ ಬಿಆರ್‌ಆರ್‌ಡಿಸಿಸಿ ಬ್ಯಾಂಕ್ ನಿ., ಸೊಂಡೆಕೊಪ್ಪ,
ಸೊಂಡೆಕೊಪ್ಪ ಪೋಸ್ಟ್, ನೆಲಮಂಗಲ ತಾ: ಬೆಂಗಳೂರು (ಗ್ರಾ) ಜಿಲ್ಲೆ.

17. ಶ್ರೀ ವಿ. ಚನ್ನಪ್ಪ, ಮೇಜರ್, ಮಾಜಿ ನಿರ್ದೇಶಕರು,
ಬಿಡಿ ಅಂಡ್ ಬಿಆರ್‌ಆರ್‌ಡಿಸಿಸಿ ಬ್ಯಾಂಕ್ ನಿ., ನೆರಳಘಟ್ಟ, ಅಣಬೆ ಪೋಸ್ಟ್,
ದೊಡ್ಡಬಳ್ಳಾಪುರ ತಾ: ಬೆಂಗಳೂರು (ಗ್ರಾ) ಜಿಲ್ಲೆ.

18. ಶ್ರೀ ಎ ನರಸಿಂಹಯ್ಯ, ಮೇಜರ್, ಮಾಜಿ ನಿರ್ದೇಶಕರು,
ಬಿಡಿ ಅಂಡ್ ಬಿಆರ್‌ಆರ್‌ಡಿಸಿಸಿ ಬ್ಯಾಂಕ್ ನಿ., ಗಂಟಿಗಾನಹಳ್ಳಿ ಪೋಸ್ಟ್,
ಕುರುವೇಗೆರೆ, ದೊಡ್ಡಬಳ್ಳಾಪುರ ತಾ: ಬೆಂಗಳೂರು (ಗ್ರಾ) ಜಿಲ್ಲೆ.

19. ಶ್ರೀ ಎನ್.ಎಸ್. ನರಸೇಗೌಡ, ಮೇಜರ್, ಮಾಜಿ ನಿರ್ದೇಶಕರು,
ಬಿಡಿ ಅಂಡ್ ಬಿಆರ್‌ಆರ್‌ಡಿಸಿಸಿ ಬ್ಯಾಂಕ್ ನಿ., ನಂ.692, 'ಎ' 8ನೇ ಮೇನ್,
3ನೇ ಸ್ಟೇಜ್, 3ನೇ ಬ್ಲಾಕ್, ಬಸವೇಶ್ವರನಗರ, ಬೆಂಗಳೂರು-79.

20. ಶ್ರೀ ಬಿ.ರಾಮಿ ರೆಡ್ಡಿ, ಮೇಜರ್, ಮಾಜಿ ವ್ಯವಸ್ಥಾಪಕ ನಿರ್ದೇಶಕರು,
ಬಿಡಿ ಅಂಡ್ ಬಿಆರ್‌ಆರ್‌ಡಿಸಿಸಿ ಬ್ಯಾಂಕ್ ನಿ., ನಂ.124, 'ಎ' ಪ್ಲೋರ್,
26ನೇ ಕ್ರಾಸ್, 6ನೇ ಬ್ಲಾಕ್, ಜಯನಗರ, ಬೆಂಗಳೂರು-20.

21. ಶ್ರೀ ಕೆ.ಟಿ.ವೆಂಕಟಸ್ವಾಮಿ, ಮೇಜರ್, ಮಾಜಿ ಶಾಖಾ ವ್ಯವಸ್ಥಾಪಕರು (ನಿವೃತ್ತ)
ಕೇಂದ್ರ ಕಛೇರಿ ಶಾಖೆ, ಬಿಡಿ ಅಂಡ್ ಬಿಆರ್‌ಆರ್‌ಡಿಸಿಸಿ ಬ್ಯಾಂಕ್ ನಿ.,
ನಂ.1013 ಇ, ಮೂಕಾಂಬಿಕ ಎ.ಆರ್. ಅವೆನ್ಯೂ, ನ್ಯೂ ತಿಪ್ಪಸಂದ್ರ,
ಬೆಂಗಳೂರು-75.

22. ಶ್ರೀ ಎಂ.ಹೊನ್ನಲಿಂಗೇಗೌಡ, ಮೇಜರ್, ಮಾಜಿ ಶಾಖಾ ವ್ಯವಸ್ಥಾಪಕರು
ಬಿಡಿ ಅಂಡ್ ಬಿಆರ್‌ಆರ್‌ಡಿಸಿಸಿ ಬ್ಯಾಂಕ್ ನಿ., ಯಶವಂತಪುರ ಶಾಖೆ,
ನಂ. 464, 10ನೇ ಇ ಮೇನ್ ರೋಡ್, 6ನೇ ಬ್ಲಾಕ್, ರಾಜಾಜಿನಗರ,
ಬೆಂಗಳೂರು-10.

23. ಶ್ರೀ ರಾಮಾಂಜನಪ್ಪ, ಮೇಜರ್, ಶಾಖಾ ಸೂಪರ್‌ವೈಸರ್,
(ಅಂಡರ್ ಸಸ್‌ಪೆನ್‌ಷನ್) ಬಿಡಿ ಅಂಡ್ ಬಿಆರ್‌ಆರ್‌ಡಿಸಿಸಿ ಬ್ಯಾಂಕ್ ನಿ.,
ಯಶವಂತಪುರ ಶಾಖೆ, ನಂ. 464, 10ನೇ ಇ ಮೇನ್ ರೋಡ್,
6ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-10.

24. ಶ್ರೀ ರಾಮಕೃಷ್ಣ, ಮೇಜರ್, ಶಾಖಾ ವ್ಯವಸ್ಥಾಪಕರು, (ಅಂಡರ್ ಸಸ್‌ಪೆನ್‌ಷನ್) ಬಿಡಿ ಅಂಡ್ ಬಿಆರ್‌ಆರ್‌ಡಿಸಿಸಿ ಬ್ಯಾಂಕ್ ನಿ., (ಪ್ಲಾನಿಂಗ್ & ಡೆವಲಪ್‌ಮೆಂಟ್ ಶಾಖೆ) ನಂ.221, 5ನೇ ಕ್ರಾಸ್, 1ನೇ ಮೇನ್, 1ನೇ ಹಂತ, ಕೆ.ಹೆಚ್.ಬಿ. ಕಾಲೋನಿ, ಬಸವೇಶ್ವರನಗರ, ಬೆಂಗಳೂರು-79.

25. ಶ್ರೀ ರಂಗರಾಜು, ಜೂನಿಯರ್ ಅಸಿಸ್ಟೆಂಟ್, ಬಿಡಿ ಅಂಡ್ ಬಿಆರ್‌ಆರ್‌ಡಿಸಿಸಿ ಬ್ಯಾಂಕ್ ನಿ., ಯಶವಂತಪುರ ಶಾಖೆ ನಂ.466, 8ನೇ ಕ್ರಾಸ್, ಮಹಾಲಕ್ಷ್ಮೀ ಲೇಔಟ್, ಬೆಂಗಳೂರು-86.

26. ಶ್ರೀ ಎ.ಸಿ.ಲಕ್ಷ್ಮೀಕಾಂತ, ಕ್ಯಾಶಿಯರ್, ಬಿಡಿ ಅಂಡ್ ಬಿಆರ್‌ಆರ್‌ಡಿಸಿಸಿ ಬ್ಯಾಂಕ್ ನಿ., ಯಶವಂತಪುರ ಶಾಖೆ ನಂ.96, ಕಿರಣ್ ನಿಲಯ, 3ನೇ ಮೇನ್ ರೋಡ್, ಸರಸ್ವತಿ ಪುರ, ನಂದಿನಿ ಲೇಔಟ್, ಬೆಂಗಳೂರು-96.

27. ಶ್ರೀ ಹೆಚ್.ಎಲ್.ಶಿವಕುಮಾರ್, ಬಿನ್ ಲಕ್ಷ್ಮಣಗೌಡ, ಜೂನಿಯರ್ ಅಸಿಸ್ಟೆಂಟ್, ಬಿಡಿ ಅಂಡ್ ಬಿಆರ್‌ಆರ್‌ಡಿಸಿಸಿ ಬ್ಯಾಂಕ್ ನಿ., ಕೇಂದ್ರ ಕಛೇರಿ, ನಂ.32, 3ನೇ ಕ್ರಾಸ್, ವಿಠಲ್‌ನಗರ, ಚಾಮರಾಜಪೇಟೆ, ಬೆಂಗಳೂರು-18.

28. ಶ್ರೀ ಬಿ.ಎಸ್. ಅನಂತಮೂರ್ತಿ, ಪ್ರೋ : ಶ್ರೀಲಕ್ಷ್ಮೀ ಸಿಲ್ಕ್ ವೀವಿಂಗ್ ಫ್ಯಾಕ್ಟರಿ, ಶ್ರೀರಾಮಪುರಂ, ಬೆಂಗಳೂರು.

29. ಶ್ರೀ ಬಿ.ಎಸ್.ವೆಂಕಟೇಶ್, ನಂ.45/1, 11ನೇ ಕ್ರಾಸ್, 7ನೇ ಮೇನ್, ಶ್ರೀರಾಮಪುರಂ, ಬೆಂಗಳೂರು.

30. ಶ್ರೀ ಎಸ್.ಜಿ.ಗುಪ್ತಾ, ಕೇ : ನವಕರ್ನಾಟಕ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ., ನಂ.31/2, 1ನೇ ಮುಖ್ಯ ರಸ್ತೆ, 5ನೇ ಕ್ರಾಸ್, ಮಾರುತಿ ಬಡಾವಣೆ, ಶ್ರೀರಾಮಪುರಂ, ಬೆಂಗಳೂರು- 21.

"1959ರ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆಯ ಕಲಂ 103 ರ ರೀತ್ಯಾ ಸ್ಥಿರಾಸ್ತಿಯನ್ನು ಆದೇಶಕ್ಕೆ ಮುನ್ನ ಜಪ್ತಿ ಮಾಡುವ ಸಲುವಾಗಿ ತಿಳುವಳಿಕೆ ನೋಟೀಸು"

1. ವಾದಿಯು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ರ ಕಲಂ 70 ರಡಿ ದಾವಾ ಅರ್ಜಿಯನ್ನು ಸಲ್ಲಿಸಿ 1 ರಿಂದ 30ನೇ ಪ್ರತಿವಾದಿಗಳಿಂದ ರೂ.4,36,78,537/- (ರೂ.ನಾಲ್ಕು ಕೋಟಿ ಮೂವತ್ತಾರು ಲಕ್ಷದ ಎಪ್ಪತ್ತೆಂಟು ಸಾವಿರ ಐದು ನೂರ ಮೂವತ್ತೇಳು ಮಾತ್ರ) ಗಳು ಹಾಗೂ ಈ ಮೊತ್ತಕ್ಕೆ ದಿನಾಂಕ:24-05-1996 ರಿಂದ ಸಾಲಿಯಾನ ಶೇ.22% ರಷ್ಟು ಬಡ್ಡಿ ದರದಂತೆ ಅಸಲು ಮತ್ತು ಬಡ್ಡಿ ವಸೂಲಾತಿಗಾಗಿ ದಾವೆಯನ್ನು ಹೂಡಿರುತ್ತಾರೆ. ಈ ದಾವೆಯನ್ನು ವಿಚಾರಣೆಗೆ ತೆಗೆದುಕೊಂಡು, ವಿಚಾರಣೆ ನಡೆಸಲಾಗುತ್ತಿದೆ. ಪ್ರಕರಣದ ವಿಚಾರಣಾ ಹಂತದಲ್ಲಿ ವಾದಿಯು ದಿನಾಂಕ:30-01-2012 ರಂದು ಪ್ರಮಾಣ ಪತ್ರದೊಂದಿಗೆ ಕಲಂ 103 ರಡಿ ಅರ್ಜಿಯನ್ನು ಸಲ್ಲಿಸಿ 18ನೇ ಪ್ರತಿವಾದಿಯ ಹೆಸರಿನಲ್ಲಿರುವ ಸ್ಥಿರಾಸ್ತಿಯನ್ನು ಆದೇಶ ಪೂರ್ವ ಜಪ್ತಿ ಆದೇಶ ಹೊರಡಿಸಬೇಕೆಂದು ಕೋರಿರುತ್ತಾರೆ.

2. ಅರ್ಜಿದಾರರು ಕಲಂ 103 ರ ಅರ್ಜಿ ಜೊತೆ ಸಲ್ಲಿಸಲಾಗಿರುವ ಪ್ರಮಾಣ ಪತ್ರದಲ್ಲಿ 1ನೇ ಪ್ರತಿವಾದಿ ಸಂಘದ ಆಡಳಿತ ಮಂಡಳಿಯನ್ನು ಸಹಕಾರ ಇಲಾಖೆಯು 1994ನೇ ಸಾಲಿನಲ್ಲಿ ರದ್ದು ಮಾಡಿರುತ್ತದೆ. ಈ ಆದೇಶವನ್ನು 1ನೇ ಪ್ರತಿವಾದಿ ಸಂಘವು ಗೌರವ ಉಚ್ಚ ನ್ಯಾಯಾಲಯದಲ್ಲಿ ಪ್ರಶ್ನಿಸಿದ್ದು, ರಿಟ್ ಅಪೀಲು ಸಂ.2218 ಮತ್ತು 2219 C/W/1991 ಹಾಗೂ 1992/1994 ಈ ರಿಟ್ ಅಪೀಲಿನನ್ವಯ ಗೌರವ ನ್ಯಾಯಾಲಯವು ಪ್ರತಿವಾದಿ 15 ರಿಂದ 19 ರವರುಗಳನ್ನು Government Nominées as Ad-Hoc Committee members to from bank administration till holding of new elelction on 02-12-1994 ಅದರನ್ವಯ ಸದರಿ ಅಡಾಕ್ ಕಮಿಟಿಯು ದಿನಾಂಕ: 13-05-1994 ರವರೆಗೆ ಕಾರ್ಯನಿರ್ವಹಿಸಿರುತ್ತದೆ. ಈ ಅವಧಿಯಲ್ಲಿ 18ನೇ ಪ್ರತಿವಾದಿಯು ನಿರ್ದೇಶಕರಾಗಿ ಕಾರ್ಯನಿರ್ವಹಿಸಿ ಈ ಅವಧಿಯಲ್ಲಿ ಸಾಲಗಳನ್ನು ಮಂಜೂರು ಮಾಡಿರುತ್ತಾರೆ. ಆದರೆ ಅಡಾಕ್ ಕಮಿಟಿಯು ವಾದಿ ಸಂಘದಲ್ಲಿ ರೂ.4,00,00,000/-ಕ್ಕೆ ದಿನಾಂಕ:15-04-1995 ರಂದು ಅರ್ಜಿ ಸಲ್ಲಿಸಿ ಸಾಲವನ್ನು ಪಡೆದಿರುತ್ತಾರೆ. ಆದರೆ ಈ ಸಾಲ ಮಂಜೂರಾತಿಯಲ್ಲಿ ಅಡಾಕ್ ಕಮಿಟಿಯು ಗೌರವ ಉಚ್ಚ ನ್ಯಾಯಾಲಯದ ಆದೇಶ ಸಂಘದ ಬೈಲಾ ಮತ್ತು ಸಾಲಗಳ ನಿಯಮ ಮತ್ತು ನಿಬಂಧನೆಗಳ ಉಲ್ಲಂಘನೆ ಮಾಡಿ, ಅರ್ಜಿದಾರ ಬ್ಯಾಂಕಿಗೆ ಸುಳ್ಳು ಮಾಹಿತಿ ನೀಡಿ ಮೋಸ ಮಾಡಿರುತ್ತಾರೆ. ಆದರೆ ಪ್ರಸ್ತುತ 1ನೇ ಪ್ರತಿವಾದಿ ಸಂಘವು ತನ್ನ ಕಾರ್ಯಚಟುವಟಿಕೆ ನಡೆಸದೇ ಇರುವಂತಹ ಸ್ಥಿತಿಯನ್ನು ತಲುಪಿರುತ್ತದೆ. ಮುಂದೆಯು ಸಹ ಕಾರ್ಯಚಟುವಟಿಕೆಗಳನ್ನು ನಡೆಸುವ ಸಾಧ್ಯತೆ ಇಲ್ಲವೆಂದು ಮನಗಂಡು ಕಲಂ 70 ರಡಿಯಲ್ಲಿ ದಾವೆಯನ್ನು ಹೂಡಲಾಗಿದೆ. ಈ ಎಲ್ಲಾ ಅವ್ಯವಹಾರಕ್ಕೆ ಅಡಾಕ್ ಕಮಿಟಿಯ ಸದಸ್ಯರು ಮತ್ತು ಬ್ಯಾಂಕಿನ ನೌಕರರು ಒಳಗೂಡಿ ವೈಯಕ್ತಿಕವಾಗಿ ಮತ್ತು ಜಂಟಿಯಾಗಿ ಅವ್ಯವಹಾರ ನಡೆಸಿ ಅರ್ಜಿದಾರ ಬ್ಯಾಂಕಿನ ಸಾಲದ ಮೊತ್ತವನ್ನು ಉಪಯೋಗಿಸಿಕೊಂಡು ನಂತರ ಬ್ಯಾಂಕಿಗೆ ನಷ್ಟ ಉಂಟಾಗಲು ಕಾರಣ ಕರ್ತರಾಗಿರುತ್ತಾರೆ. ಈ ಹಿನ್ನಲೆಯಲ್ಲಿ ದಾವೆಗಳನ್ನು ಹೂಡಲಾಗಿದೆ. ಆದರೆ ಈ ದಾವೆ ಇತ್ಯರ್ಥವಾಗುವಲ್ಲಿ ಕಾನೂನು ರೀತ್ಯಾ ನಡವಳಿಕೆಗಳು ನಡೆಸಿ

ಇತ್ಯರ್ಥಪಡಿಸುವಲ್ಲಿ ಸಮಯಾವಕಾಶ ತೆಗೆದುಕೊಳ್ಳುತ್ತಿದ್ದು, ಈ ಮಧ್ಯ ಪ್ರತಿವಾದಿಗಳು ತಮ್ಮ ಹೆಸರಿನಲ್ಲಿರುವ ಸ್ಥಿರಾಸ್ತಿಗಳನ್ನು ಮಾರಾಟ ಮಾಡುವ ಸಾಧ್ಯತೆಗಳಿರುತ್ತವೆ. ಒಂದು ವೇಳೆ ಈ ರೀತಿ ಪ್ರತಿವಾದಿಗಳು ತಮ್ಮ ಹೆಸರಿನಲ್ಲಿರುವ ಸ್ಥಿರಾಸ್ತಿಗಳನ್ನು ಮಾರಾಟ ಮಾಡಿದ ಪಕ್ಷದಲ್ಲಿ ಈ ದಾವೆಯ ಅಂತಿಮ ಆದೇಶ ಅರ್ಜಿದಾರ ಬ್ಯಾಂಕಿನ ಪರವಾಗಿ ಬಂದರೂ ಸಹ ಅವಾರ್ಡ್ ಮೊತ್ತವನ್ನು ವಸೂಲಿ ಮಾಡಿಕೊಳ್ಳಲು ಸಾಧ್ಯವಾಗದ ಪರಿಸ್ಥಿತಿ ಉಂಟಾಗುವ ಸಾಧ್ಯತೆ ಇರುವುದರಿಂದ ಕಲಂ 103 ರಡಿಯಲ್ಲಿ ಸಲ್ಲಿಸಲಾಗಿರುವ ಅರ್ಜಿ ಆಧಾರಿತ 18ನೇ ಪ್ರತಿವಾದಿಗೆ ಸೇರಿದ ಸ್ಥಿರಾಸ್ತಿಗಳನ್ನು ಆದೇಶಕ್ಕೆ ಪೂರ್ವ ಜಪ್ತಿ ಆದೇಶ ಹೊರಡಿಸಬೇಕೆಂದು ಕೋರಿರುತ್ತಾರೆ.

3. ವಾದಿಯು ಕಲಂ 103 ರಡಿಯಲ್ಲಿ ಸಲ್ಲಿಸಿರುವ ಅರ್ಜಿಯಲ್ಲಿ ತಿಳಿಸಿರುವ ಸ್ಥಿರಾಸ್ತಿಗಳ ದಾಖಲಾತಿಗಳನ್ನು ಪರಿಶೀಲಿಸಲಾಗಿ ಈ ಸ್ಥಿರಾಸ್ತಿಯು 18ನೇ ಪ್ರತಿವಾದಿಯ ಹೆಸರಿಗೆ ಇರುವುದು ಕಂಡು ಬಂದಿರುತ್ತದೆ. ಈ ಸಂಬಂಧವಾಗಿ ವಾದಿಯು ಸಲ್ಲಿಸಲಾಗಿರುವ ಪ್ರಮಾಣ ಪತ್ರದಲ್ಲಿ ತಿಳಿಸಲಾಗಿರುವ ಅಂಶಗಳನ್ನು ಪರಿಶೀಲಿಸಲಾಗಿ 18ನೇ ಪ್ರತಿವಾದಿಯ ಹೆಸರಿಗೆ ಸೇರಿದ ಸ್ಥಿರಾಸ್ತಿಯನ್ನು ಕಲಂ 103 ರಡಿ ಜಪ್ತಿ ಮಾಡುವುದು ಅವಶ್ಯಕ ಮತ್ತು ಸೂಕ್ತವೆಂದು ಅಭಿಪ್ರಾಯ ಪಡುತ್ತಾ, ಈ ಕೆಳಕಂಡ ಆದೇಶ ಹೊರಡಿಸಲಾಗಿದೆ.

"ಆದೇಶ"

ಮೇಲೆ ತಿಳಿಸಿರುವ ಅಂಶಗಳ ಹಿನ್ನಲೆಯಲ್ಲಿ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ಕಲಂ 70 ಮತ್ತು ಕಲಂ 103 ಹಾಗೂ ಸರ್ಕಾರದ ಅಧಿಸೂಚನೆ ಸಂ.ಸಿಓ/139/ಸಿಎಂಎಲ್/2010 ದಿನಾಂಕ:17-02-2011 ರನ್ವಯ ನನಗೆ ದತ್ತವಾದ ಅಧಿಕಾರವನ್ನು ಚಲಾಯಿಸುತ್ತಾ ಸಿ.ಎಸ್.ವಿರೇಶ್, ಸಹಕಾರ ಸಂಘಗಳ ಜಂಟಿ ನಿಬಂಧಕರು, ಬೆಂಗಳೂರು ಪ್ರಾಂತ, ಬೆಂಗಳೂರು ಆದ ನಾನು 18ನೇ ಪ್ರತಿವಾದಿಯ ಹೆಸರಿನಲ್ಲಿರುವ ಈ ಕೆಳಗಿನ ಷೆಡ್ಯೂಲ್‌ನಲ್ಲಿ ಕಾಣಿಸಿರುವ ಸ್ಥಿರಾಸ್ತಿಯನ್ನು ಷರತ್ತಿಗೊಳಪಟ್ಟು ಈ ಪ್ರಕರಣದ ಅಂತಿಮ ತೀರ್ಪಿಗೆ ಪೂರ್ವ ಜಪ್ತಿ ಆದೇಶ ಹೊರಡಿಸಿರುತ್ತೇನೆ.

18ನೇ ಪ್ರತಿವಾದಿಗಳು ಒಂದು ವೇಳೆ ಈ ಜಪ್ತಿ ಪೂರ್ವ ಆದೇಶದಲ್ಲಿ ತಿಳಿಸಿರುವ ಯಾವುದೇ ಸ್ಥಿರಾಸ್ತಿಯನ್ನು/ ಸ್ಥಿರಾಸ್ತಿಯ ಭಾಗವನ್ನು ಈ ಆದೇಶದಿಂದ ಮುಕ್ತ ಮಾಡಿಸಿಕೊಳ್ಳಲು ಇಚ್ಚಿಸಿದಲ್ಲಿ ಈ ದಾವಾ ಅರ್ಜಿಯಲ್ಲಿ ವಾದಿಯು ಕ್ಲೈಂ ಮಾಡಿರುವ ಮೊತ್ತ ರೂ.4,36,78,537/- (ರೂ.ನಾಲ್ಕು ಕೋಟಿ ಮೂವತ್ತಾರು ಲಕ್ಷದ ಎಪ್ಪತ್ತೆಂಟು ಸಾವಿರ ಐದು ನೂರ ಮೂವತ್ತೇಳು ಮಾತ್ರ) ಗಳನ್ನು ವಾದಿ ಬ್ಯಾಂಕಿನಲ್ಲಿ ಅಮಾನತ್ತು ಖಾತೆಗೆ ಈ ಆದೇಶ ಹೊರಡಿಸಿದ 30 ದಿವಸದೊಳಗಾಗಿ ಜಮಾ ಮಾಡಿ ಅಧಿಕೃತ ಚಲನ್/ರಸೀದಿಯನ್ನು ಹಾಜರುಪಡಿಸಿದಲ್ಲಿ ಈ ಆದೇಶದಲ್ಲಿ ತಿಳಿಸಿರುವ ಷೆಡ್ಯೂಲ್ ಸ್ವತ್ತನ್ನು ಮುಕ್ತಗೊಳಿಸುವ ಷರತ್ತಿಗೆ ಒಳಪಟ್ಟಿರುತ್ತದೆ.

ಒಂದು ವೇಳೆ 18ನೇ ಪ್ರತಿವಾದಿಯು ಮೇಲೆ ತಿಳಿಸಿರುವಂತೆ ಈ ಆದೇಶ ಹೊರಡಿಸಿದ 30 ದಿವಸಗಳೊಳಗಾಗಿ ಅವಶ್ಯಕವಿರುವ ನಗದು ಭದ್ರತೆಯನ್ನು ನೀಡಲು ವಿಫಲರಾದಲ್ಲಿ ಈ ಆದೇಶ ಪೂರ್ವ ಜಪ್ತಿ ಆದೇಶವನ್ನು ಸ್ಥಿರೀಕರಿಸಲಾಗುವುದು.

ಈ ಕೆಳಗೆ ಷೆಡ್ಯೂಲ್‌ನಲ್ಲಿ ಕಾಣಿಸಿರುವ ಸ್ಥಿರಾಸ್ತಿಯನ್ನು ಖರೀದಿಸುವಲ್ಲಿ ಆಸಕ್ತಿ ಹೊಂದಿರುವ ಯಾವುದೇ ವ್ಯಕ್ತಿಗಳಿಗೆ ಈ ಆಸ್ತಿ ಪೂರ್ವ ಜಪ್ತಿ ಆದೇಶವು ಒಳಪಟ್ಟಿರುತ್ತದೆ.

"ಷೆಡ್ಯೂಲ್ ಆಸ್ತಿ ವಿವರಗಳು"

1. All that piece and parcel of the agricultural properties bearing Sy No.48/2, measuring 0.14 Guntas, Sy No.81, measuring 5 acres 15 Guntas, Sy No.75/5, measuring 1 acres 37 Guntas, Sy No.75/2, measuring 1 acres 10 Guntas, Sy No.70/1, measuring 1 acres 12 Guntas, in total 10 acres 08 Guntas with commons boundaries, situated at Kuruvigere Village, Thobagere Hobli, Doddaballapura Taluk, Bangalore Rural District and Bounded on.

East by :	Road
West by :	Property belongs to Munishettappa
North by :	Property belongs to Muni Anjanappa
South by :	Property belongs to Munishettappa

2. All that piece and parcel of the agricultural properties bearing Sy No.65/1, measuring 0.16 Guntas, Sy No.64/2, measuring 1 acres 20 Guntas, Sy No.64/1, measuring 05 Guntas, in total 2 acres 01 Guntas with commons boundaries, situated at Kuruvigere Village, Thobagere Hobli, Doddaballapura Taluk, Bangalore Rural District and Bounded on.

East by :	Road
West by :	Property belongs to Krishnappa
North by :	Property belongs to Ramaiah
South by :	Property belongs to Krishnappa

3. All that piece and parcel of the agricultural properties bearing Sy No.57/7, measuring 0.03 Guntas, Sy No.57/15, measuring 01 Guntas, in total 04 Guntas with commons boundaries, situated at Kuruvigere Village, Thobagere Hobli, Doddaballapura Taluk, Bangalore Rural District and Bounded on.

East by :	Property belongs to Channappa
West by :	Road
North by :	Property belongs to Channappa
South by :	Road

4. All that piece and parcel of the agricultural properties bearing Sy No.26/2, measuring 2 acres 10 Guntas, Sy No.26/1, measuring 2 acres 08 Guntas, Sy No.26/3, measuring 3 acres 07 Guntas, Sy No.26/4, measuring 04 Guntas, Sy No.27/2, measuring 2 acres 05 Guntas, in total 09 acres 34 Guntas with commons boundaries, situated at Kuruvigere Village, Thobagere Hobli, Doddaballapura Taluk, Bangalore Rural District and Bounded on.

East by :	Property belongs to Byranna
West by :	Road
North by :	Property belongs to Narasappa
South by :	Property belongs to Venkatesh

5. All that piece and parcel of the agricultural properties bearing Sy No.1/1c measuring 0.03 Guntas, Sy No./1A, measuring 16 Guntas, in total 19 Guntas with commons boundaries, situated at Kuruvigere Village, Thobagere Hobli, Doddaballapura Taluk, Bangalore Rural District and Bounded on.

East by :	Private property
West by :	Road
North by :	Private Property
South by :	Private Property

6. All that piece and parcel of the agricultural properties bearing Sy No.58/5, measuring 0.03 Guntas, Sy No.58/15, measuring 04 Guntas, Sy No.58/13, measuring 04 Guntas, Sy No.58/7, measuring 04 Guntas, in total 15 Guntas with commons boundaries, situated at Kuruvigere Village, Thobagere Hobli, Doddaballapura Taluk, Bangalore Rural District and Bounded on.

East by :	Road
West by :	Property belongs to Byregowda
North by :	Property belongs to Road
South by :	Property belongs to Veeranna

ಈ ಆದೇಶವನ್ನು ನನ್ನ ಸಹಿ ಹಾಗೂ ಕಛೇರಿ ಮೊಹರು ನಿಶಯೊಂದಿಗೆ ಈ ದಿನ ಅಂದರೆ ದಿನಾಂಕ: 30-01-2012 ರಂದು ಹೊರಡಿಸಿರುತ್ತೇನೆ.

ಸಿ.ಎಸ್. ವೀರೇಶ್
ಸಹಕಾರ ಸಂಘಗಳ ಜಂಟಿ ನಿಬಂಧಕರು,
ಬೆಂಗಳೂರು ಪ್ರಾಂತ, ಬೆಂಗಳೂರು.

ಪಿ.ಆರ್. 167

ಸಹಕಾರ ಸಂಘಗಳ ಜಂಟಿ ನಿಬಂಧಕರ ನ್ಯಾಯಾಲಯ, ಬೆಂಗಳೂರು ಪ್ರಾಂತ, ಚಾಮರಾಜಪೇಟೆ, ಬೆಂಗಳೂರು-18.

ದಾವಾ ಸಂಖ್ಯೆ: ಜೆಆರ್‌ಬಿ/ಡಿಐಎಸ್/498/1996-97

ಆದೇಶ ದಿನಾಂಕ:30 ನೇ ಜನವರಿ 2012

ವಾದಿ:
ವ್ಯವಸ್ಥಾಪಕ ನಿರ್ದೇಶಕರು,
ಬಿಡಿ ಅಂಡ್ ಬಿಆರ್‌ಆರ್‌ಡಿಸಿಸಿ ಬ್ಯಾಂಕ್
ನಿ., ಚಾಮರಾಜಪೇಟೆ,
ಬೆಂಗಳೂರು- 560 018.

ವಿರುದ್ಧ

ಪ್ರತಿವಾದಿ:

1. ಕಾರ್ಯದರ್ಶಿ,
ನವಕರ್ನಾಟಕ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ., ನಂ.31/2,
1ನೇ ಮುಖ್ಯ ರಸ್ತೆ, 5ನೇ ಕ್ರಾಸ್, ಮಾರುತಿ ಬಡಾವಣೆ, ಶ್ರೀರಾಮಪುರಂ,
ಬೆಂಗಳೂರು- 21.

2. ಶ್ರೀ ಶ್ರೀನಿವಾಸ, ಮೇಜರ್, ಅಧ್ಯಕ್ಷರು,
ನವಕರ್ನಾಟಕ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ., ನಂ.31/2,
1ನೇ ಮುಖ್ಯ ರಸ್ತೆ, 5ನೇ ಕ್ರಾಸ್, ಮಾರುತಿ ಬಡಾವಣೆ, ಶ್ರೀರಾಮಪುರಂ,
ಬೆಂಗಳೂರು- 21.

3. ಶ್ರೀ ಜಿ.ಪ್ರಶಾಂತ, ಮೇಜರ್, ಕಾರ್ಯದರ್ಶಿ,
ನವಕರ್ನಾಟಕ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ., ನಂ.31/2,
1ನೇ ಮುಖ್ಯ ರಸ್ತೆ, 5ನೇ ಕ್ರಾಸ್, ಮಾರುತಿ ಬಡಾವಣೆ, ಶ್ರೀರಾಮಪುರಂ,
ಬೆಂಗಳೂರು- 21.

4. ಶ್ರೀ ಕೆ.ಮುತ್ತುರಾಜ್, ಮೇಜರ್, ಉಪಾಧ್ಯಕ್ಷರು,
ನವಕರ್ನಾಟಕ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ., ನಂ.31/2,
1ನೇ ಮುಖ್ಯ ರಸ್ತೆ, 5ನೇ ಕ್ರಾಸ್, ಮಾರುತಿ ಬಡಾವಣೆ, ಶ್ರೀರಾಮಪುರಂ,
ಬೆಂಗಳೂರು- 21.

5. ಶ್ರೀ ಆರ್.ಕುಮಾರ್, ಮೇಜರ್, ನಿರ್ದೇಶಕರು,
ನವಕರ್ನಾಟಕ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ., ನಂ.31/2,
1ನೇ ಮುಖ್ಯ ರಸ್ತೆ, 5ನೇ ಕ್ರಾಸ್, ಮಾರುತಿ ಬಡಾವಣೆ, ಶ್ರೀರಾಮಪುರಂ,
ಬೆಂಗಳೂರು- 21.

6. ಶ್ರೀ ಬಿ.ವಿ.ಪ್ರವೀಣ್ ಕುಮಾರ್, ಮೇಜರ್, ನಿರ್ದೇಶಕರು,
ನವಕರ್ನಾಟಕ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ., ನಂ.31/2,
1ನೇ ಮುಖ್ಯ ರಸ್ತೆ, 5ನೇ ಕ್ರಾಸ್, ಮಾರುತಿ ಬಡಾವಣೆ, ಶ್ರೀರಾಮಪುರಂ,
ಬೆಂಗಳೂರು- 21.

7. ಶ್ರೀ ಟಿ.ಎಂ.ನಾಗರಾಜ್, ಮೇಜರ್, ನಿರ್ದೇಶಕರು,
ನವಕರ್ನಾಟಕ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ., ನಂ.31/2,
1ನೇ ಮುಖ್ಯ ರಸ್ತೆ, 5ನೇ ಕ್ರಾಸ್, ಮಾರುತಿ ಬಡಾವಣೆ, ಶ್ರೀರಾಮಪುರಂ,
ಬೆಂಗಳೂರು- 21.

8. ಶ್ರೀ ಹೆಚ್.ಆರ್.ಸುರೇಶ್, ಮೇಜರ್, ನಿರ್ದೇಶಕರು,
ನವಕರ್ನಾಟಕ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ., ನಂ.31/2,
1ನೇ ಮುಖ್ಯ ರಸ್ತೆ, 5ನೇ ಕ್ರಾಸ್, ಮಾರುತಿ ಬಡಾವಣೆ, ಶ್ರೀರಾಮಪುರಂ,
ಬೆಂಗಳೂರು- 21.

9. ಶ್ರೀ ಪಿ.ಎಸ್.ಹರಿಯಣ್ಣ ಗೌಡ, ಮೇಜರ್, ನಿರ್ದೇಶಕರು,
ನವಕರ್ನಾಟಕ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ., ನಂ.31/2,
1ನೇ ಮುಖ್ಯ ರಸ್ತೆ, 5ನೇ ಕ್ರಾಸ್, ಮಾರುತಿ ಬಡಾವಣೆ, ಶ್ರೀರಾಮಪುರಂ,
ಬೆಂಗಳೂರು- 21.

10. ಶ್ರೀ ಪಿ.ಎಸ್.ಪಾಪಣ್ಣ, ಮೇಜರ್, ನಿರ್ದೇಶಕರು,
ನವಕರ್ನಾಟಕ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ., ನಂ.31/2,
1ನೇ ಮುಖ್ಯ ರಸ್ತೆ, 5ನೇ ಕ್ರಾಸ್, ಮಾರುತಿ ಬಡಾವಣೆ, ಶ್ರೀರಾಮಪುರಂ,
ಬೆಂಗಳೂರು- 21.

11. ಶ್ರೀಮತಿ ಟಿ.ಎಸ್.ಯಶೋಧ, ಮೇಜರ್, ನಿರ್ದೇಶಕರು,
ನವಕರ್ನಾಟಕ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ., ನಂ.31/2,
1ನೇ ಮುಖ್ಯ ರಸ್ತೆ, 5ನೇ ಕ್ರಾಸ್, ಮಾರುತಿ ಬಡಾವಣೆ, ಶ್ರೀರಾಮಪುರಂ,
ಬೆಂಗಳೂರು- 21.

12. ಶ್ರೀ ವಿ.ಆನಂದ, ಮೇಜರ್, ನಿರ್ದೇಶಕರು,
ನವಕರ್ನಾಟಕ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿ., ನಂ.31/2,
1ನೇ ಮುಖ್ಯ ರಸ್ತೆ, 5ನೇ ಕ್ರಾಸ್, ಮಾರುತಿ ಬಡಾವಣೆ, ಶ್ರೀರಾಮಪುರಂ,
ಬೆಂಗಳೂರು– 21.

13. ಶ್ರೀ ಸೋಮಸುಂದರ, ಮೇಜರ್, ನಿರ್ದೇಶಕರು,
ನವಕರ್ನಾಟಕ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿ., ನಂ.31/2,
1ನೇ ಮುಖ್ಯ ರಸ್ತೆ, 5ನೇ ಕ್ರಾಸ್, ಮಾರುತಿ ಬಡಾವಣೆ, ಶ್ರೀರಾಮಪುರಂ,
ಬೆಂಗಳೂರು– 21.

14. ಶ್ರೀ ಹೆಚ್.ಬಿ.ಉಮೇಶ್, (ಪೌತಿ) ಅವರ ವಾರಸುದಾರರು.

14. 1ಎ. ಶ್ರೀಮತಿ ಹೆಚ್.ಎಸ್.ಹರಿಣಿ, ಕೋಂ: ಲೇಟ್: ಹೆಚ್.ಬಿ.ಉಮೇಶ್,

1ಬಿ. ಶ್ರೀ ಕೀರ್ತಿ ಕಂದಾ, ಬಿನ್: ಲೇಟ್: ಹೆಚ್.ಬಿ.ಉಮೇಶ್,

1ಸಿ. ಶ್ರೀ ಚರಣ್, ಬಿನ್: ಲೇಟ್: ಹೆಚ್.ಬಿ.ಉಮೇಶ್,

ವಿಳಾಸ:
ನಂ.112, ಐ.ಸಿ.ಎಸ್.ಸಿ. ಮೇನ್ ರೋಡ್, ನಾಗರಭಾವಿ, ಬೆಂಗಳೂರು–72.

15. ಶ್ರೀ ನಾರಾಯಣ ಗೌಡ, ಮೇಜರ್, ಬಿನ್ ಪುಟ್ಟೇಗೌಡ,
ಮಾಜಿ ಅಧ್ಯಕ್ಷರು ಹಾಗೂ ಈಗಿನ ನಿರ್ದೇಶಕರು,
ಬಿಡಿ ಅಂಡ್ ಬಿಆರ್ಆರ್‌ಡಿಸಿಸಿ ಬ್ಯಾಂಕ್ ನಿ., ಕೆರೆಲಾಲುಸಂದ್ರ,
ಮಳಗಳು ಪೋಸ್ಟ್, ಕಸಬಾ ಹೋಬಳಿ, ಕನಕಪುರ ತಾಲ್ಲೂಕು,
ಬೆಂಗಳೂರು (ಗ್ರಾ) ಜಿಲ್ಲೆ.

16. ಶ್ರೀ ಎಸ್.ಜಿ.ಚೆಲುವಯ್ಯ, ಮೇಜರ್, ಮಾಜಿ ಉಪಾಧ್ಯಕ್ಷರು,
ಬಿಡಿ ಅಂಡ್ ಬಿಆರ್ಆರ್‌ಡಿಸಿಸಿ ಬ್ಯಾಂಕ್ ನಿ., ಸೊಂಡೆಕೊಪ್ಪ, ಸೊಂಡೆಕೊಪ್ಪ
ಪೋಸ್ಟ್, ನೆಲಮಂಗಲ ತಾ: ಬೆಂಗಳೂರು (ಗ್ರಾ) ಜಿಲ್ಲೆ.

17. ಶ್ರೀ ವಿ. ಚನ್ನಪ್ಪ, ಮೇಜರ್, ಮಾಜಿ ನಿರ್ದೇಶಕರು,
ಬಿಡಿ ಅಂಡ್ ಬಿಆರ್ಆರ್‌ಡಿಸಿಸಿ ಬ್ಯಾಂಕ್ ನಿ., ನೆರಳಘಟ್ಟ, ಅಣಬೆ ಪೋಸ್ಟ್,
ದೊಡ್ಡಬಳ್ಳಾಪುರ ತಾ: ಬೆಂಗಳೂರು (ಗ್ರಾ) ಜಿಲ್ಲೆ.

18. ಶ್ರೀ ಎ ನರಸಿಂಹಯ್ಯ, ಮೇಜರ್, ಮಾಜಿ ನಿರ್ದೇಶಕರು,
ಬಿಡಿ ಅಂಡ್ ಬಿಆರ್ಆರ್‌ಡಿಸಿಸಿ ಬ್ಯಾಂಕ್ ನಿ., ಗಂಟಿಗಾನಹಳ್ಳಿ ಪೋಸ್ಟ್,
ಕುರುವೇಗೆರೆ, ದೊಡ್ಡಬಳ್ಳಾಪುರ ತಾ: ಬೆಂಗಳೂರು (ಗ್ರಾ) ಜಿಲ್ಲೆ.

19. ಶ್ರೀ ಎನ್.ಎಸ್. ನರಸೇಗೌಡ, ಮೇಜರ್, ಮಾಜಿ ನಿರ್ದೇಶಕರು,
ಬಿಡಿ ಅಂಡ್ ಬಿಆರ್ಆರ್‌ಡಿಸಿಸಿ ಬ್ಯಾಂಕ್ ನಿ.,
ನಂ.692, 'ಎ' 8ನೇ ಮೇನ್, 3ನೇ ಸ್ಟೇಜ್, 3ನೇ ಬ್ಲಾಕ್,
ಬಸವೇಶ್ವರನಗರ, ಬೆಂಗಳೂರು–79.

20. ಶ್ರೀ ಬಿ.ರಾಮಿ ರೆಡ್ಡಿ, ಮೇಜರ್, ಮಾಜಿ ವ್ಯವಸ್ಥಾಪಕ ನಿರ್ದೇಶಕರು,
ಬಿಡಿ ಅಂಡ್ ಬಿಆರ್ಆರ್‌ಡಿಸಿಸಿ ಬ್ಯಾಂಕ್ ನಿ., ನಂ.124, 'ಎ' ಪ್ಲೋರ್, 26ನೇ
ಕ್ರಾಸ್, 6ನೇ ಬ್ಲಾಕ್, ಜಯನಗರ, ಬೆಂಗಳೂರು–20.

21. ಶ್ರೀ ಕೆ.ಟಿ.ವೆಂಕಟಸ್ವಾಮಿ, ಮೇಜರ್, ಮಾಜಿ ಶಾಖಾ ವ್ಯವಸ್ಥಾಪಕರು(ನಿವೃತ್ತ)
ಕೇಂದ್ರ ಕಛೇರಿ ಶಾಖೆ, ಬಿಡಿ ಅಂಡ್ ಬಿಆರ್ಆರ್‌ಡಿಸಿಸಿ ಬ್ಯಾಂಕ್ ನಿ., ನಂ.1013
ಇ, ಮೂಕಾಂಬಿಕ ಎ.ಆರ್. ಅವೆನ್ಯೂ, ನ್ಯೂ ತಿಪ್ಪಸಂದ್ರ, ಬೆಂಗಳೂರು–75.

22. ಶ್ರೀ ಎಂ.ಹೊನ್ನಲಿಂಗೇಗೌಡ, ಮೇಜರ್, ಮಾಜಿ ಶಾಖಾ ವ್ಯವಸ್ಥಾಪಕರು
ಬಿಡಿ ಅಂಡ್ ಬಿಆರ್ಆರ್‌ಡಿಸಿಸಿ ಬ್ಯಾಂಕ್ ನಿ., ಯಶವಂತಪುರ ಶಾಖೆ, ನಂ.
464, 10ನೇ ಇ ಮೇನ್ ರೋಡ್, 6ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು–
10.

23. ಶ್ರೀ ರಾಮಾಂಜನಪ್ಪ, ಮೇಜರ್, ಶಾಖಾ ಸೂಪರ್‌ವೈಸರ್,
(ಅಂಡರ್ ಸಸ್‌ಪೆನ್‌ಷನ್) ಬಿಡಿ ಅಂಡ್ ಬಿಆರ್ಆರ್‌ಡಿಸಿಸಿ ಬ್ಯಾಂಕ್ ನಿ.,
ಯಶವಂತಪುರ ಶಾಖೆ, ನಂ. 464, 10ನೇ ಇ ಮೇನ್ ರೋಡ್, 6ನೇ ಬ್ಲಾಕ್,
ರಾಜಾಜಿನಗರ, ಬೆಂಗಳೂರು–10.

24. ಶ್ರೀ ರಾಮಕೃಷ್ಣ, ಮೇಜರ್, ಶಾಖಾ ವ್ಯವಸ್ಥಾಪಕರು (ಅಂಡರ್ ಸಸ್‌ಪೆನ್‌ಷನ್) ಬಿಡಿ ಅಂಡ್ ಬಿಆರ್‌ಆರ್‌ಡಿಸಿಸಿ ಬ್ಯಾಂಕ್ ನಿ., (ಪ್ಲಾನಿಂಗ್ & ಡೆವಲಪ್‌ಮೆಂಟ್ ಶಾಖೆ) ನಂ.221, 5ನೇ ಕ್ರಾಸ್, 1ನೇ ಮೇನ್, 1ನೇ ಹಂತ, ಕೆ.ಹೆಚ್.ಬಿ. ಕಾಲೋನಿ., ಬಸವೇಶ್ವರನಗರ, ಬೆಂಗಳೂರು-79.

25. ಶ್ರೀ ರಂಗರಾಜು, ಜೂನಿಯರ್ ಅಸಿಸ್ಟೆಂಟ್, ಬಿಡಿ ಅಂಡ್ ಬಿಆರ್‌ಆರ್‌ಡಿಸಿಸಿ ಬ್ಯಾಂಕ್ ನಿ., ಯಶವಂತಪುರ ಶಾಖೆ ನಂ.466, 8ನೇ ಕ್ರಾಸ್, ಮಹಾಲಕ್ಷ್ಮೀ ಲೇಔಟ್, ಬೆಂಗಳೂರು-86.

26. ಶ್ರೀ ಎ.ಸಿ.ಲಕ್ಷ್ಮೀಕಾಂತ, ಕ್ಯಾಶಿಯರ್, ಬಿಡಿ ಅಂಡ್ ಬಿಆರ್‌ಆರ್‌ಡಿಸಿಸಿ ಬ್ಯಾಂಕ್ ನಿ., ಯಶವಂತಪುರ ಶಾಖೆ ನಂ.96, ಕಿರಣ್ ನಿಲಯ, 3ನೇ ಮೇನ್ ರೋಡ್, ಸರಸ್ವತಿ ಪುರ, ನಂದಿನಿ ಲೇಔಟ್, ಬೆಂಗಳೂರು-96.

27. ಶ್ರೀ ಹೆಚ್.ಎಲ್.ಶಿವಕುಮಾರ್, ಬಿನ್ ಲಕ್ಷ್ಮಣಗೌಡ, ಜೂನಿಯರ್ ಅಸಿಸ್ಟೆಂಟ್, ಬಿಡಿ ಅಂಡ್ ಬಿಆರ್‌ಆರ್‌ಡಿಸಿಸಿ ಬ್ಯಾಂಕ್ ನಿ., ಕೇಂದ್ರ ಕಛೇರಿ, ನಂ.32, 3ನೇ ಕ್ರಾಸ್, ವಿಠಲ್‌ನಗರ, ಚಾಮರಾಜಪೇಟೆ, ಬೆಂಗಳೂರು-18.

28. ಶ್ರೀ ಬಿ.ಎಸ್.ಆನಂತಮೂರ್ತಿ, ಪ್ರೋ : ಶ್ರೀಲಕ್ಷ್ಮೀ ಸಿಲ್ಕ್ ವೀವಿಂಗ್ ಫ್ಯಾಕ್ಟರಿ, ಶ್ರೀರಾಮಪುರಂ, ಬೆಂಗಳೂರು.

29. ಶ್ರೀ ಬಿ.ಎಸ್.ವೆಂಕಟೇಶ್, ನಂ.45/1, 11ನೇ ಕ್ರಾಸ್, 7ನೇ ಮೇನ್, ಶ್ರೀರಾಮಪುರಂ, ಬೆಂಗಳೂರು.

30. ಶ್ರೀ ಎಸ್.ಜಿ.ಗುಪ್ತಾ, ಕೇ : ನವಕರ್ನಾಟಕ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ., ನಂ.31/2, 1ನೇ ಮುಖ್ಯ ರಸ್ತೆ, 5ನೇ ಕ್ರಾಸ್, ಮಾರುತಿ ಬಡಾವಣೆ, ಶ್ರೀರಾಮಪುರಂ, ಬೆಂಗಳೂರು- 21.

"1959ರ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆಯ ಕಲಂ 103 ರ ರೀತ್ಯಾ ಸ್ಥಿರಾಸ್ತಿಯನ್ನು ಆದೇಶಕ್ಕೆ ಮುನ್ನ ಜಪ್ತಿ ಮಾಡುವ ಸಲುವಾಗಿ ತಿಳುವಳಿಕೆ ನೋಟೀಸು"

1. ವಾದಿಯು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ರ ಕಲಂ 70 ರಡಿ ದಾವಾ ಅರ್ಜಿಯನ್ನು ಸಲ್ಲಿಸಿ 1 ರಿಂದ 30ನೇ ಪ್ರತಿವಾದಿಗಳಿಂದ ರೂ.4,36,78,537/- (ರೂ.ನಾಲ್ಕು ಕೋಟಿ ಮೂವತ್ತಾರು ಲಕ್ಷದ ಎಪ್ಪತ್ತೆಂಟು ಸಾವಿರ ಐದು ನೂರ ಮೂವತ್ತೇಳು ಮಾತ್ರ) ಗಳು ಹಾಗೂ ಈ ಮೊತ್ತಕ್ಕೆ ದಿನಾಂಕ:24-05-1996 ರಿಂದ ಸಾಲಿಯಾನ ಶೇ.22% ರಷ್ಟು ಬಡ್ಡಿ ದರದಂತೆ ಅಸಲು ಮತ್ತು ಬಡ್ಡಿ ವಸೂಲಾತಿಗಾಗಿ ದಾವೆಯನ್ನು ಹೂಡಿರುತ್ತಾರೆ. ಈ ದಾವೆಯನ್ನು ವಿಚಾರಣೆಗೆ ತೆಗೆದುಕೊಂಡು, ವಿಚಾರಣೆ ನಡೆಸಲಾಗುತ್ತಿದೆ. ಪ್ರಕರಣದ ವಿಚಾರಣಾ ಹಂತದಲ್ಲಿ ವಾದಿಯು ದಿನಾಂಕ:30-01-2012 ರಂದು ಪ್ರಮಾಣ ಪತ್ರದೊಂದಿಗೆ ಕಲಂ 103 ರಡಿ ಅರ್ಜಿಯನ್ನು ಸಲ್ಲಿಸಿ 17ನೇ ಪ್ರತಿವಾದಿಯ ಹೆಸರಿನಲ್ಲಿರುವ ಸ್ಥಿರಾಸ್ತಿಯನ್ನು ಆದೇಶ ಪೂರ್ವ ಜಪ್ತಿ ಆದೇಶ ಹೊರಡಿಸಬೇಕೆಂದು ಕೋರಿರುತ್ತಾರೆ.

2. ಅರ್ಜಿದಾರರು ಕಲಂ 103 ರ ಅರ್ಜಿ ಜೊತೆ ಸಲ್ಲಿಸಲಾಗಿರುವ ಪ್ರಮಾಣ ಪತ್ರದಲ್ಲಿ 1ನೇ ಪ್ರತಿವಾದಿ ಸಂಘದ ಆಡಳಿತ ಮಂಡಳಿಯನ್ನು ಸಹಕಾರ ಇಲಾಖೆಯು 1994ನೇ ಸಾಲಿನಲ್ಲಿ ರದ್ದು ಮಾಡಿರುತ್ತದೆ. ಈ ಆದೇಶವನ್ನು 1ನೇ ಪ್ರತಿವಾದಿ ಸಂಘವು ಗೌರವ ಉಚ್ಛ ನ್ಯಾಯಾಲಯದಲ್ಲಿ ಪ್ರಶ್ನಿಸಿದ್ದು, ರಿಟ್ ಅಫೀಲು ಸಂ.2218 ಮತ್ತು 2219 C/W/1991 ಹಾಗೂ 1992/1994 ಈ ರಿಟ್ ಅಫೀಲಿನನ್ವಯ ಗೌರವ ನ್ಯಾಯಾಲಯವು ಪ್ರತಿವಾದಿ 15 ರಿಂದ 19 ರವರುಗಳನ್ನು Government Nominees as Ad-Hoc Committee members to from bank administration till holding of new elelction on 02-12-1994 ಅದರನ್ವಯ ಸದರಿ ಅಡಾಕ್ ಕಮಿಟಿಯು ದಿನಾಂಕ:13-05-1994 ರವರೆಗೆ ಕಾರ್ಯನಿರ್ವಹಿಸಿರುತ್ತದೆ. ಈ ಅವಧಿಯಲ್ಲಿ 17ನೇ ಪ್ರತಿವಾದಿಯು ನಿರ್ದೇಶಕರಾಗಿ ಕಾರ್ಯನಿರ್ವಹಿಸಿ ಈ ಅವಧಿಯಲ್ಲಿ ಸಾಲಗಳನ್ನು ಮಂಜೂರು ಮಾಡಿರುತ್ತಾರೆ. ಆದರೆ ಅಡಾಕ್ ಕಮಿಟಿಯು ವಾದಿ ಸಂಘದಲ್ಲಿ ರೂ.4,00,00,000/-ಕ್ಕೆ ದಿನಾಂಕ:15-04-1995 ರಂದು ಅರ್ಜಿ ಸಲ್ಲಿಸಿ ಸಾಲವನ್ನು ಪಡೆದಿರುತ್ತಾರೆ. ಆದರೆ ಈ ಸಾಲ ಮಂಜೂರಾತಿಯಲ್ಲಿ ಅಡಾಕ್ ಕಮಿಟಿಯು ಗೌರವ ಉಚ್ಛ ನ್ಯಾಯಾಲಯದ ಆದೇಶ ಸಂಘದ ಬೈಲಾ ಮತ್ತು ಸಾಲಗಳ ನಿಯಮ ಮತ್ತು ನಿಬಂಧನೆಗಳ ಉಲ್ಲಂಘನೆ ಮಾಡಿ, ಅರ್ಜಿದಾರ ಬ್ಯಾಂಕಿಗೆ ಸುಳ್ಳು ಮಾಹಿತಿ ನೀಡಿ ಮೋಸ ಮಾಡಿರುತ್ತಾರೆ. ಆದರೆ ಪ್ರಸ್ತುತ 1ನೇ ಪ್ರತಿವಾದಿ ಸಂಘವು ತನ್ನ ಕಾರ್ಯಚಟುವಟಿಕೆ ನಡೆಸದೇ ಇರುವಂತಹ ಸ್ಥಿತಿಯನ್ನು ತಲುಪಿರುತ್ತದೆ. ಮುಂದೆಯು ಸಹ ಕಾರ್ಯಚಟುವಟಿಕೆಗಳನ್ನು ನಡೆಸುವ ಸಾಧ್ಯತೆ ಇಲ್ಲವೆಂದು ಮನಗಂಡು ಕಲಂ 70 ರಡಿಯಲ್ಲಿ ದಾವೆಯನ್ನು ಹೂಡಲಾಗಿದೆ. ಈ ಎಲ್ಲಾ ಅವ್ಯವಹಾರಕ್ಕೆ ಅಡಾಕ್ ಕಮಿಟಿಯ ಸದಸ್ಯರು ಮತ್ತು ಬ್ಯಾಂಕಿನ ನೌಕರರು ಒಳಗೂಡಿ ವೈಯಕ್ತಿಕವಾಗಿ ಮತ್ತು ಜಂಟಿಯಾಗಿ ಅವ್ಯವಹಾರ ನಡೆಸಿ ಅರ್ಜಿದಾರ ಬ್ಯಾಂಕಿನ ಸಾಲದ ಮೊತ್ತವನ್ನು ಉಪಯೋಗಿಸಿಕೊಂಡು ನಂತರ ಬ್ಯಾಂಕಿಗೆ ನಷ್ಟ ಉಂಟಾಗಲು ಕಾರಣ ಕರ್ತರಾಗಿರುತ್ತಾರೆ. ಈ ಹಿನ್ನಲೆಯಲ್ಲಿ ದಾವೆಗಳನ್ನು ಹೂಡಲಾಗಿದೆ. ಆದರೆ ಈ ದಾವೆ ಇತ್ಯರ್ಥವಾಗುವಲ್ಲಿ ಕಾನೂನು ರೀತ್ಯಾ ನಡವಳಿಕೆಗಳು ನಡೆಸಿ ಇತ್ಯರ್ಥಪಡಿಸುವಲ್ಲಿ ಸಮಯಾವಕಾಶ ತೆಗೆದುಕೊಳ್ಳುತ್ತಿದ್ದು, ಈ ಮಧ್ಯೆ ಪ್ರತಿವಾದಿಗಳು ತಮ್ಮ ಹೆಸರಿನಲ್ಲಿರುವ ಸ್ಥಿರಾಸ್ತಿಗಳನ್ನು ಮಾರಾಟ ಮಾಡುವ

ಸಾಧ್ಯತೆಗಳಿರುತ್ತವೆ. ಒಂದು ವೇಳೆ ಈ ರೀತಿ ಪ್ರತಿವಾದಿಗಳು ತಮ್ಮ ಹೆಸರಿನಲ್ಲಿರುವ ಸ್ಥಿರಾಸ್ತಿಗಳನ್ನು ಮಾರಾಟ ಮಾಡಿದ ಪಕ್ಷದಲ್ಲಿ ಈ ದಾವೆಯ ಅಂತಿಮ ಆದೇಶ ಅರ್ಜಿದಾರ ಬ್ಯಾಂಕಿನ ಪರವಾಗಿ ಬಂದರೂ ಸಹ ಅವಾರ್ಡ್ ಮೊತ್ತವನ್ನು ವಸೂಲಿ ಮಾಡಿಕೊಳ್ಳಲು ಸಾಧ್ಯವಾಗದ ಪರಿಸ್ಥಿತಿ ಉಂಟಾಗುವ ಸಾಧ್ಯತೆ ಇರುವುದರಿಂದ ಕಲಂ 103 ರಡಿಯಲ್ಲಿ ಸಲ್ಲಿಸಲಾಗಿರುವ ಅರ್ಜಿ ಆಧಾರಿತ 17ನೇ ಪ್ರತಿವಾದಿಗೆ ಸೇರಿದ ಸ್ಥಿರಾಸ್ತಿಗಳನ್ನು ಆದೇಶಕ್ಕೆ ಪೂರ್ವ ಜಪ್ತಿ ಆದೇಶ ಹೊರಡಿಸಬೇಕೆಂದು ಕೋರಿರುತ್ತಾರೆ.

3. ವಾದಿಯು ಕಲಂ 103 ರಡಿಯಲ್ಲಿ ಸಲ್ಲಿಸಿರುವ ಅರ್ಜಿಯಲ್ಲಿ ತಿಳಿಸಿರುವ ಸ್ಥಿರಾಸ್ತಿಗಳ ದಾಖಲಾತಿಗಳನ್ನು ಪರಿಶೀಲಿಸಲಾಗಿ ಈ ಸ್ಥಿರಾಸಿಯು 17ನೇ ಪ್ರತಿವಾದಿಯ ಹೆಸರಿಗೆ ಇರುವುದು ಕಂಡು ಬಂದಿರುತ್ತದೆ. ಈ ಸಂಬಂಧವಾಗಿ ವಾದಿಯು ಸಲ್ಲಿಸಲಾಗಿರುವ ಪ್ರಮಾಣ ಪತ್ರದಲ್ಲಿ ತಿಳಿಸಲಾಗಿರುವ ಅಂಶಗಳನ್ನು ಪರಿಶೀಲಿಸಲಾಗಿ 17ನೇ ಪ್ರತಿವಾದಿಯ ಹೆಸರಿಗೆ ಸೇರಿದ ಸ್ಥಿರಾಸ್ತಿಯನ್ನು ಕಲಂ 103 ರಡಿ ಜಪ್ತಿ ಮಾಡುವುದು ಅವಶ್ಯಕ ಮತ್ತು ಸೂಕ್ತವೆಂದು ಅಭಿಪ್ರಾಯ ಪಡುತ್ತಾ, ಈ ಕೆಳಕಂಡ ಆದೇಶ ಹೊರಡಿಸಲಾಗಿದೆ.

"ಆದೇಶ"

ಮೇಲೆ ತಿಳಿಸಿರುವ ಅಂಶಗಳ ಹಿನ್ನಲೆಯಲ್ಲಿ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ಕಲಂ 70 ಮತ್ತು ಕಲಂ 103 ಹಾಗೂ ಸರ್ಕಾರದ ಅಧಿಸೂಚನೆ ಸಂ.ಸಿಒ/139/ಸಿಎಂಎಲ್/2010 ದಿನಾಂಕ:17-02-2011 ರನ್ವಯ ನನಗೆ ದತ್ತವಾದ ಅಧಿಕಾರವನ್ನು ಚಲಾಯಿಸುತ್ತಾ ಸಿ.ಎಸ್.ವಿರೇಶ್, ಸಹಕಾರ ಸಂಘಗಳ ಜಂಟಿ ನಿಬಂಧಕರು, ಬೆಂಗಳೂರು ಪ್ರಾಂತ, ಬೆಂಗಳೂರು ಆದ ನಾನು 17ನೇ ಪ್ರತಿವಾದಿಯ ಹೆಸರಿನಲ್ಲಿರುವ ಈ ಕೆಳಗಿನ ಷೆಡ್ಯೂಲ್‌ನಲ್ಲಿ ಕಾಣಿಸಿರುವ ಸ್ಥಿರಾಸ್ತಿಯನ್ನು ಷರತ್ತಿಗೊಳಪಟ್ಟು ಈ ಪ್ರಕರಣದ ಅಂತಿಮ ತೀರ್ಪಿಗೆ ಪೂರ್ವ ಜಪ್ತಿ ಆದೇಶ ಹೊರಡಿಸಿರುತ್ತೇನೆ.

17ನೇ ಪ್ರತಿವಾದಿಗಳು ಒಂದು ವೇಳೆ ಈ ಜಪ್ತಿ ಪೂರ್ವ ಆದೇಶದಲ್ಲಿ ತಿಳಿಸಿರುವ ಯಾವುದೇ ಸ್ಥಿರಾಸ್ತಿಯನ್ನು/ ಸ್ಥಿರಾಸ್ತಿಯ ಭಾಗವನ್ನು ಈ ಆದೇಶದಿಂದ ಮುಕ್ತ ಮಾಡಿಸಿಕೊಳ್ಳಲು ಇಚ್ಚಿಸಿದಲ್ಲಿ ಈ ದಾವಾ ಅರ್ಜಿಯಲ್ಲಿ ವಾದಿಯು ಕ್ಲೈಂ ಮಾಡಿರುವ ಮೊತ್ತ ರೂ.4,36,78,537/- (ರೂ.ನಾಲ್ಕು ಕೋಟಿ ಮೂವತ್ತಾರು ಲಕ್ಷದ ಎಪ್ಪತ್ತೆಂಟು ಸಾವಿರ ಐದು ನೂರ ಮೂವತ್ತೇಳು ಮಾತ್ರ) ಗಳನ್ನು ವಾದಿ ಬ್ಯಾಂಕಿನಲ್ಲಿ ಅಮಾನತ್ತು ಖಾತೆಗೆ ಈ ಆದೇಶ ಹೊರಡಿಸಿದ 30 ದಿವಸದೊಳಗಾಗಿ ಜಮಾ ಮಾಡಿ ಅಧಿಕೃತ ಚಲನ್/ರಸೀದಿಯನ್ನು ಹಾಜರುಪಡಿಸಿದಲ್ಲಿ ಈ ಆದೇಶದಲ್ಲಿ ತಿಳಿಸಿರುವ ಷೆಡ್ಯೂಲ್ ಸ್ವತ್ತನ್ನು ಮುಕ್ತಗೊಳಿಸುವ ಷರತ್ತಿಗೆ ಒಳಪಟ್ಟಿರುತ್ತದೆ.

ಒಂದು ವೇಳೆ 17ನೇ ಪ್ರತಿವಾದಿಯು ಮೇಲೆ ತಿಳಿಸಿರುವಂತೆ ಈ ಆದೇಶ ಹೊರಡಿಸಿದ 30 ದಿವಸಗಳೊಳಗಾಗಿ ಅವಶ್ಯಕವಿರುವ ನಗ್ದು ಭದ್ರತೆಯನ್ನು ನೀಡಲು ವಿಫಲರಾದಲ್ಲಿ ಈ ಆದೇಶ ಪೂರ್ವ ಜಪ್ತಿ ಆದೇಶವನ್ನು ಸ್ಥಿರೀಕರಿಸಲಾಗುವುದು.

ಈ ಕೆಳಗೆ ಷೆಡ್ಯೂಲ್‌ನಲ್ಲಿ ಕಾಣಿಸಿರುವ ಸ್ಥಿರಾಸ್ತಿಯನ್ನು ಖರೀದಿಸುವಲ್ಲಿ ಆಸಕ್ತಿ ಹೊಂದಿರುವ ಯಾವುದೇ ವ್ಯಕ್ತಿಗಳಿಗೆ ಈ ಆಸ್ತಿ ಪೂರ್ವ ಜಪ್ತಿ ಆದೇಶವು ಒಳಪಟ್ಟಿರುತ್ತದೆ.

"ಷೆಡ್ಯೂಲ್ ಆಸ್ತಿ ವಿವರಗಳು"

All that piece and parcel of the agricultural properties bearing Sy No.35/1B, measuring 3 Acres, Sy No.85, measuring 2 acres Sy No.35/1A1, measuring 05 Guntas, in total 05 acres 05 Guntas with commons boundaries, situated at Neralagatta Village, Kasaba Hobli, Doddaballapura Taluk, Bangalore Rural District and Bounded on.

East by :	Property belongs to Devraju
West by :	Property belongs to Channakrishnaiah
North by :	Kere angala
South by :	Road

ಈ ಆದೇಶವನ್ನು ನನ್ನ ಸಹಿ ಹಾಗೂ ಕಛೇರಿ ಮೊಹರು ನಿಶೆಯೊಂದಿಗೆ ಈ ದಿನ ಅಂದರೆ ದಿನಾಂಕ: 30-01-2012 ರಂದು ಹೊರಡಿಸಿರುತ್ತೇನೆ.

ಸಿ.ಎಸ್. ವೀರೇಶ್
ಸಹಕಾರ ಸಂಘಗಳ ಜಂಟಿ ನಿಬಂಧಕರು,
ಬೆಂಗಳೂರು ಪ್ರಾಂತ, ಬೆಂಗಳೂರು.

ಪಿ.ಆರ್. 169

ಸಹಕಾರ ಸಂಘಗಳ ಜಂಟಿ ನಿಬಂಧಕರ ನ್ಯಾಯಾಲಯ, ಬೆಂಗಳೂರು ಪ್ರಾಂತ, ಚಾಮರಾಜಪೇಟೆ, ಬೆಂಗಳೂರು-18.

ದಾವಾ ಸಂಖ್ಯೆ: ಜೆಆರ್‌ಬಿ/ಡಿಐಎಸ್/498/1996-97

ಆದೇಶ ದಿನಾಂಕ:30 ನೇ ಜನವರಿ 2012

ವಾದಿ: ವಿರುದ್ಧ ಪ್ರತಿವಾದಿ:

ವ್ಯವಸ್ಥಾಪಕ ನಿರ್ದೇಶಕರು,
ಬಿಡಿ ಅಂಡ್ ಬಿಆರ್‌ಆರ್‌ಡಿಸಿಸಿ ಬ್ಯಾಂಕ್
ನಿ., ಚಾಮರಾಜಪೇಟೆ,
ಬೆಂಗಳೂರು- 560 018.

1. ಕಾರ್ಯದರ್ಶಿ,
ನವಕರ್ನಾಟಕ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ., ನಂ.31/2,
1ನೇ ಮುಖ್ಯ ರಸ್ತೆ, 5ನೇ ಕ್ರಾಸ್, ಮಾರುತಿ ಬಡಾವಣೆ, ಶ್ರೀರಾಮಪುರಂ,
ಬೆಂಗಳೂರು- 21.

2. ಶ್ರೀ ಶ್ರೀನಿವಾಸ, ಮೇಜರ್, ಅಧ್ಯಕ್ಷರು,
ನವಕರ್ನಾಟಕ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ., ನಂ.31/2,
1ನೇ ಮುಖ್ಯ ರಸ್ತೆ, 5ನೇ ಕ್ರಾಸ್, ಮಾರುತಿ ಬಡಾವಣೆ, ಶ್ರೀರಾಮಪುರಂ,
ಬೆಂಗಳೂರು- 21.

3. ಶ್ರೀ ಜಿ.ಪ್ರಶಾಂತ, ಮೇಜರ್, ಕಾರ್ಯದರ್ಶಿ,
ನವಕರ್ನಾಟಕ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ., ನಂ.31/2,
1ನೇ ಮುಖ್ಯ ರಸ್ತೆ, 5ನೇ ಕ್ರಾಸ್, ಮಾರುತಿ ಬಡಾವಣೆ, ಶ್ರೀರಾಮಪುರಂ,
ಬೆಂಗಳೂರು- 21.

4. ಶ್ರೀ ಕೆ.ಮುತ್ತುರಾಜ್, ಮೇಜರ್, ಉಪಾಧ್ಯಕ್ಷರು,
ನವಕರ್ನಾಟಕ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ., ನಂ.31/2,
1ನೇ ಮುಖ್ಯ ರಸ್ತೆ, 5ನೇ ಕ್ರಾಸ್, ಮಾರುತಿ ಬಡಾವಣೆ, ಶ್ರೀರಾಮಪುರಂ,
ಬೆಂಗಳೂರು- 21.

5. ಶ್ರೀ ಆರ್.ಕುಮಾರ್, ಮೇಜರ್, ನಿರ್ದೇಶಕರು,
ನವಕರ್ನಾಟಕ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ., ನಂ.31/2,
1ನೇ ಮುಖ್ಯ ರಸ್ತೆ, 5ನೇ ಕ್ರಾಸ್, ಮಾರುತಿ ಬಡಾವಣೆ, ಶ್ರೀರಾಮಪುರಂ,
ಬೆಂಗಳೂರು- 21.

6. ಶ್ರೀ ಬಿ.ವಿ.ಪ್ರವೀಣ್ ಕುಮಾರ್, ಮೇಜರ್, ನಿರ್ದೇಶಕರು,
ನವಕರ್ನಾಟಕ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ., ನಂ.31/2,
1ನೇ ಮುಖ್ಯ ರಸ್ತೆ, 5ನೇ ಕ್ರಾಸ್, ಮಾರುತಿ ಬಡಾವಣೆ, ಶ್ರೀರಾಮಪುರಂ,
ಬೆಂಗಳೂರು- 21.

7. ಶ್ರೀ ಟಿ.ಎಂ.ನಾಗರಾಜ್, ಮೇಜರ್, ನಿರ್ದೇಶಕರು,
ನವಕರ್ನಾಟಕ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ., ನಂ.31/2,
1ನೇ ಮುಖ್ಯ ರಸ್ತೆ, 5ನೇ ಕ್ರಾಸ್, ಮಾರುತಿ ಬಡಾವಣೆ, ಶ್ರೀರಾಮಪುರಂ,
ಬೆಂಗಳೂರು- 21.

8. ಶ್ರೀ ಹೆಚ್.ಆರ್.ಸುರೇಶ್, ಮೇಜರ್, ನಿರ್ದೇಶಕರು,
ನವಕರ್ನಾಟಕ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ., ನಂ.31/2,
1ನೇ ಮುಖ್ಯ ರಸ್ತೆ, 5ನೇ ಕ್ರಾಸ್, ಮಾರುತಿ ಬಡಾವಣೆ, ಶ್ರೀರಾಮಪುರಂ,
ಬೆಂಗಳೂರು- 21.

9. ಶ್ರೀ ಪಿ.ಎಸ್.ಹರಿಯಣ್ಣ ಗೌಡ, ಮೇಜರ್, ನಿರ್ದೇಶಕರು,
ನವಕರ್ನಾಟಕ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ., ನಂ.31/2,
1ನೇ ಮುಖ್ಯ ರಸ್ತೆ, 5ನೇ ಕ್ರಾಸ್, ಮಾರುತಿ ಬಡಾವಣೆ, ಶ್ರೀರಾಮಪುರಂ,
ಬೆಂಗಳೂರು- 21.

10. ಶ್ರೀ ಪಿ.ಎಸ್.ಪಾಪಣ್ಣ, ಮೇಜರ್, ನಿರ್ದೇಶಕರು,
ನವಕರ್ನಾಟಕ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ., ನಂ.31/2,
1ನೇ ಮುಖ್ಯ ರಸ್ತೆ, 5ನೇ ಕ್ರಾಸ್, ಮಾರುತಿ ಬಡಾವಣೆ, ಶ್ರೀರಾಮಪುರಂ,
ಬೆಂಗಳೂರು- 21.

11. ಶ್ರೀಮತಿ ಟಿ.ಎಸ್.ಯಶೋಧ, ಮೇಜರ್, ನಿರ್ದೇಶಕರು,
ನವಕರ್ನಾಟಕ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ., ನಂ.31/2,
1ನೇ ಮುಖ್ಯ ರಸ್ತೆ, 5ನೇ ಕ್ರಾಸ್, ಮಾರುತಿ ಬಡಾವಣೆ, ಶ್ರೀರಾಮಪುರಂ,
ಬೆಂಗಳೂರು- 21.

12. ಶ್ರೀ ವಿ.ಆನಂದ, ಮೇಜರ್, ನಿರ್ದೇಶಕರು,
ನವಕರ್ನಾಟಕ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ., ನಂ.31/2,
1ನೇ ಮುಖ್ಯ ರಸ್ತೆ, 5ನೇ ಕ್ರಾಸ್, ಮಾರುತಿ ಬಡಾವಣೆ, ಶ್ರೀರಾಮಪುರಂ,
ಬೆಂಗಳೂರು- 21.

13. ಶ್ರೀ ಸೋಮಸುಂದರ, ಮೇಜರ್, ನಿರ್ದೇಶಕರು,
ನವಕರ್ನಾಟಕ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ., ನಂ.31/2,
1ನೇ ಮುಖ್ಯ ರಸ್ತೆ, 5ನೇ ಕ್ರಾಸ್, ಮಾರುತಿ ಬಡಾವಣೆ, ಶ್ರೀರಾಮಪುರಂ,
ಬೆಂಗಳೂರು- 21.

14. ಶ್ರೀ ಹೆಚ್.ಬಿ.ಉಮೇಶ್, (ಮೃತಿ) ಅವರ ವಾರಸುದಾರರು.

14. 1ಎ. ಶ್ರೀಮತಿ ಹೆಚ್.ಎಸ್.ಹರಿಣಿ, ಕೋಂ: ಲೇಟ್: ಹೆಚ್.ಬಿ.ಉಮೇಶ್,

1ಬಿ. ಶ್ರೀ ಕೀರ್ತಿ ಕಂದಾ, ಬಿನ್: ಲೇಟ್: ಹೆಚ್.ಬಿ.ಉಮೇಶ್,

1ಸಿ. ಶ್ರೀ ಚರಣ್, ಬಿನ್: ಲೇಟ್: ಹೆಚ್.ಬಿ.ಉಮೇಶ್,

ವಿಳಾಸ:
ನಂ.112, ಐ.ಸಿ.ಎಸ್.ಸಿ. ಮೇನ್ ರೋಡ್, ನಾಗರಭಾವಿ, ಬೆಂಗಳೂರು – 72.

15. ಶ್ರೀ ನಾರಾಯಣ ಗೌಡ, ಮೇಜರ್, ಬಿನ್ ಪುಟ್ಟೇಗೌಡ, ಮಾಜಿ ಅಧ್ಯಕ್ಷರು
ಹಾಗೂ ಈಗಿನ ನಿರ್ದೇಶಕರು, ಬಿಡಿ ಅಂಡ್ ಬಿಆರ್‌ಆರ್‌ಡಿಸಿಸಿ ಬ್ಯಾಂಕ್ ನಿ.,
ಕೆರೆಲಾಲುಸಂದ್ರ, ಮಳಗಳು ಪೋಸ್ಟ್, ಕಸಬಾ ಹೋಬಳಿ, ಕನಕಪುರ ತಾಲ್ಲೂಕು,
ಬೆಂಗಳೂರು (ಗ್ರಾ) ಜಿಲ್ಲೆ.

16. ಶ್ರೀ ಎಸ್.ಜಿ.ಚೆಲುವಯ್ಯ, ಮೇಜರ್, ಮಾಜಿ ಉಪಾಧ್ಯಕ್ಷರು,
ಬಿಡಿ ಅಂಡ್ ಬಿಆರ್‌ಆರ್‌ಡಿಸಿಸಿ ಬ್ಯಾಂಕ್ ನಿ., ಸೊಂಡೆಕೊಪ್ಪ,
ಸೊಂಡೆಕೊಪ್ಪ ಪೋಸ್ಟ್, ನೆಲಮಂಗಲ ತಾ: ಬೆಂಗಳೂರು (ಗ್ರಾ) ಜಿಲ್ಲೆ.

17. ಶ್ರೀ ವಿ. ಚನ್ನಪ್ಪ, ಮೇಜರ್, ಮಾಜಿ ನಿರ್ದೇಶಕರು,
ಬಿಡಿ ಅಂಡ್ ಬಿಆರ್‌ಆರ್‌ಡಿಸಿಸಿ ಬ್ಯಾಂಕ್ ನಿ., ನೆರಳಘಟ್ಟ, ಅಣಬೆ ಪೋಸ್ಟ್,
ದೊಡ್ಡಬಳ್ಳಾಪುರ ತಾ: ಬೆಂಗಳೂರು (ಗ್ರಾ) ಜಿಲ್ಲೆ.

18. ಶ್ರೀ ಎ ನರಸಿಂಹಯ್ಯ, ಮೇಜರ್, ಮಾಜಿ ನಿರ್ದೇಶಕರು,
ಬಿಡಿ ಅಂಡ್ ಬಿಆರ್‌ಆರ್‌ಡಿಸಿಸಿ ಬ್ಯಾಂಕ್ ನಿ., ಗಂಟಿಗಾನಹಳ್ಳಿ ಪೋಸ್ಟ್,
ಕುರುವೇಗೆರೆ, ದೊಡ್ಡಬಳ್ಳಾಪುರ ತಾ: ಬೆಂಗಳೂರು (ಗ್ರಾ) ಜಿಲ್ಲೆ.

19. ಶ್ರೀ ಎನ್.ಎಸ್. ನರಸೇಗೌಡ, ಮೇಜರ್, ಮಾಜಿ ನಿರ್ದೇಶಕರು,
ಬಿಡಿ ಅಂಡ್ ಬಿಆರ್‌ಆರ್‌ಡಿಸಿಸಿ ಬ್ಯಾಂಕ್ ನಿ., ನಂ.692, 'ಎ' 8ನೇ ಮೇನ್,
3ನೇ ಸ್ಟೇಜ್, 3ನೇ ಬ್ಲಾಕ್, ಬಸವೇಶ್ವರನಗರ, ಬೆಂಗಳೂರು-79.

20. ಶ್ರೀ ಬಿ.ರಾಮಿ ರೆಡ್ಡಿ, ಮೇಜರ್, ಮಾಜಿ ವ್ಯವಸ್ಥಾಪಕ ನಿರ್ದೇಶಕರು,
ಬಿಡಿ ಅಂಡ್ ಬಿಆರ್‌ಆರ್‌ಡಿಸಿಸಿ ಬ್ಯಾಂಕ್ ನಿ., ನಂ.124, 'ಎ' ಫ್ಲೋರ್,
26ನೇ ಕ್ರಾಸ್, 6ನೇ ಬ್ಲಾಕ್, ಜಯನಗರ, ಬೆಂಗಳೂರು-20.

21. ಶ್ರೀ ಕೆ.ಟಿ.ವೆಂಕಟಸ್ವಾಮಿ, ಮೇಜರ್, ಮಾಜಿ ಶಾಖಾ ವ್ಯವಸ್ಥಾಪಕರು (ನಿವೃತ್ತ)
ಕೇಂದ್ರ ಕಛೇರಿ ಶಾಖೆ, ಬಿಡಿ ಅಂಡ್ ಬಿಆರ್‌ಆರ್‌ಡಿಸಿಸಿ ಬ್ಯಾಂಕ್ ನಿ.,
ನಂ.1013 ಇ, ಮೂಕಾಂಬಿಕ ಎ.ಆರ್. ಅವೆನ್ಯೂ, ನ್ಯೂ ತಿಪ್ಪಸಂದ್ರ,
ಬೆಂಗಳೂರು-75.

22. ಶ್ರೀ ಎಂ.ಹೊನ್ನಲಿಂಗೇಗೌಡ, ಮೇಜರ್, ಮಾಜಿ ಶಾಖಾ ವ್ಯವಸ್ಥಾಪಕರು
ಬಿಡಿ ಅಂಡ್ ಬಿಆರ್‌ಆರ್‌ಡಿಸಿಸಿ ಬ್ಯಾಂಕ್ ನಿ., ಯಶವಂತಪುರ ಶಾಖೆ,
ನಂ. 464, 10ನೇ ಇ ಮೇನ್ ರೋಡ್, 6ನೇ ಬ್ಲಾಕ್, ರಾಜಾಜಿನಗರ,
ಬೆಂಗಳೂರು-10.

23. ಶ್ರೀ ರಾಮಾಂಜನಪ್ಪ, ಮೇಜರ್, ಶಾಖಾ ಸೂಪರ್‌ವೈಸರ್,
(ಅಂಡರ್ ಸಸ್‌ಪೆನ್‌ಷನ್) ಬಿಡಿ ಅಂಡ್ ಬಿಆರ್‌ಆರ್‌ಡಿಸಿಸಿ ಬ್ಯಾಂಕ್ ನಿ.,
ಯಶವಂತಪುರ ಶಾಖೆ, ನಂ. 464, 10ನೇ ಇ ಮೇನ್ ರೋಡ್, 6ನೇ ಬ್ಲಾಕ್,
ರಾಜಾಜಿನಗರ, ಬೆಂಗಳೂರು-10.

24. ಶ್ರೀ ರಾಮಕೃಷ್ಣ, ಮೇಜರ್, ಶಾಖಾ ವ್ಯವಸ್ಥಾಪಕರು,
(ಅಂಡರ್ ಸಸ್ಪೆನ್‌ಷನ್) ಬಿಡಿ ಅಂಡ್ ಬಿಆರ್‌ಆರ್‌ಡಿಸಿಸಿ ಬ್ಯಾಂಕ್ ನಿ.,
(ಪ್ಲಾನಿಂಗ್ & ಡೆವಲಪ್‌ಮೆಂಟ್ ಶಾಖೆ) ನಂ.221, 5ನೇ ಕ್ರಾಸ್, 1ನೇ ಮೇನ್,
1ನೇ ಹಂತ, ಕೆ.ಹೆಚ್.ಬಿ. ಕಾಲೋನಿ., ಬಸವೇಶ್ವರನಗರ, ಬೆಂಗಳೂರು–79.

25. ಶ್ರೀ ರಂಗರಾಜು, ಜೂನಿಯರ್ ಅಸಿಸ್ಟೆಂಟ್,
ಬಿಡಿ ಅಂಡ್ ಬಿಆರ್‌ಆರ್‌ಡಿಸಿಸಿ ಬ್ಯಾಂಕ್ ನಿ., ಯಶವಂತಪುರ ಶಾಖೆ
ನಂ.466, 8ನೇ ಕ್ರಾಸ್, ಮಹಾಲಕ್ಷ್ಮೀ ಲೇಔಟ್, ಬೆಂಗಳೂರು–86.

26. ಶ್ರೀ ಎ.ಸಿ.ಲಕ್ಷ್ಮೀಕಾಂತ, ಕ್ಯಾಶಿಯರ್,
ಬಿಡಿ ಅಂಡ್ ಬಿಆರ್‌ಆರ್‌ಡಿಸಿಸಿ ಬ್ಯಾಂಕ್ ನಿ., ಯಶವಂತಪುರ ಶಾಖೆ
ನಂ.96, ಕಿರಣ್ ನಿಲಯ, 3ನೇ ಮೇನ್ ರೋಡ್, ಸರಸ್ವತಿ ಪುರ, ನಂದಿನಿ
ಲೇಔಟ್, ಬೆಂಗಳೂರು–96.

27. ಶ್ರೀ ಹೆಚ್.ಎಲ್.ಶಿವಕುಮಾರ್, ಬಿನ್ ಲಕ್ಷ್ಮಣಗೌಡ,
ಜೂನಿಯರ್ ಅಸಿಸ್ಟೆಂಟ್, ಬಿಡಿ ಅಂಡ್ ಬಿಆರ್‌ಆರ್‌ಡಿಸಿಸಿ ಬ್ಯಾಂಕ್ ನಿ.,
ಕೇಂದ್ರ ಕಛೇರಿ, ನಂ.32, 3ನೇ ಕ್ರಾಸ್, ವಿಠಲ್‌ನಗರ, ಚಾಮರಾಜಪೇಟೆ,
ಬೆಂಗಳೂರು–18.

28. ಶ್ರೀ ಬಿ.ಎಸ್.ಅನಂತಮೂರ್ತಿ,
ಪ್ರೋ : ಶ್ರೀಲಕ್ಷ್ಮೀ ಸಿಲ್ಕ್ ವೀವಿಂಗ್ ಫ್ಯಾಕ್ಟರಿ, ಶ್ರೀರಾಮಪುರಂ, ಬೆಂಗಳೂರು.

29. ಶ್ರೀ ಬಿ.ಎಸ್.ವೆಂಕಟೇಶ್,
ನಂ.45/1, 11ನೇ ಕ್ರಾಸ್, 7ನೇ ಮೇನ್, ಶ್ರೀರಾಮಪುರಂ, ಬೆಂಗಳೂರು.

30. ಶ್ರೀ ಎಸ್.ಜಿ.ಗುಪ್ತಾ,
ಕೇ : ನವಕರ್ನಾಟಕ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿ., ನಂ.31/2, 1ನೇ
ಮುಖ್ಯ ರಸ್ತೆ, 5ನೇ ಕ್ರಾಸ್, ಮಾರುತಿ ಬಡಾವಣೆ, ಶ್ರೀರಾಮಪುರಂ,
ಬೆಂಗಳೂರು– 21.

"1959ರ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆಯ ಕಲಂ 103 ರ ರೀತ್ಯಾ ಸ್ಥಿರಾಸ್ತಿಯನ್ನು ಆದೇಶಕ್ಕೆ ಮುನ್ನ ಜಫ್ತಿ ಮಾಡುವ ಸಲುವಾಗಿ ತಿಳುವಳಿಕೆ ನೋಟೀಸು"

1. ವಾದಿಯು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ರ ಕಲಂ 70 ರಡಿ ದಾವಾ ಅರ್ಜಿಯನ್ನು ಸಲ್ಲಿಸಿ 1 ರಿಂದ 30ನೇ ಪ್ರತಿವಾದಿಗಳಿಂದ ರೂ.4,36,78,537/– (ರೂ.ನಾಲ್ಕು ಕೋಟಿ ಮೂವತ್ತಾರು ಲಕ್ಷದ ಎಪ್ಪತ್ತೆಂಟು ಸಾವಿರ ಐದು ನೂರ ಮೂವತ್ತೇಳು ಮಾತ್ರ) ಗಳು ಹಾಗೂ ಈ ಮೊತ್ತಕ್ಕೆ ದಿನಾಂಕ:24–05–1996 ರಿಂದ ಸಾಲಿಯಾನ ಶೇ.22% ರಷ್ಟು ಬಡ್ಡಿ ದರದಂತೆ ಅಸಲು ಮತ್ತು ಬಡ್ಡಿ ವಸೂಲಾತಿಗಾಗಿ ದಾವೆಯನ್ನು ಹೂಡಿರುತ್ತಾರೆ. ಈ ದಾವೆಯನ್ನು ವಿಚಾರಣೆಗೆ ತೆಗೆದುಕೊಂಡು, ವಿಚಾರಣೆ ನಡೆಸಲಾಗುತ್ತಿದೆ. ಪ್ರಕರಣದ ವಿಚಾರಣಾ ಹಂತದಲ್ಲಿ ವಾದಿಯು ದಿನಾಂಕ:30–01–2012 ರಂದು ಪ್ರಮಾಣ ಪತ್ರದೊಂದಿಗೆ ಕಲಂ 103 ರಡಿ ಅರ್ಜಿಯನ್ನು ಸಲ್ಲಿಸಿ 16ನೇ ಪ್ರತಿವಾದಿ ಮಕ್ಕಳ ಹೆಸರಿಗೆ ಇರುವ ಸ್ಥಿರಾಸ್ತಿಯನ್ನು ಆದೇಶ ಪೂರ್ವ ಜಫ್ತಿ ಆದೇಶ ಹೊರಡಿಸಬೇಕೆಂದು ಕೋರಿರುತ್ತಾರೆ.

2. ಅರ್ಜಿದಾರರು ಕಲಂ 103 ರ ಅರ್ಜಿ ಜೊತೆ ಸಲ್ಲಿಸಲಾಗಿರುವ ಪ್ರಮಾಣ ಪತ್ರದಲ್ಲಿ 1ನೇ ಪ್ರತಿವಾದಿ ಸಂಘದ ಆಡಳಿತ ಮಂಡಳಿಯನ್ನು ಸಹಕಾರ ಇಲಾಖೆಯು 1994ನೇ ಸಾಲಿನಲ್ಲಿ ರದ್ದು ಮಾಡಿರುತ್ತದೆ. ಈ ಆದೇಶವನ್ನು 1ನೇ ಪ್ರತಿವಾದಿ ಸಂಘವು ಗೌರವ ಉಚ್ಚ ನ್ಯಾಯಾಲಯದಲ್ಲಿ ಪ್ರಶ್ನಿಸಿದ್ದು, ರಿಟ್ ಅಪೀಲು ಸಂ.2218 ಮತ್ತು 2219 C/W/1991 ಹಾಗೂ 1992/1994 ಈ ರಿಟ್ ಅಪೀಲಿನನ್ವಯ ಗೌರವ ನ್ಯಾಯಾಲಯವು ಪ್ರತಿವಾದಿ 15 ರಿಂದ 19 ರವರುಗಳನ್ನು Government Nominées as Ad-Hoc Committee members to from bank administration till holding of new elelction on 02.12.1994 ಆದನ್ವಯ ಸದರಿ ಅಡಾಕ್ ಕಮಿಟಿಯು ದಿನಾಂಕ:13–05–1994 ರವರೆಗೆ ಕಾರ್ಯನಿರ್ವಹಿಸಿರುತ್ತದೆ. ಈ ಅವಧಿಯಲ್ಲಿ 15ನೇ ಪ್ರತಿವಾದಿಯು ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿ ಈ ಅವಧಿಯಲ್ಲಿ ಸಾಲಗಳನ್ನು ಮಂಜೂರು ಮಾಡಿರುತ್ತಾರೆ. ಆದರೆ ಅಡಾಕ್ ಕಮಿಟಿಯು ವಾದಿ ಸಂಘದಲ್ಲಿ ರೂ.4,00,00,000/–ಕ್ಕೆ ದಿನಾಂಕ:15–04–1995 ರಂದು ಅರ್ಜಿ ಸಲ್ಲಿಸಿ ಸಾಲವನ್ನು ಪಡೆದಿರುತ್ತಾರೆ. ಆದರೆ ಈ ಸಾಲ ಮಂಜೂರಾತಿಯಲ್ಲಿ ಅಡಾಕ್ ಕಮಿಟಿಯು ಗೌರವ ಉಚ್ಚ ನ್ಯಾಯಾಲಯದ ಆದೇಶ ಸಂಘದ ಬೈಲಾ ಮತ್ತು ಸಾಲಗಳ ನಿಯಮ ಮತ್ತು ನಿಬಂಧನೆಗಳ ಉಲ್ಲಂಘನೆ ಮಾಡಿ, ಅರ್ಜಿದಾರರ ಬ್ಯಾಂಕಿಗೆ ಸುಳ್ಳು ಮಾಹಿತಿ ನೀಡಿ ಮೋಸ ಮಾಡಿರುತ್ತಾರೆ. ಆದರೆ ಪ್ರಸ್ತುತ 1ನೇ ಪ್ರತಿವಾದಿ ಸಂಘವು ಯಾವ್ಯ ಕಾರ್ಯಚಟುವಟಿಕೆ ನಡೆಸದೇ ಬಂದಂತಹ ಸ್ಥಿತಿಯನ್ನು ತಲುಪಿರುತ್ತದೆ. ಮುಂದೆಯು ಸಹ ಕಾರ್ಯಚಟುವಟಿಕೆಗಳನ್ನು ನಡೆಸುವ ಸಾಧ್ಯತೆ ಇಲ್ಲವೆಂದು [illegible]

